## BUDGET ESTIMATES FOR 1967-68—DEMANDS FOR GRANTS,

### Demands Nos. 4, 9 and 11.

Sri MOHAMMED ALI (Minister for Transport and Tourism).—I beg to move on the recommendation of the Governor :

"That a sum not exceeding Rs. 20,51,000 be granted to the Government to defray the charges which will come in course of payment during the financial year for the period ending 31st day of March 1968, in respect of 'Taxes on Vehicles'."

Mr. SPEAKER.—On the recommendation of the Governor, Motion moved :

"That a sum not exceeding Rs. 20,51,000 be granted to the Governmet to defray the charges which will come in course of payment during the financial year for the period ending 31st Day of March 1968, in respect of 'Taxes on Vehicles'."

Sri S. R. KANTHI (Minister for Law).—I beg to move :

"On the recommendation of the Governor, That a sum not exceeding Rs 42,08,000 be granted to the Government to defray the charges which will come in course of payment during the financial year for the period ending 31st day of March 1968, in respect of 'Parliament, State/Union Territory Legislature'."

I also move on the recommendation of the Governor :

"That a sum not exceeding Rs. 1.27,51,000 be granted to the Government to defray the charges which will come in course of payment during the financial year for the period ending 31st day of March 1968, in respect of 'Administration of Justice'."

Mr. SPEAKER.—Motion moved on the recommendation of the Governor :

"That a sum not exceeding Rs. 42,08,000 be granted to the Government to defray the charges which will come in course of payment during the financial year for the period ending 31st day of March 1968, in respect of 'Parliament, State/Union Territory Legislature'."

And :

"That, a sum not exceeding Rs. 1,27,51,000 be granted to the Government to defray the charges which will come in course of payment during the financial year for the period ending 31st day of March 1963, in respect of 'Administration of Justice."

ಶ್ರೀ ಹೆಚ್. ಸಿದ್ಧವೀರಪ್ಪ (ಹರಿಹರ).—ಸ್ವಾಮಿ, ಈಗ ಮೊದಲು ನ್ಯಾಯಾಂಗ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ರಾಜ್ಯದ ಮಾತ್ರವೇ ಈ ರಾಜ್ಯದಲ್ಲಿ ಸುವ್ಯವಸ್ಥಿತವಾಗಿ ನಿಷ್ಪಕ್ಷಪಾತದಿಂದ ವರ್ತಿಸುತ್ತಿರುವ ನ್ಯಾಯಾಂಗ ಪದ್ಧತಿಯನ್ನು ಪಡೆದಿದ್ದೇವೆ. ಅನೇಕ ಸಾರಿ ನಮಗಾದರೂ ಅನಿಸುತ್ತದೆ ಈ ದೇಶದಲ್ಲಿ ನ್ಯಾಯ ಏನಾದರೂ ದೊರೆಯಬೇಕಾದರೆ

ಧರ್ಮದಿಂದ ಯಾವ ತೀರ್ಪುಗಳು ದೊರೆಯಬೇಕಾದರೂ ನಿಮ್ಮಿಂದ ದೊರೆಯುವುದಿಲ್ಲ. ನಮಗೆ ಏನೂ ಬೇಕಾದರೂ ಕೆಂಪು ಬಿಲ್ಡಿಂಗ್‌ಗೆ ಹೋಗಿ ನ್ಯಾಯ ದೊರಕಿಸಿಕೊಳ್ಳಬೇಕಾಗಿದೆಯೇ ಹೊರತು ನಿಮ್ಮಿಂದ ನ್ಯಾಯ ಸಿಕ್ಕಿಲ್ಲ. 3-4 ವರ್ಷಗಳಿಂದ ಪರಂಪರೆಯಾಗಿ ಬರುತ್ತಿರುವ ರಿಟ್ ಪಿಟಿಷನ್ನ್ನು ನೋಡಿದರೆ ಸಾಕು ನೀವು ಹೇಳುತ್ತಾ ಇರುವುದು, ಮಾಡುತ್ತಾ ಇರುವುದು, ಅನೇಕ ಸಾರಿ ಜನಗಳಿಗೆ ನ್ಯಾಯ ದೊರಕಿಸಿರುವುದು ನೋಡಿದ್ದೇವೆ. ನಮ್ಮ ಸುದೈವದಿಂದ ನ್ಯಾಯಾಂಗ ನಮ್ಮ ರಾಜ್ಯದಲ್ಲಿ ಸುವ್ಯವಸ್ಥಿತ ರೀತಿಯಿಂದ ಕೆಲಸ ಮಾಡುತ್ತಾ ಇದೆ. ಅದಕ್ಕಾಗಿ ನಮ್ಮವರಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಸರ್ಕಾರಕ್ಕೆ ಅನೇಕ ಸಾರಿ ನ್ಯಾಯಾಂಗಕ್ಕೂ ಕೂಡ ವಿರುದ್ಧವಾಗಿ ಹೋಗತಕ್ಕ ಧೀಮಾರಿತನ, ಹಟತನ, ದಡ್ಡತನ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಸಾರಿ ನಿಮ್ಮ ಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಕೇಸು ಹಾಕಿದ್ದಾರೆ. ಇದು ಒಂದೇ ಸಾಕು. ನ್ಯಾಯ ಸ್ಥಾನದಲ್ಲಿ ನಿಮ್ಮ ಆಡಳಿತ ನ್ಯಾಯಸಮ್ಮತವಾಗಿಲ್ಲ, ಇದು ಧರ್ಮದ ಆಡಳಿತ ಅಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಮೊನ್ನೆ 23 ಜನ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕವರಿಗೆ ಏನೇನೋ ಸನ್ನಿವೇಶದಿಂದ ನೌಕರಿ ಕೊಟ್ಟುಬಿಟ್ಟಿರಿ. ಆಮೇಲೆ ಅದು ನ್ಯಾಯಾಂಗಕ್ಕೆ ಹೋಗಿ ಕಂಟೆಂಪ್ಟ್ ಆಫ್ ಕೋರ್ಟ್ ನೋಟೀಸ್ ಕೊಟ್ಟರು. ಚೀಫ್ ಸೆಕ್ರೆಟರಿ ಇತ್ಯಾದಿ ಇತ್ಯಾದಿ ಎಲ್ಲರೂ ಕೋರ್ಟಿನ ಮುಂದೆ ನಿಲ್ಲಬೇಕಾದ ಸಂದರ್ಭ ಬಂತು. ಯಾರೋ ಮಾಡಿದ ಪಾಪ ಸನ್ಯಾಸಿಯ ತಲೆಮೇಲೆ ಎನ್ನುವುದನ್ನು ತೋರಿಸಿಕೊಟ್ಟಿರಿ. ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ನ್ಯಾಯಾಂಗ ನಮ್ಮನ್ನು ರಕ್ಷಣೆ ಮಾಡುತ್ತಾ ಇದೆ. ಅದಕ್ಕಾಗಿ ತುಂಬಾ ಅಭಾರವಾಗಿದ್ದೇವೆ. ಇನ್ನೊಂದು ವಿಷಯ ಹೇಳುತ್ತೇನೆ. ಹೆಚ್ಚು ಕಾಲ ಇಲ್ಲದೇ ಇರುವುದರಿಂದ ಸವಿಸ್ತಾರವಾಗಿ ಹೇಳುವುದಕ್ಕಾಗುವುದಿಲ್ಲ. ಎಲೆಕ್ಷನ್ ವಿಚಾರವಾಗಿ ಲಕ್ಷಾಂತರ ಗಟ್ಟಲೆ ಹಣವನ್ನು ಈ ಸಾರಿ ಕೊಟ್ಟಿದ್ದೀರಿ. ನೀವು ಚುನಾವಣೆಯ ಸಮಯದಲ್ಲಿ ನೀವು ಆಡಿದ ಆಟ ಎಷ್ಟು ಪುಸ್ತಕ ಬರೆದರೂ ಸಾಲದು ಎಂದು ಮನಸಾರೆ ಹೇಳುತ್ತೇನೆ. ಚುನಾವಣಾ ಕಮಿಷನ್ನಿನವರು ಡೆಲ್ಲಿಯಲ್ಲಿ ಕೂತುಕೊಂಡು ಹುಕುಂ ಸಾದರು ಮಾಡಿದರು. ಚುನಾವಣೆ ನಡೆಯುವುದಕ್ಕೆ ಮುನ್ನ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ನಿಂದಾ ಯಾರನ್ನೂ ಇಲ್ಲಿಂದ ಟ್ರಾನ್ಸ್‌ಫರ್ ಮಾಡಕೂಡದು ನಿಮ್ಮ ಹಸ್ತಕ್ಷೇಪ ಇರಕೂಡದು ಎಂದು. ಚುನಾವಣೆ ನಡೆಯುವುದಕ್ಕೆ 15 ದಿವಸ ಒಂದು ತಿಂಗಳು ಮುಂಚೆಯೂ ಸಹ ನಿಮಗೆ ಬೇಕು ಬೇಕಾದ ಅಧಿಕಾರಿಗಳನ್ನು ತೆಗೆಯುವುದು ಹಾಕುವುದು ಮಾಡಿ ಆ ಪಾಪ ನಿಮ್ಮ ತಲೆಯ ಮೇಲೆ ಕಟ್ಟಿಕೊಂಡಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಎರಡು ಸುವ್ಯವಸ್ಥಿತವಾದ ಪಕ್ಷಗಳು ಇರಲೇಬೇಕು. ಎರಡು ಸುವ್ಯವಸ್ಥಿತ ಪಕ್ಷಗಳು ಇಲ್ಲದೇ ಹೋದರೆ ರಾಜ್ಯಭಾರ ನಡೆಯುವುದಿಲ್ಲ. ಇವೊತ್ತಿನ ದಿವಸ ನೀವು ಅಲ್ಲಿ ಇರಬಹುದು ಸಂತೋಷ. ಎಷ್ಟು ವರ್ಷವಾದರೂ ಬೇಡ ಎಂದು ಹೇಳುವುದಿಲ್ಲ. ಸರಿಯಾದ ರೀತಿಯಿಂದ ಆಡಳಿತವನ್ನು ಮಾಡಿಕೊಂಡು ಹೋದರೆ, ಸುವ್ಯವಸ್ಥಿತವನ್ನು ತರಬೇಕಾದರೆ ಪ್ರಜಾಪ್ರಭುತ್ವದಲ್ಲಿ ನಿಷ್ಪಕ್ಷಪಾತದಿಂದ ಚುನಾವಣೆ ನಡೆಯಲಿಕ್ಕೆ ಅವಕಾಶ ಕೊಡಬೇಕು. ನೀವು ಹಸ್ತಕ್ಷೇಪ ಮಾಡಿ, ಮಾಡಬಾರದನ್ನು ಮಾಡಿ ಯಾವ ರೀತಿಯಾಗಿ ಅನ್ಯಾಯಗಳನ್ನು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತಾ ಹೋದರೆ ಗಂಟೆಗಟ್ಟಲೆಯಾದರೂ ಸಾಲದು. ಈ ಸಮಯದಲ್ಲಿ ಅನ್ಯಾಯ ಮಾಡಿದ್ದೀರಿ. ಅದು ಅಕ್ಷಮ್ಯ, ಅಪರಾಧ. ಅದು ಜಾತಿವಾದ ದುಡ್ಡಿನ ವಾದ ಎನ್ನುವುದನ್ನು ನಿರ್ವಿವಾದವಾಗಿ ಹೇಳಬಹುದು. ನಮ್ಮನ್ನೆಲ್ಲಾ ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡಿದಿರಿ. ನಮ್ಮ ಪೈಕಿ ಯಾರಾದರೂ ಗೆದ್ದು ಬಂದಿದ್ದರೆ, ನೀವು ತುಳಿಯಲಿಕ್ಕೆ ಪ್ರಯತ್ನ ಮಾಡಿದ್ದನ್ನು ತಪ್ಪಿಸಿಕೊಂಡು ಬಂದು ನಿಮ್ಮಲ್ಲಿ ನಾಲ್ವರಿಗೆ ಸರಿಸಮಾನರಾಗಿ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇಡೀ ಸರ್ಕಾರದ ಮೆಷಿನರಿಯನ್ನು ಹಿಂದೆ ಇಟ್ಟುಕೊಂಡು ಚುನಾವಣೆ ನಡೆಸಿದಿರಿ. ಆದುದರಿಂದ ವಿರೋಧ ಪಕ್ಷ ಸಂಖ್ಯೆಯಲ್ಲಿ ಕಡಿಮೆ ಇದ್ದರೂ ತೂಕದಲ್ಲಿ ಕಡಿಮೆ ಇಲ್ಲ ಎನ್ನುವುದನ್ನು ಮರೆಯಬಾರದು.

[MR. DEPUTY SPEAKER in the chair]

ಇನ್ನೊಂದು ಸಾರಿಗೆ ಮಂತ್ರಿಗಳ ಖಾತೆಗೆ ಸಂಬಂಧಪಟ್ಟ ವಿಚಾರವನ್ನು ಹೇಳುತ್ತೇನೆ. ಮೊದಲು ನಮ್ಮಲ್ಲಿ ಖಾಸಗಿ ಬಸ್ಸುಗಳಿದ್ದುವು. ಈ ದಿವಸವೇನಾಗಿವೆಯೆಂದರೆ ಒಂಭತ್ತು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಿದ್ದೀರಿ. ಸಾಮಾನ್ಯವಾಗಿ ಅಲ್ಲಿಗೆ ಎಷ್ಟು ಬಸ್ಸುಗಳನ್ನು ಹಾಕಿದ್ದೀರಿ ಎಂದರೆ ಸುಮಾರು 2,041. 1966ನೆಯ ಇಸವಿಯ ಅಕ್ಟೋಬರುವರೆಗೆ ನಮ್ಮ ಸಿಬ್ಬಂದಿ ಇರುವುದು 15,512. ಬಂಡವಾಳ ಇದನ್ನು ಸರಿದೂಗಿಸುವುದಕ್ಕೆ 15 ಕೋಟಿ 20 ಲಕ್ಷ ರೂಪಾಯಿ. ಇಷ್ಟು ಖರ್ಚು ಮಾಡಿರಬೇಕಾದರೆ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡೋಣ. ಮುಂಬಯಿ ಕರ್ಣಾಟಕದಲ್ಲಿ ಮೊದಲೇ ರಾಷ್ಟ್ರೀಕರಣವಾಗಿತ್ತು. ಬಹಳ ಸುವ್ಯವಸ್ಥಿತವಾಗಿ ಅಲ್ಲಿ ನಡೆಯುತ್ತಿತ್ತೆಂದು ನಾನು ಕೇಳಿದ್ದೇನೆ. ಹೈದರಾಬಾದು ಪ್ರದೇಶದಲ್ಲಿ ಕೂಡ ರಾಷ್ಟ್ರೀಕರಣವಿತ್ತು, ಹಳೇ ಮೈಸೂರು

ಪ್ರದೇಶದಲ್ಲಿ 1952 ರಿಂದ ಪ್ರಾರಂಭವಾಯಿತು. ಇಲ್ಲಿ ಒಂದು ಹೆಲ್ತಿ ಪ್ರಿನ್ಸಿಪಲ್ ಪ್ರಕಾರ ರಾಷ್ಟ್ರೀಕರಣ ಮಾಡಿದೆವು, ಮೊದಲು ಹೆದ್ದಾರಿಗಳನ್ನು ತೆಗೆದುಕೊಳ್ಳಬೇಕು ಮತ್ತು ಎಲ್ಲಿ ಜನ ಸಂಖ್ಯೆ ಮತ್ತು ಸಾರಿಗೆ ಹೆಚ್ಚು ಇದೆ ಅಂಥ ಭಾಗದಲ್ಲಿ ರಾಷ್ಟ್ರೀಕರಣ ಮೊದಲು ಮಾಡಬೇಕೆಂದು ತೀರ್ಮಾನ ಮಾಡಿದೆವು. ಕೆಲವು ಕಡೆ ಖಾಸಗಿಯವರಿಗೆ ಬಿಟ್ಟು ನಾವು ಬಹುಶಃ ಒಳ್ಳೆಯ ಭಾಗವನ್ನು ತೆಗೆದುಕೊಂಡೆವು. ಖಾಸಗಿಯವರೂ ಕೂಡ ಕೆಲವರು ಇತರ ಭಾಗಗಳಲ್ಲಿ ಬಸ್ಸುಗಳನ್ನು ಇಟ್ಟು ಅದರಿಂದ ಜೀವನ ಮಾಡುತ್ತಿದ್ದರು. ಮೈಸೂರು ರಾಜ್ಯದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಎಲ್ಲಾ ಭಾಗಗಳಲ್ಲೂ ರಾಷ್ಟ್ರೀಕರಣ ಮಾಡುವುದಾಗಿ ಸರಕಾರದವರು ಹೇಳಿದ್ದರು. ಆದರೆ ಆ ಯೋಜನೆ ಮುಗಿಯುವುದರೊಳಗಾಗಿ ಹೇಳಿದಂತೆ ಮಾಡುವುದಕ್ಕೆ ಸರಕಾರದ ಕೈಲಾಗಲಿಲ್ಲ. ಕೆಲವು ಕಾಲವಾದರೂ ಜನರ ಬೇಡಿಕೆ ಇರಬೇಕು, ಆಮೇಲೆ ತೆಗೆದುಕೊಳ್ಳುವುದು ಉತ್ತಮ ಎಂದು ಹಾಗೆ ಮಾಡಿರಬಹುದು. ದೊಡ್ಡ ದೊಡ್ಡ ನಗರಗಳಲ್ಲಿ ಹೇಗೆ ರಾಷ್ಟ್ರೀಕರಣ ಮಾಡಿದಿರೋ ಹಾಗೆಯೇ ಇತರ ಕಡೆಗಳಲ್ಲೂ ಮಾಡಿದ್ದರೆ ಆಕಾಶ ಭೂಮಿ ತಲೆಕೆಳಗಾಗುತ್ತಿರಲಿಲ್ಲ. ಇದೇನು ತೋರಿಸುತ್ತದೆಯೆಂದರೆ ಯಾವ ಕೆಲಸವನ್ನೂ ಸರಕಾರ ಹೇಳಿದಂತೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು. ಇದನ್ನು ಮಾಡುವಾಗ ದಿಟ್ಟ ಹೆಜ್ಜೆಯನ್ನು ಭದ್ರವಾಗಿ ಇಟ್ಟರೆ ದೇಶಕ್ಕೆ ಕ್ಷೇಮ, ನಷ್ಟ ತಪ್ಪಬಹುದು. ಈ ಸಂಬಂಧದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. 1947ನೆಯ ಇಸವಿಯಿಂದ ರಾಷ್ಟ್ರೀಕರಣ ಮೊದಲು ಮಾಡಲಾಯಿತು. 1948ರಲ್ಲಿ ದಿವಂಗತರಾದ ಶ್ರೀ ಟಿ. ಮರಿಯಪ್ಪನವರು ಹಳೆಯ ಮೈಸೂರಿನಲ್ಲಿ ರಾಷ್ಟ್ರೀಕರಣವನ್ನು ಪ್ರಾರಂಭಿಸಿದರು, ಆಗ ನಾನೂ ಸಹ ಐದು ವರ್ಷ ನಮ್ಮ ರಸ್ತೆ ಸಾರಿಗೆ ಇಲಾಖೆ ನೋಡಿಕೊಳ್ಳುತ್ತಿದ್ದೆ. ಆಗ ಎಲ್ಲರಿಗೂ ಬಹಳ ಮೆಚ್ಚಿಗೆಯಾಗುವಂತೆ ಕೆಲಸ ನಡೆಯಿತು. ಸುಮಾರು 320 ಮೈಲಿಗಳ ರಾಷ್ಟ್ರೀಕರಣ ಮಾಡಿ ಅದರಿಂದ ಶೇಕಡಾ 34 ನಿವ್ವಳ ಲಾಭ ಬರುತ್ತಿತ್ತು, 130 ಬಸ್ಸುಗಳಿದ್ದುವು. ನಿಮ್ಮ ಹಾಗೆ ಡಿಪ್ರಿಸಿಯೇಷನ್, ಓವರ್—ಡಿಪ್ರೀಸಿಯೇಷನ್ ಎಲ್ಲಾ ತೆಗೆದು ಕೆಲಸಗಾರರಿಗೆ ಹೊಟ್ಟೆ ತುಂಬ ಸಂಬಳ ಕೊಟ್ಟು ಒಂದು ವರ್ಷಕ್ಕೆ ನೆಟ್ 34·6 ಪರ್ಸೆಂಟ್ ಉಳಿಯಿತು. ಆಗಿದ್ದ ಜನರಲ್ ಮ್ಯಾನೇಜರು ಈಗಲೂ ಸರ್ವಿಸ್ಸಿನಲ್ಲಿದ್ದಾರೆ. ಉನ್ನತ ಅಧಿಕಾರದಲ್ಲಿದ್ದಾರೆ. ಅವರನ್ನು ಕೇಳಬಹುದು. ಅದೇ ಈ ದಿವಸ ಪರಿಸ್ಥಿತಿ ಏನಾಗಿದೆ? ಇಷ್ಟು ಹಣ ಹಾಕಿ ಮಾಡಿರುವುದೇನು? ಸ್ಥಿಮಿತವಾಗಿಯಾದರೂ ಮುಂದುವರೆಯುತ್ತಿದ್ದೀರಾ ಅಂದರೆ ಅದೂ ಇಲ್ಲ. ಇದಕ್ಕೆ ಒಂದು ಉದಾಹರಣೆ ಹೇಳಬಹುದು. ಬೆಂಗಳೂರಿನಿಂದ ಬೆಳಗಾಂವರೆಗೆ ರಾಷ್ಟ್ರೀಕರಣವಾಗಿದೆ. ಆದರೆ ಚಿತ್ರದುರ್ಗದಿಂದ ಹರಿಹರದವರೆಗೆ ರಾಷ್ಟ್ರೀಕರಣದ ಬಸ್ಸಿಲ್ಲ. ನಾನು ಮಂತ್ರಿಯಾಗಿದ್ದಾಗ ಮೂರು ತಿಂಗಳು ಅವಕಾಶ ಕೊಡಿ, ಬೇರೆ ರಸ್ತೆಗಳನ್ನು ನೋಡಿಕೊಳ್ಳುತ್ತೇವೆಂದು ಕೇಳಿದರು. ಆಗ ಬೇರೆ ಕಡೆ 10 ಮೈಲಿ ರಸ್ತೆ ಕೇಳಿದರೆ 20 ಮೈಲಿ ಕೊಡುತ್ತಿದ್ದೆವು. 1956ನೆ ಇಸವಿ ಡಿಸೆಂಬರು ಅಖೈರು·ವರೆಗೆ ಚಿತ್ರದುರ್ಗದಿಂದ ಹರಿಹರದವರೆಗೆ ರಾಷ್ಟ್ರೀಕರಣ ಮಾಡುವುದನ್ನು ಮೂರು ತಿಂಗಳ ಕಾಲ ತಡೆಹಿಡಿಯಲಾಯಿತು. ಆದರೆ ಈಗ 1967ನೆಯ ಇಸವಿ ಜೂನ್ ಅಖೈರಾದರೂ ಕೇವಲ 48 ಮೈಲಿ ರಾಷ್ಟ್ರೀಕರಣವಾಗದಿರುವುದು ಆಶ್ಚರ್ಯಕರವಾಗಿದೆ. ಹೊಸದಾಗಿ ಈಗ ನಾಲ್ಕು ರಸ್ತೆ ತೆಗೆದುಕೊಂಡಿದ್ದಾರೆ, 1961ರಲ್ಲಿ ಹಾಸನ, ಮೈಸೂರು, ಆನೇಕಲ್ ತೆಗೆದುಕೊಂಡರು. ಬಳ್ಳಾರಿ ತೆಗೆದುಕೊಂಡಾಗ ಆ ವಿಚಾರ ಸುಪ್ರೀಂ ಕೋರ್ಟಿಗೆ ಹೋಯಿತು, ಅಲ್ಲಿ ತೀರ್ಮಾನವಾದಮೇಲೆ ಅದನ್ನೂ ತೆಗೆದುಕೊಂಡರು. ಇಷ್ಟೆಲ್ಲಾ ಆದರೂ ಇಷ್ಟು ಕಾಲವಾದರೂ ಕೂಡ ಚಿತ್ರದುರ್ಗವನ್ನೇಕೆ ತೆಗೆದುಕೊಳ್ಳಲಿಲ್ಲ? ಇದು ಧರ್ಮವೇ? ನಿಮಗೆ ಬೇಕಾದ ಕಡೆ ತೆಗೆದುಕೊಳ್ಳುವುದು ಬೇಡದ ಕಡೆ ಬಿಡುವುದು ಸರಿಯೇ? ಚಿತ್ರದುರ್ಗದಲ್ಲಿ ನಿಮಗೆ ಬೇಕಾದವರಿರುವಾಗಲಾದರೂ ಕೂಡ ಏಕೆ ತೆಗೆದುಕೊಳ್ಳಲಿಲ್ಲ? ಇದು ಯಾವ ಧರ್ಮ? ಈ ರೀತಿ ಮಾಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೇ? ಇದರಿಂದ ನಿಮ್ಮ ಭಟ್ಟಂಗಿಗಳಿಗೆ ಅನುಕೂಲ ಮಾಡಿಕೊಟ್ಟಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಮಳವಳ್ಳಿ).—ಭಟ್ಟಂಗಿ ಎಂದರೇನು?

ಶ್ರೀ ಎಚ್. ಸಿದ್ದವೀರಪ್ಪ.—ಬಹು ಪರಾಕು ಹೇಳುವವರು, ಹೊಗಳು ಭಟರು.

ಶ್ರೀ ಅಲ್ಲಂ ಕರಿಬಸಪ್ಪ (ಕುರುಗೋಡು).—ಈಗ ಮಹಾರಾಜರೇ ಇಲ್ಲ. ಮಾನ್ಯ ಸದಸ್ಯರು ಹೇಳುವುದಕ್ಕೆ ನನ್ನ ಆಕ್ಷೇಪವಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗಿರುವ ವಿಧಾನದಲ್ಲಿ ನಾಲ್ಕು ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿ ಚಿತ್ರದುರ್ಗ ಒಂದನ್ನು ಮಾಡದೆ ಇರುವುದನ್ನು ನೋಡಿದರೆ ಈ ವಿಚಾರದಲ್ಲಿ ಎಷ್ಟುಮಟ್ಟಿಗೆ

ಅನ್ಯಾಯ ಮಾಡುತ್ತಿದ್ದೀರಿ ಎಂಬುದು ವ್ಯಕ್ತವಾಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರು ಮುದ್ರಿಸಿರುವ ಒಂದು ಪುಸ್ತಕವಿದೆ, ಅದರಲ್ಲಿ ವರ್ಕಿಂಗ್ ರಿಸಲ್ಟ್ಸ್ ಆಫ್ ದಿ ಥರ್ಡ್ ಫೈವ್ ಇಯರ್ ಪ್ಲಾನ್ ಬಗ್ಗೆ 1965-66ನೆಯ ಸಾಲಿಗೆ ಸಂಬಂಧಪಟ್ಟ ಅಂಕಿ ಅಂಶಗಳು 22ನೆಯ ಪುಟದಲ್ಲೇ ಇವೆ ಎನ್ನುವುದನ್ನು ತಿಳಿಸುತ್ತೇನೆ. ಅದರಲ್ಲಿ ಪರ್ಸೆಂಟೇಜ್ ಆಫ್ ಪ್ರಾಫಿಟ್ಸ್ ಟು ಕ್ಯಾಪಿಟಲ್ ಕಾಂಟ್ರಿಬ್ಯೂಷನ್ಸ್ ಈ ರೀತಿ ಇದೆ: 1960-61ರಲ್ಲಿ ಸೇಕಡ 10·9, 1961-62ರಲ್ಲಿ ಸೇಕಡ 6·7, 1962-63ರಲ್ಲಿ 5·6, 1963-64ರಲ್ಲಿ 4·8, 1964-65ರಲ್ಲಿ 4·4, 1965-66ರಲ್ಲಿ 4·2 ಇದೇನು ತೋರಿಸುತ್ತದೆಯೆಂದರೆ ನಾವು ಎಷ್ಟು ಹಣ ಹಾಕುತ್ತೇವೆಯೋ ಅದಕ್ಕೆ ಸರಿಯಾಗಿ ಉತ್ಪತ್ತಿ ಬರುತ್ತಿಲ್ಲ. ಇದನ್ನು ಗಮನಿಸಿ ಉತ್ಪತ್ತಿ ಬರುವಂತೆ ಸರಿಯಾದ ವ್ಯವಸ್ಥೆ ಮಾಡಬೇಕು. ಇನ್ನು ಮುಂದೆ ರಾಷ್ಟ್ರೀಕರಣವನ್ನು ಹೆಚ್ಚಾಗಿ ಮಾಡುವುದಕ್ಕಿಂತ ಈಗ ಮಾಡಿರುವುದನ್ನು ಸರಿಯಾದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಿ, ಅಲ್ಲಲ್ಲಿ ತೊಂದರೆ, ನ್ಯೂನತೆ ಇರುವುದನ್ನು ಸರಿಪಡಿಸಿ, ಯಾವ ರಸ್ತೆಯಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಬೇಕು ಅದನ್ನು ಗಮನಿಸಿ ಅದಕ್ಕೆ ಸರಿಯಾದ ಏರ್ಪಾಡು ಮುಂತಾದ್ದನ್ನು ಮಾಡಿ. ನಾನಾಗಲೆ ಚಿತ್ರದುರ್ಗ—ಹರಿಹರದ ವಿಷಯ ಹೇಳಿದ್ದೇನೆ, ಧರ್ಮದ ದೃಷ್ಟಿಯಿಟ್ಟು—ಜೂನ್ ಅಖ್ಯೆರೊಳಗಾದರೂ ರಾಷ್ಟ್ರೀಕರಣ ಮಾಡಿ.

ಇನ್ನೊಂದು ಇದು ಪಬ್ಲಿಕ್ ಯುಟಿಲಿಟಿ ಅಂಡರ್‌ಟೇಕಿಂಗ್. ಅನೇಕ ಸಾರಿಗೆ ಬಸ್ಸುಗಳು ಈಗ ಓಡುತ್ತಿವೆ, ನನಗೆ ಸ್ವಂತ ವಾಹನವಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನೀವು ವಾಹನ ಕೇಳಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೇಳಿದ್ದೆ, ಕೊಡುವುದಕ್ಕಾಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

> "Since you are not a Member of the Legislature, since you are not a Government Officer, you are not entitled to a vehicle."

ಎಂದು ತಿಳಿಸಿದ್ದಾರೆ. ಅದನ್ನಿಟ್ಟುಕೊಂಡಿದ್ದೇನೆ. ಅದು ಸ್ವಂತ ವಿಚಾರವಾದುದರಿಂದ ಅದನು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅವರು ಕೊಡದಿದ್ದರೆ ಸಂಕಟವಿಲ್ಲ. ನಾನು ಅನೇಕ ಸಾರಿ ಸರಕಾರಿ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದೇನೆ, ಒಂದು ಸಾರಿ ಇಲ್ಲಿಂದ ದಾವಣಗೆರೆಗೆ ಹೋಗುವಾಗ ಲಕ್ಷುರಿ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಆಗ ಎದುರಿಗೆ ಒಂದು ಲಾರಿ ಬರುತ್ತಿತ್ತು, ಬಸ್ ಗಂಟೆಗೆ 40 ಮೈಲಿ ವೇಗದಲ್ಲಿ ಹೋಗುತ್ತಿತ್ತು. ಸುಮಾರು ಎಂಟು ಅಡಿ ದೂರದಲ್ಲಿ ಲಾರಿ ಇದ್ದಾಗ ಇನ್ನೇನು ಲಾರಿಗೂ ಬಸ್ಸಿಗೂ ಹೊಡೆಯುವ ಸಂಭವವಿದ್ದಾಗ ಡ್ರೈವರ್ ಧೈರ್ಯಮಾಡಿ ಬಸ್ಸನ್ನು ಪಕ್ಕದ ಹೊಲದಲ್ಲಿ ತಿರುಗಿಸಿದನು.

2-30 P.M.

ಏನಪ್ಪಾ, ಏಕೆ ಹೀಗೆ ಮಾಡುತ್ತೀ ಎಂದು ಕೇಳಿದರೆ, ಅವನು ಸ್ವಾಮಿ, ಸಾಯಬೇಕೆಂದು ಯಾರಿಗಾದರೂ ಇಷ್ಟವಿದ್ದರೆ, ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ಬಸ್‌ಗಳಲ್ಲಿ ಬರಬೇಕು; ಯಾರಾದರೂ ಆತ್ಮಹತ್ಯೆ ಮಾಡಬೇಕೆಂದು ಇಚ್ಛಿಸಿದರೆ ಇಲ್ಲಿಗೆ ಸುಲಭವಾಗಿ ಬರಬಹುದು; ಎಂದು ಹೇಳಿದ. ಏನಯ್ಯಾ, ಹೀಗೆ ಹೇಳುತ್ತೀ ಅಂದರೆ— ಅವನು "ಸ್ವಾಮಿ, ನಾನು ಹೊರಡುವ ಮುಂಚೆನೇ ಹೇಳಿದೆ, ಈ ಬಸ್ ಕೊಡಬೇಡಿ, ಇದರ ಬ್ರೇಕ್ ಸರಿಯಾಗಿಲ್ಲ ಎಂದರೂ, 'ಇದನ್ನು ನೀನು ತೆಗೆದುಕೊಂಡು ಹೋಗು, ಇಲ್ಲವಿದ್ದರೆ ನಿನ್ನನ್ನು ಸಸ್ಪೆಂಡ್ ಮಾಡುತ್ತೇವೆ' ಎಂದು ಹೆದರಿಸಿದ್ದರಿಂದ, ಅನಿವಾರ್ಯವಾಗಿ ಇದನ್ನು ತೆಗೆದುಕೊಂಡು ಬರಬೇಕಾಯಿತು;" ಎಂದನು. ನಾನು ಆಗಲೇ ಈ ವಿಚಾರದಲ್ಲಿ ಮಂತ್ರಿ ಆಗಿದ್ದ ಶ್ರೀ ದೇವರಾಜ ಅರಸರಿಗೆ ಕಾಗದ ಬರೆದಿದ್ದೇನೆ. ಇವತ್ತು ಏನಾದರೂ ಸರ್ಕಾರಿ ಕಾರುಗಳಲ್ಲಿ ಓಡಾಡಬಹುದು, ನಾಳೆ ಮಂತ್ರಿಪದವಿಯಿಂದ ನಿವೃತ್ತರಾದಮೇಲೆ ನನ್ನ ಹಾಗೆ ಬಸ್ಸಿನಲ್ಲಿ ಓಡಾಡುವ ಸಂದರ್ಭ ಬರುತ್ತದೆ. ಆದ್ದರಿಂದ ಇಂಥ ಕಷ್ಟವನ್ನು ಕೊಡಬೇಡಿ ಎಂದು ಹೇಳಿದ್ದೇನೆ. ಇದು ಏನು ತೋರಿಸುತ್ತದೆ ಎಂದರೆ, ಎಲ್ಲಿ ಏನು ತೊಂದರೆ ಇದೆ, ಇದು ಜನಗಳ ಜೀವನಕ್ಕೆ ಸೇರಿದ್ದು, ಆದರಲ್ಲಿ ಇವರ ಜವಾಬ್ದಾರಿಯೇನೂ ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಇಡೀ ರಾಷ್ಟ್ರದಲ್ಲಿ ನಮ್ಮಷ್ಟು ಟ್ಯಾಕ್ಸ್ ಯಾರೂ ಕೊಡುತ್ತಾ ಇಲ್ಲ. ಅದೇ ರೀತಿ ರೇಟುಗಳೂ ಜಾಸ್ತಿಯಾಗಿವೆ. ಆದರೆ ಸರ್ವಿಸ್ ಕಂಡಿಶನ್ಸ್ ಏಕೆ ಸರಿಯಾಗಿ ಇಟ್ಟುಕೊಳ್ಳುವುದಿಲ್ಲ? ಇದಕ್ಕೆ ಇವರು ಪ್ರತಿ ದಿನವೂ ಒಂದು ರಿಪೋರ್ಟ್ ತರಿಸಿಕೊಂಡು ಒಂದೊಂದು ರೂಟಿನಲ್ಲಿ ಎಷ್ಟೆಷ್ಟು ಬಸ್ಸುಗಳು ಓಡುತ್ತಿವೆ, ಎಷ್ಟು ನಿಂತುಹೋಗಿವೆ, ಎಷ್ಟು ಕೆಟ್ಟುಹೋಗಿವೆ ಎಂಬುದನ್ನು ನೋಡಬೇಕು.

(ಶ್ರೀ ಎಚ್. ಸಿದ್ಧವೀರಪ್ಪ)

ಒಟ್ಟು ಎರಡು ಸಾವಿರ ಬಸ್ಸುಗಳು ಓಡಾಡುತ್ತಿವೆ. ಅದಕ್ಕೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಸರ್ವಿಸ್ ಕಂಡಿಶನ್ಸ್ ಸರಿಯಾಗಿ ಮಾಡದಿದ್ದರೆ, ಬಹಳ ತೊಂದರೆಯಾಗುತ್ತದೆ. ಎಷ್ಟೋ ಸಾರಿ ಹೆಣ್ಣುಮಕ್ಕಳು, ಸಣ್ಣ ಸಣ್ಣ ಮಕ್ಕಳನ್ನು ಹಿಡಿದುಕೊಂಡು ರಸ್ತೆಯಲ್ಲಿ ನಿಂತಿರತಕ್ಕ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಸರ್ವಿಸ್ ಕಂಡಿಶನನ್ನು ಸರಿಯಾಗಿ ಮಾಡಿ. ನಿಮಗೆ ಮಾಡುವುದಕ್ಕೆ ಆಗದಿದ್ದರೆ, ಸರಿಯಾಗಿ ಮಾಡುವವರಿಗಾದರೂ ಅವಕಾಶ ಮಾಡಿಕೊಡಿ. ಅದನ್ನು ಬಿಟ್ಟು ನೀವು ಮಾಡುವುದಿಲ್ಲ, ಇನ್ನೊಬ್ಬರಿಗೆ ಕೊಡುವುದೂ ಇಲ್ಲ. ಹಳೆಯ ಬಾಂಬೇ ಕರ್ಣಾಟಕದೊಳಗೆ ಬಹಳ ಹಳೆಯ ಬಸ್‌ಗಳಿವೆ. ಅದಕ್ಕೆ ಲಟಾರಿ ಬಸ್‌ಗಳು ಎಂದು ಹೇಳುತ್ತಾರೆ. ಬಹುಶಃ ಹೊಸ ಬಸ್ ಕೊಟ್ಟರೆ, ಅವರಿಗೆ ಹತ್ತಲಿಕ್ಕೆ ಆಗುವುದಿಲ್ಲವೋ ಏನೋ; ಆ ಹಳೆಯ ಬಸ್‌ಗಳನ್ನು ತೆಗೆದು ಅಲ್ಲಿ ಎಲ್ಲಾ ಹೊಸ ಬಸ್‌ಗಳನ್ನು ಹಾಕಬೇಕೆಂದು ಹೇಳುತ್ತೇನೆ. ಮತ್ತು ನೀವು ಹೇಳಬಹುದು, ಆಪರೇಶನ್ ಕಾಸ್ಟ್ ಜಾಸ್ತಿಯಾಗುತ್ತದೆಂದು. ರಾ ಮೆಟೀರಿಯಲ್ಸ್, ಟೈಯರ್ಸ್, ಟ್ಯೂಬ್ಸ್, ಸ್ಪೇರ್ ಪಾರ್ಟ್ಸ್ ಮೊದಲಾದುವುಗಳ ಬೆಲೆ ಗಗನಕ್ಕೆ ಏರಿರುವುದರಿಂದ ಜಾಸ್ತಿಯಾಗುತ್ತದೆ ಎಂದು ಹೇಳಬಹುದು. ಅದರಲ್ಲೂ ಕಡಿಮೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೀವು ಸ್ವಲ್ಪ ನೋಡಬೇಕು; ಮತ್ತು ನಿಮ್ಮ ಸರ್ವಿಸ್‌ನವರೆಲ್ಲಾ ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕು. ಮೊನ್ನೆ ತಾನೆ ಪ್ರಶ್ನೆ ಕೇಳಿದೆ--ದಾವಣಗೆರೆಯಲ್ಲಿ ಏನು ಮಾಡುತ್ತಿದ್ದೀರಿ! ಸುಮ್ಮನೆ ನಿಷ್ಕಾರಣವಾಗಿ, ಅನಾವಶ್ಯಕವಾಗಿ ಅಲ್ಲಿ ಸರ್ವಿಸ್ ಸ್ಟೇಶನ್ ಮಾಡಬೇಡಿ. ದಾವಣಗೆರೆಯಲ್ಲಿ ಅಗತ್ಯವೇ ಇಲ್ಲ ಅದರಮ್ಮ. ಹರಿಹರದಲ್ಲಿ ಆದರೆ ಒಂದು ಜಂಕ್ಷನ್ ಆಗುತ್ತದೆ; ಮತ್ತು ಚಿತ್ರದುರ್ಗದಲ್ಲಿ ಬಹಳ ದಿವಸದಿಂದ ಒಂದು ವರ್ಕ್‌ಷಾಪ್ ನಡೆಯುತ್ತಿದೆ. ಈಗ ದಾವಣಗೆರೆಯಲ್ಲಿ ಇದಕ್ಕೆ 25-30 ಲಕ್ಷ ರೂಪಾಯಿ ಖರ್ಚು ಮಾಡಿ ಸುಮ್ಮನೆ ಸರ್ಕಾರದ ದುಡ್ಡನ್ನು ಖರ್ಚು ಮಾಡುವುದು ಏಕೆ! ಇದನ್ನು ಆ ರೀತಿ ಮಾಡಬಾರದು ಎಂದು ನನ್ನ ಆಶಯ.

ಇನ್ನೊಂದು ವಿಷಯ. ಪ್ರೈವೇಟ್ ಆಪರೇಟರ್ಸ್ ಇದ್ದಾರೆ. ಇವರು ಈಗ ಒಂದು ಹೊಸ ನಮೂನೆಯ ರಾಜರು. ಮಾನ್ಯ ಮಿತ್ರರಾದ ಅಲ್ಲಂ ಕರಿಬಸಪ್ಪನವರಿಗೆ ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ; ಮತ್ತು ತಪ್ಪು ತಿಳಿದುಕೊಂಡು ಹೇಳುತ್ತಾ ಇಲ್ಲ. ಈಗ ಏನೆಂದರೆ, ಕೆಲವರು ಇದ್ದಾರೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಬ್ಬ ಮಹನೀಯ ಇದ್ದಾನೆ. ಅವನಿಗೆ 10 ಬಸ್ ರೂಟ್ಸ್ ಇವೆ. ಹತ್ತು ರೂಟ್ಸ್‌ಗಳಲ್ಲಿ ಪ್ರತಿದಿನ 1820 ಮೈಲಿಗಳಷ್ಟು ಬಸ್‌ಗಳು ಓಡಾಡುತ್ತಿವೆ. ಚಿತ್ರದುರ್ಗದಿಂದ ಅಜ್ಜಂಪುರಕ್ಕೆ—ವಯಾ—ಭದ್ರಾವತಿ—250 ಮೈಲು—ಎರಡು ಬಸ್‌ಗಳು ಓಡಾಡುತ್ತಿವೆ. ಚಿತ್ರದುರ್ಗದಿಂದ ಧರ್ಮಪುರ—250 ಮೈಲು; ಹೋಗುವುದು, ಬರುವುದು—ಚಿತ್ರದುರ್ಗದಿಂದ ತಿರುಪತಿಗೆ—250 ಮೈಲು, ಎರಡು ಬಸ್‌ಗಳು. ಮಧುಗಿರಿಯಿಂದ ದಾವಣಗೆರೆ—160 ಮೈಲು ಹೋಗುವುದು ಮತ್ತು ಬರುವುದು—320 ಮೈಲುಗಳು. ಚಿತ್ರದುರ್ಗದಿಂದ ಮಂಗಳೂರಿಗೆ—200 ಮೈಲು, ಹೋಗುವುದು ಮತ್ತು ಬರುವುದು—400 ಮೈಲುಗಳು. ಹೀಗೆ ಒಟ್ಟು 1820 ಮೈಲು ಓಡಾಡುತ್ತಿವೆ. ಅವರಿಗೆ ಟೈಮಿಂಗ್ಸ್ ಹೇಗೆ ಇದೆ ಎಂದರೆ—ಹೈದರಾಬಾದ್ ನಿಜಾಮರು ಹೊರಟರೆ ಹೇಗೆ ಇರುತ್ತದೋ, ಆ ರೀತಿ ಈ ಮಹನೀಯರ ಬಸ್ ಹೋಗತಕ್ಕ ಕಾಲದಲ್ಲಿ ಯಾರ ಬಸ್ಸಿಗೂ ಪ್ರಯಾರಿಟಿ ಇಲ್ಲ. ಇವರಿಗೆ ಒಂದು ದಿನಕ್ಕೆ ನೆಟ್ ಇನ್‌ಕಂ ಒಂದೂವರೆ ಸಾವಿರ ರೂಪಾಯಿ. ಹೀಗೆ ನಾನು ಒಂದು ದಿವಸ ಮಂಗಳೂರು ಲೈನಿನ ಬಸ್‌ನಲ್ಲಿ ಬರುತ್ತಿದ್ದೆ. ಈ ಬಸ್ಸಿನಲ್ಲಿ ಪ್ರಯಾಣಮಾಡುವುದರಿಂದಲೂ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು. ಒಬ್ಬರು ಹೇಳಿದರು—ನಾವು 34 ಜನ ಅಪ್ಲಿಕೇಷನ್ ಹಾಕಿದ್ದೆವು. ಆದರೆ ಒಬ್ಬರ ತಕರಾರೂ ಕೇಳಲಿಲ್ಲ. ಅವರಿಗೆ ಕೊಟ್ಟರು ಎಂದರು. ನಾನು ಕೇಳಿದೆ ಏಕೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಯವರೇ ಅವರಿಗೆ ಹೇಳಿರಿ ಎಂದೆ. ಅವರ ಹೆಸರನ್ನು ನಾನು ಇಲ್ಲಿ ಹೇಳುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ನನ್ನ ಹತ್ತಿರ ಯಾರೂ ಹೇಳಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಬೇಕಾದರೆ, ಹೆಸರನ್ನು ತಿಳಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಹೇಳಿ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಏನಾಗಿದೆ ಎಂದರೆ, ನಿಮ್ಮದು ಏನು ತೋರಿಸುತ್ತದೆ ಎಂದರೆ, ಕೆಲವರನ್ನು ಹೊಸದಾಗಿ ಸಾಹುಕಾರರನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನವ ಚರಿತ್ರೆಯಾಗಿ 5,500 ವರ್ಷವಾಯಿತು, ಸ್ವಾತಂತ್ರ್ಯ ಬಂದು 20 ವರ್ಷವಾಯಿತು. ಈ ಕಾಲದಲ್ಲಿ ಹುಟ್ಟಿಕೊಂಡಿರುವಷ್ಟು ಶ್ರೀಮಂತರು ಯಾವ ಕಾಲದಲ್ಲೂ ಆಗಲಿಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ತಮ್ಮ ಯಾವ ನೀತಿ ಯಾವ ಧರ್ಮವೆಂದು ನೋಡಿ. ಈಗ ಅನೇಕ ಜನರು ಇದರಿಂದ ಪಾಪರರಾಗಿದ್ದಾರೆ. ಒಂದೆರಡು ಬಸ್ ಇಟ್ಟು ದಿವಾಳಿಯಾಗಿದ್ದಾರೆ. ಇಂಥ ಅನ್ಯಾಯ ಮಾಡತಕ್ಕದ್ದು ಒಳ್ಳೆಯದಲ್ಲ. ಒಂದು ನ್ಯಾಯ ದೃಷ್ಟಿಯಿಂದ, ಒಂದು ಧರ್ಮ ದೃಷ್ಟಿಯಿಂದ ಹೋಗಿ. ಈ ಇಲಾಖೆಯ ಮಂತ್ರಿಗಳು ಬಹಳ ಒಳ್ಳೆಯವರು ಎಂದು ನಾನು ಕೇಳಿದ್ದೇನೆ. ಇಂಥ ಅನ್ಯಾಯಗಳನ್ನು ತಡೆಯುವುದಕ್ಕೆ ಪ್ರಯತ್ನ ನೀವು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರೀನಾರಾಯಣ (ಶಿವಮೊಗ್ಗ).—ಸನ್ಮಾನ್ಯ ಸಭಾಪತಿಯವರೆ, ನಮ್ಮ ಮುಂದೆ ಮಂಡಿಸಿರತಕ್ಕಂತಹ ಈ ಒಂದು ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ, ನಾಲ್ಕು ಮಾತುಗಳನ್ನು ಹೇಳುತ್ತೇನೆ. ಈ ವಿಚಾರದಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದಂತಹ ಎರಡು ಮಾತುಗಳನ್ನು ಮಾತ್ರ ನಾನು ಒಪ್ಪುತ್ತೇನೆ. ಈಗ ನಮ್ಮ ಮೈಸೂರು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ, ಅದರಲ್ಲೂ ನಮ್ಮ ಹಳೆಯ ಮೈಸೂರಿನಲ್ಲಿ ಮುಕ್ಕಾಲು ಭಾಗಗಳಲ್ಲಿ ಸರ್ಕಾರಿ ಸರ್ವಿಸಸ್ ನಡೆಯುತ್ತಿದೆ. ಆದರೆ, ಕೆಲವು ಕಡೆಗಳಲ್ಲಿ ಯಾವ ಕಾರಣದಿಂದಲೋ, ಏನೋ, ಬಸ್ಸುಗಳು ಅಲ್ಲಲ್ಲಿ ಕೆಟ್ಟು ನಿಲ್ಲತಕ್ಕ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಬಹುಶಃ ಹಣದ ಅಭಾವ ದಿಂದಲೋ, ಅಥವಾ ಕೆಲಸಗಾರರ ನ್ಯೂನತೆಯಿಂದಲೋ ಎಂದು ಕಾಣುತ್ತದೆ. ಅವುಗಳು ಎಷ್ಟು ಸಮರ್ಪಕವಾಗಿ ನಡೆಯಬೇಕೋ, ಅಷ್ಟು ಸಮರ್ಪಕವಾಗಿ ನಡೆಯುತ್ತಾ ಇಲ್ಲ. ಅದಕ್ಕೆ ನನ್ನ ಸಲಹೆ ಎಂದರೆ, ಈಗ ತೆಗೆದುಕೊಂಡಿರತಕ್ಕ ರೂಟ್‌ಗಳನ್ನು ನಾವು ಚೆನ್ನಾಗಿ ನಡೆಸಿ, ಯಾವ ನ್ಯೂನತೆಗಳೂ ಇಲ್ಲವೆ ಇರುವಾಗ ಮುಂದೆ ಸ್ವಲ್ಪ ನಿಧಾನವಾಗಿ ಬೇರೆ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡುವುದು ಒಳ್ಳೆಯದು. ಇದೇ ವಿಚಾರವನ್ನು ಮಾನ್ಯ ಶ್ರೀ ಸಿದ್ಧವೀರಪ್ಪನವರು ಸಹ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಹಣದ ಅನುಕೂಲನಾದಾಗ ಬೇರೆ ರೂಟ್‌ಗಳನ್ನು ರಾಷ್ಟ್ರೀಕರಣ ಮಾಡುವುದನ್ನು ನಾನು ಸಮರ್ಥಿಸುತ್ತೇನೆ. ಈಗಲೇ ಅಸಮರ್ಪಕ ರೀತಿಯಲ್ಲಿರು ವಾಗ, ಇನ್ನೂ ಹೆಚ್ಚಿನ ಆಶೆಯಿಂದ ಉಳಿದ ರೂಟ್‌ಗಳನ್ನು ತೆಗೆದುಕೊಳ್ಳುತ್ತಾ ಹೋದರೆ, ಮುಂದೆ ತೊಂದರೆಯಾಗಬಹುದೋ ಏನೋ ಎಂದು ನನ್ನ ಮನಸ್ಸಿಗೆ ತೋರುತ್ತದೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಸ್ವಲ್ಪ ನಿಧಾನವಾಗಿ ಮುಂದುವರೆಯಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ತಾವು ರಾಷ್ಟ್ರೀಕರಣ ಮಾಡುವುದು ನಿಲ್ಲಿಸಬೇಕು ಎಂದು ಹೇಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ನಾವು ರಾಷ್ಟ್ರೀಕರಣ ಮಾಡುವ ದಾರಿಯಲ್ಲೇ ಹೋಗುತ್ತಿದ್ದೇವೆ. ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ತಮ್ಮಷ್ಟೇ ಆಶೆ ನನಗೂ ಇದೆ. ಈಗಿರುವ ರೂಟ್‌ಗಳನ್ನು ಚೆನ್ನಾಗಿ ನಡೆಸೋಣ ಎನ್ನುವ ದೃಷ್ಟಿಯಿಂದ ತಮ್ಮ ಮುಂದೆ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಸಿದ್ಧವೀರಪ್ಪನವರ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನೆ. ಇನ್ನು ಒಂದು ಮುಖ್ಯವಾದ ವಿಚಾರವನ್ನು ಹಳೆಯದಾದರೂ ಸಹ ಮತ್ತೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಬೆಂಗಳೂರು ಟ್ರಾನ್ಸ್ ಪೋರ್ಟ್ ಕಂಪೆನಿಯಲ್ಲಿ 780 ಸಣ್ಣ ಷೇರ್ ಹೋಲ್ಡರ್‌ಗಳು ಇದ್ದರು. ಇದು ಒಂದು ಸಂಸ್ಥೆಯಾಗಿತ್ತು. ಇದನ್ನು ಸರ್ಕಾರದವರು 1956ರಲ್ಲಿ ಅಂದರೆ 1-10-1956ರಲ್ಲಿ ತಮ್ಮ ವಶಕ್ಕೆ ತೆಗೆದುಕೊಂಡರು. ಆ ವಿಚಾರದಲ್ಲಿ ಸ್ವಲ್ಪ ಅನ್ಯಾಯ ನಡೆದಿದೆ. ಆ ಕಂಪನಿಯಲ್ಲಿ ಸಣ್ಣ ಷೇರ್ ಹೋಲ್ಡರ್ಸ್ ಏನಿದ್ದರು, ಅವರಿಗೆ ತೊಂದರೆಯಾಯಿತು. ಇದು ಮಾನ್ಯ ಸಿದ್ಧವೀರಪ್ಪನವರಿಗೂ ಗೊತ್ತಿದೆ. ಅವರು ಮಂತ್ರಿಗಳಾಗಿದ್ದಾಗ ಈ ರಾಷ್ಟ್ರೀಕರಣ ನಡೆಯಿತು. ಕೋಲಾರದ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಿದಾಗ ಆ ಕಂಪನಿಯವರಿಗೆ ಅನುಕೂಲ ವಾಯಿತು. ಅದೇ ಈ ಟ್ರಾನ್ಸ್‌ಪೋರ್ಟ್ ಕಂಪನಿಯನ್ನು ರಾಷ್ಟ್ರೀಕರಣ ಮಾಡುವಾಗ ಈ ಸಣ್ಣ ಷೇರ್ ಹೋಲ್ಡರ್ಸ್‌ಗಳಿಗೆ ತೊಂದರೆಯಾಯಿತು. ಆ ವಿಚಾರವನ್ನು ತಮ್ಮ ಮುಂದೆ ಹೇಳುವುದಕ್ಕೆ ನಿಂತಿದ್ದೇನೆ. ಟ್ರಾನ್ಸ್‌ಪೋರ್ಟ್ ಕಂಪನಿಯವರು ಟ್ಯಾಕ್ಸೇಷನ್ ಅಡ್ವಾನ್ಸ್‌ನ್ನು ಕಟ್ಟಿದ್ದರು. ಅಂದರೆ 1,85,000 ರೂಪಾಯಿಗಳನ್ನು ಇನ್‌ಕಮ್ ಟ್ಯಾಕ್ಸ್ ಇಲಾಖೆಗೆ ಕಟ್ಟಿದ್ದರು. ಇವರು ಈ ಹಣವನ್ನು ಕಟ್ಟಿದ ಮೇಲೆ ಸರ್ಕಾರದವರು ಈ ಟ್ರಾನ್ಸ್‌ಪೋರ್ಟ್ ಕಂಪನಿಯನ್ನು ರಾಷ್ಟ್ರೀಕರಣ ಮಾಡಿದರು. ಇನ್‌ಕಮ್ ಟ್ಯಾಕ್ಸ್ ಇಲಾಖೆಯವರು ಆ ವರ್ಷದಲ್ಲಿ ಟ್ಯಾಕ್ಸ್ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ 1,85,000 ರೂಪಾಯಿಗಳಲ್ಲಿ 49 ಸಾವಿರ ರೂಪಾಯಿಗಳನ್ನು ವಾಪಸ್ ಸರ್ಕಾರಕ್ಕೆ ಕೊಟ್ಟರು. ಏಕೆಂದರೆ, ಟ್ರಾನ್ಸ್‌ಪೋರ್ಟ್ ಕಂಪನಿ ಸರ್ಕಾರದ ಅಧೀನದಲ್ಲಿತ್ತು. ನ್ಯಾಯವಾಗಿ ಈ ಹಣ ಆ ಕಂಪನಿಯ ಷೇರ್ ಹೋಲ್ಡರ್ಸ್‌ಗೆ ಬರಬೇಕಾಗಿತ್ತು. ಕಂಪನಿಯವರೇ ಹಣವನ್ನು ಕಟ್ಟಿದ್ದು. ಆದ್ದರಿಂದ ಆ 49 ಸಾವಿರ ರೂಪಾಯಿಗಳನ್ನು 780 ಜನ ಷೇರ್ ಹೋಲ್ಡರ್ಸ್ ಏನಿದ್ದಾರೆ ಅವರಿಗೆ ಕೊಡುವಂತೆ ಏರ್ಪಾಡಾಗಬೇಕು ಎನ್ನತಕ್ಕದ್ದು ನನ್ನ ಅಭಿಪ್ರಾಯ. ಈ ವಿಚಾರದಲ್ಲಿ ಸರ್ಕಾರದವರು

(ಶ್ರೀ ಎ. ಆರ್. ಬದರೀನಾರಾಯಣ್)

ತಜ್ಞರ ಸಲಹೆ ತೆಗೆದುಕೊಂಡು ನ್ಯಾಯ ದೊರಕಿಸಿಕೊಡುತ್ತಾರೆಂದು ಆ ಷೇರ್ ಹೋಲ್ಡರ್ಸ್‌ಗಳು ನಿರೀಕ್ಷೆ ಮಾಡುತ್ತಿದ್ದಾರೆ. 1-4-1953 ರಿಂದ 30-9-1956 ರವರೆಗೆ ಸರ್ಕಾರಕ್ಕೆ ಟ್ರಾನ್ಸ್‌ಪೋರ್ಟ್ ವಿಭಾಗದಲ್ಲಿ ಲಾಭವಾಗಿದ್ದರೂ, ಈ ಕಂಪೆನಿಯನ್ನು ರಾಷ್ಟ್ರೀಕರಣ ಮಾಡಿಕೊಂಡ ಮೇಲೆ 3 ಲಕ್ಷದ 43 ಸಾವಿರ ರೂಪಾಯಿಗಳ ನಷ್ಟ ಬಂತು. ಈ ನಷ್ಟವನ್ನು ಈ ಷೇರ್ ಹೋಲ್ಡರ್ಸ್‌ಗಳಿಗೆ ಕೊಡಲಿಲ್ಲ. ಸರ್ಕಾರದವರು 2 ಲಕ್ಷದ 22 ಸಾವಿರ ರೂಪಾಯಿಗಳನ್ನು ಇನ್‌ಕಮ್ ಟ್ಯಾಕ್ಸ್ ಇಲಾಖೆಗೆ ಕೊಡಬೇಕಾಗಿತ್ತು. ಈ ಷೇರ್ ಹೋಲ್ಡರ್ಸ್‌ಗಳಿಗೆ 15 ಲಕ್ಷ ರೂಪಾಯಿಗಳ ಕಾಂಪೆನ್‌ಸೇಷನ್ ಕೊಡುವಾಗ 2 ಲಕ್ಷದ 22 ಸಾವಿರ ರೂಪಾಯಿಗಳನ್ನು ಕಳೆದು ಹಂಚಿದ್ದಾರೆ. ಒಂದು ಷೇರ್‌ಗೆ 26 ರೂಪಾಯಿಗಳಿದ್ದು, 1953ರಲ್ಲಿ ಕಂಪೆನಿ ರಾಷ್ಟ್ರೀಕರಣವಾಗುತ್ತದೆಂದು ತಿಳಿದು 18-19 ರೂಪಾಯಿಗಳಿಗೆ ಇಳಿಯಿತು. ಸರ್ಕಾರದವರು ಸರಾಸರಿ 10 ವರ್ಷದ ಲೆಕ್ಕ ತೆಗೆದುಕೊಂಡು ಷೇರ್‌ಗೆ 26 ರೂಪಾಯಿಗಳಿಗೆ ಬದಲು ಹದಿನಾರೂವರೆ ರೂಪಾಯಿಗಳಂತೆ ಕೊಡಬೇಕೆಂದು ತೀರ್ಮಾನ ಮಾಡಿದರು. ಇದೂ ಒಂದು ಅನ್ಯಾಯವಾಗಿದೆ. ಸರ್ಕಾರದವರು ಈ ಕಂಪನಿಯನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿಕೊಂಡು ಬರುವಾಗ, ಷೇರ್‌ಗಳ ಬೆಲೆ ಕಡಿಮೆಯಾಗುತ್ತಾ ಬಂದು ಕೊನೆಗೆ ಹದಿನಾಲ್ಕೂವರೆಗೆ ಇಳಿಯಿತು. ಸರ್ಕಾರದವರು ಹದಿನಾಲ್ಕೂವರೆಯಂತೆ ಷೇರ್ ಹೋಲ್ಡರ್ಸ್‌ಗಳಿಗೆ ಹಂಚಿದ್ದಾರೆ. ಈ ಕಂಪನಿಯಲ್ಲಿ ಯಾರೂ ಬಂಡವಾಳದಾರರು ಇರಲಿಲ್ಲ. ಎಲ್ಲರೂ ಸಣ್ಣ ಸಣ್ಣ ಷೇರ್ ಹೋಲ್ಡರ್‌ಗಳಾಗಿದ್ದಾರೆ. ಅವರಿಗೆಲ್ಲಾ ಬಹಳ ಅನ್ಯಾಯವಾಗಿದೆಯೆಂದು ನನ್ನ ಗಮನಕ್ಕೆ ಬಂದಿರುವುದರಿಂದ ಈ ಸಭೆಯಲ್ಲಿ ಹೇಳುವುದಕ್ಕೆ ನಿಂತಿದ್ದೇನೆ. 2,22,000 ರೂಪಾಯಿಗಳು ಮತ್ತು ಇನ್‌ಕಮ್ ಟ್ಯಾಕ್ಸ್ ಮೂಲಕ ತೆಗೆದುಕೊಂಡಿರುವ 49 ಸಾವಿರ ರೂಪಾಯಿಗಳನ್ನು ಈ ಷೇರ್ ಹೋಲ್ಡರ್‌ಗಳಿಗೆ ವಾಪಸ್ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಈ ರೀತಿ ಕೊಟ್ಟರೆ ಪ್ರತಿ ಷೇರ್‌ಗೆ 5-6 ರೂಪಾಯಿಗಳು ಜಾಸ್ತಿ ಬರಬಹುದೆಂದು ಕಾಣುತ್ತದೆ. ಈ ಕಂಪನಿಯನ್ನು ಸರ್ಕಾರದವರು ತೆಗೆದುಕೊಂಡ ಮೇಲೆ 7 ಲಕ್ಷ ರೂಪಾಯಿಗಳು ಲಾಭ ಬಂದಿದೆ. ಆದ್ದರಿಂದ ಈ ವಿಚಾರದಲ್ಲಿ ಗಮನಕೊಟ್ಟು, ಪುನರ್‌ವಿಮರ್ಶೆಮಾಡಿ ಷೇರ್ ಹೋಲ್ಡರ್‌ಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರದ ಮುಂದೆ ಇಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಅವರು 'ಅರಿಕೆ ಮಾಡಿಕೊಂಡಿದ್ದಾರೆ. ಪರಿಶೀಲನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ತಾವುಗಳು ದೂರಾಲೋಚನೆ ಮಾಡಿ ಈ ಸಣ್ಣಪುಟ್ಟ ಷೇರ್ ಹೋಲ್ಡರ್‌ಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಪುನರ್ವಿಮರ್ಶೆಮಾಡಿ ಸರಿಯಾದಂಥ ನ್ಯಾಯ ದೊರಕಿಸಿಕೊಡಬೇಕು. ಕೋಲಾರದ ಚಿನ್ನದ ಗಣಿಯನ್ನು ತಾವು ತೆಗೆದುಕೊಂಡಾಗ ಆ ಕಂಪನಿಯವರಿಗೆ ಇವರಿಗಿಂತ ಎರಡರಷ್ಟು ಅನುಕೂಲವಾಯಿತು. ಅದೇ ಅನುಕೂಲವನ್ನು ಇವರಿಗೂ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ನನಗೆ ಈ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಸಭಾಪತಿಗಳೇ, ಈ ನ್ಯಾಯ ನಿರ್ವಹಣ್ ಬೇಡಿಕೆ ಬಗ್ಗೆ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಗಳನ್ನು ಈ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಬಗ್ಗೆ ಮಾತನಾಡುತ್ತಾ ಹೇಳಿದರು, ಸರ್ಕಾರದವರ ಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಪ್ರೊಸೀಡಿಂಗ್ಸ್ ಸಹ ನಡೆದಿದೆ ಎಂದು. ಎಷ್ಟೋ ಸಂದರ್ಭಗಳಲ್ಲಿ ಸರ್ಕಾರದವರು ಕೌಂಟರ್ ಅಫಿಡವಿಟ್ ಸಹ ಹಾಕದೆ ಎಕ್ಸ್ ಪಾರ್ಟಿ ತೀರ್ಮಾನವಾಗಿಹೋಗಿದೆ. ನ್ಯಾಯ ಇಲಾಖೆಯಲ್ಲಿ ಇಷ್ಟೊಂದು ಅಧಿಕಾರಿಗಳನ್ನು ಸರ್ಕಾರದವರು ಇಟ್ಟುಕೊಂಡು ಸಹ ಏತಕ್ಕೋಸ್ಕರವಾಗಿ ಅನೇಕ ಮೊಕದ್ದಮೆಗಳಲ್ಲಿ ಕೌಂಟರ್ ಅಫಿಡವಿಟ್ ಹಾಕುವುದಕ್ಕಾಗಲಿಲ್ಲ ಎನ್ನುವುದು ಗೊತ್ತಾಗುವುದಿಲ್ಲ. ನ್ಯಾಯ ಇಲಾಖೆಯಲ್ಲಿ ಮುಖ್ಯವಾಗಿ ಒಂದು ರಿವ್ಯೂ ಸೆಲ್ ಇರಬೇಕಾದ ಅಗತ್ಯವಿದೆ. ಹೈಕೋರ್ಟಿನಲ್ಲಿ ತೀರ್ಮಾನವಾಗುವ ಜಡ್ಜ್‌ಮೆಂಟ್‌ಗಳನ್ನು ನ್ಯಾಯ ಇಲಾಖೆಯವರು ತರಿಸಿಕೊಂಡು, ಅವರು ಯಾವ ಯಾವ ಅಬ್ಸರ್‌ವೇಷನ್ ಮಾಡಿದ್ದಾರೆ ಎನ್ನುವುದನ್ನು ರಿವ್ಯೂ ಸೆಲ್‌ನಲ್ಲಿ ಪರಿಶೀಲಿಸಬೇಕು. ಇದನ್ನು ಮಾಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಎರಡನೆಯದಾಗಿ ಲಾ ಇಲಾಖೆಯಲ್ಲಿ ಒಂದು ರಿವ್ಯೂ ಸೆಲ್ಲಿನ ಅಗತ್ಯ ಇದೆ ಎಂಬುಕ್ಕೆ ಉದಾಹರಣೆಯಾಗಿ ಒಂದು ಟೆನನ್ಸಿ ಆಕ್ಟನ್ನೇ ತೆಗೆದುಕೊಳ್ಳಿ. ಇದರಲ್ಲಿರುವಂತೆ ಒಂದು ಸಾಲನ ಅಥವಾ ಎರಡು ಸಾಲನ ಗುತ್ತಿಗೆ ರೈತ ಕೊಡದೇ ಹೋದರೆ ಅಂತಹ ರೈತನನ್ನು ಎವಿಕ್ಟ್ ಮಾಡಬೇಕೆಂದು 1951 ನೇ ಇಸವಿಯಲ್ಲೇ ಒಂದು ಕಾನೂನನ್ನು ಮಾಡಿದರು. ಆದರಂತೆ ಎಷ್ಟೋ ಕಡೆಗಳಲ್ಲಿ

ಎವಿಕ್ಷನ್ ಕೇಸುಗಳಾಗಿ ಕೋರ್ಟುಗಳಲ್ಲಿ ಡಿಕ್ರೀ ಆಗಿದ್ದರೂ ಸಹ ಗುತ್ತಿಗೆ ಆರೇಳು ವರ್ಷಗಳಷ್ಟು ಬಾಕಿ ಇದ್ದರೂ ಕೂಡ ಜಮೀನನ್ನು ಬಿಡಿಸುವುದಕ್ಕೆ ಆಗುತ್ತಿಲ್ಲ ಇಲ್ಲವೇ ಗುತ್ತಿಗೆಯನ್ನೂ ವಸೂಲು ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ ಎರಡು ಮೂರು ಎಕರೆಗಳಷ್ಟು ಇರುವ ವಿಧವೆಯರು ಹಾಗೂ ಇನ್ನಿತರ ಸಣ್ಣ ಸಣ್ಣ ಹಿಡುವಳಿದಾರರು ಬಹಳ ತೊಂದರೆಗೆ ಸಿಕ್ಕಿ ಕಷ್ಟಪಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಟೆನೆನ್ಸಿ ಕೇಸುಗಳನ್ನು ನಡೆಸಲು ಇನ್ನೂ ನ್ಯಾಯಾಲಯಗಳೇ ಆಗಿಲ್ಲ. ಆರೇಳು ವರ್ಷಗಳಿಂದ ಎಷ್ಟೋ ಕಡೆಗಳಲ್ಲಿ ಟೆನನ್ಸಿ ಕೇಸುಗಳು ಹಾಕಿಲ್ಲ ಮತ್ತು ನಡೆಯಲೂ ಅವಕಾಶಗಳಿಲ್ಲ. ಇದರಿಂದ ಎಷ್ಟೋ ಕಡೆಗಳಲ್ಲಿ ಜಮೀನುಗಳನ್ನು ಪಡೆಯಲು ಅವಕಾಶ ಸಿಕ್ಕಿಲ್ಲ ಮತ್ತು ರೈತರಿಂದ ಗುತ್ತಿಗೆಯನ್ನೂ ವಸೂಲು ಮಾಡಲೂ ಅವಕಾಶವಿಲ್ಲ. ಈ ಮಧ್ಯೆ ಲ್ಯಾಂಡ್ ರಿಫಾರಂಸ್ ಆಕ್ಟ್ ಕೂಡ ಬಂದಿದೆ. ಇದು ಯಾವ ಕಾಲಕ್ಕೆ ಜಾರಿಗೆ ಬರುತ್ತೋ ನನಗಂತೂ ತಿಳಿಯದು. ಈಗಿರುವ ಟೆನೆನ್ಸಿ ಕೇಸುಗಳು ಯಾವತ್ತಿಗೆ ಮುಗಿಯುತ್ತೊ ನಮಗಂತೂ ಹೇಳಲಿಕ್ಕೆ ಸಾಧ್ಯವಿಲ್ಲ. ಇಷ್ಟು ಹೊತ್ತಿಗೆ ಎಷ್ಟೋ ಘಟಗಳೂ ಬಿದ್ದು ಹೋಗುತ್ತವೆ. ಈಗ ಸುಮಾರು ಎರಡು ಮೂರು ಸಾವಿರ ಟೆನೆನ್ಸಿ ಕೇಸುಗಳು ಶ್ರೀರಂಗಪಟ್ಟಣ ಮತ್ತು ನಂಜನಗೂಡಿನಲ್ಲಿ ಇನ್ನೂ ತೀರ್ಮಾನವಾಗದೇ ಹಾಗೇ ಉಳಿದಿವೆ. ಇದನ್ನು ಸರಿಯಾಗಿ ಕ್ಲಾಸಿಫೈ ಮಾಡಲು ಯಾವ ಅಧಿಕಾರಿಗಳನ್ನೂ ಇನ್ನೂ ನೇಮಿಸಿಲ್ಲ. ಟ್ರಿಬ್ಯುನಲ್‌ಗಳನ್ನು ಮಾಡಿಲ್ಲ. ಹೀಗಾದರೆ ನ್ಯಾಯ ನಿರ್ವಹಣೆ ಹೇಗೆ ಮಾಡಬೇಕು ಎನ್ನುವುದನ್ನು ನಮ್ಮ ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಕಾಣುತ್ತದೆ. ಇಲ್ಲಿಗೆ ನ್ಯಾಯಾಧಿಕಾರಿಗಳನ್ನು ಮಾನ್ಯ ಸಚಿವರು ಯಾವಾಗ ನೇಮಕ ಮಾಡುತ್ತಾರೋ ನನಗಂತೂ ಗೊತ್ತಾಗುತ್ತಿಲ್ಲ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ನಾನು ಸರಕಾರದ ಮುಂದೆ ಇಡಲು ಇಷ್ಟಪಡುತ್ತೇನೆ. ನಮ್ಮ ಲಾ ಇಲಾಖೆಯಲ್ಲಿ ಒಂದು ರೆವ್ಯೂ ಸೆಲ್ ಎಂದು ಮಾಡಬೇಕು. ಆ ಸೆಲ್‌ನವರು ಬಾರ್ ಅಸೋಸಿಯೇಷನ್ ಮೂಲಕ ನಾವು ಮಾಡಿರುವ ಲೆಜಿಸ್ಲೇಷನ್ ಯಾವ ರೀತಿಯಾಗಿ ಕೆಲಸ ಮಾಡುತ್ತಿವೆ ಮತ್ತು ಲಾಯರುಗಳಿಗೆ ಅದರಿಂದ ಏನೇನು ಕುಂದುಕೊರತೆಗಳಾಗುತ್ತಿವೆ ಹಾಗೂ ಲಾಯರುಗಳು ಕಾನೂನುಗಳನ್ನು ಅಭ್ಯಾಸ ಮಾಡುವಾಗ ಅವರಿಗೇನಾದರೂ ಕುಂದುಕೊರತೆಗಳು ಬಂದರೆ ಅದನ್ನು ಹೇಗೆ ಪರಿಹಾರ ಮಾಡಬಹುದು ಮತ್ತು ಕಾನೂನನ್ನು ಏನಾದರೂ ಬದಲಾಯಿಸುವ ಅಗತ್ಯವಿದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸುವಂತೆ ತಕ್ಕ ಕ್ರಮಗಳನ್ನು ಕೈಗೊಂಡರೆ, ಆಗ ಸಾರ್ವಜನಿಕರಿಗೆ ತ್ವರಿತವಾಗಿ ನ್ಯಾಯ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಕೋನದಲ್ಲಿ ನಮ್ಮ ನ್ಯಾಯಾಂಗ ಇಲಾಖೆಯವರು ಯಾವ ರೀತಿಯಾದ ಕೆಲಸಗಳನ್ನೂ ಮಾಡಿಲ್ಲ ಎಂದು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ಎರಡನೇಯದು, ನಾವೇನೂ ದೂರ ಹೋಗಬೇಕಾಗಿಲ್ಲ. ನಮ್ಮ ಬೆಂಗಳೂರು ನಗರದಲ್ಲಿರುವ ಸಿಟಿ ಕೋರ್ಟುಗಳಿಗೆ ಹೋಗಿ ನೋಡಿದರೆ ಅವು ನ್ಯಾಯಾಲಯಗಳೇ ಇಲ್ಲವೇ ದನದ ಕೊಟ್ಟಿಗೆಗಳೇ ಎನ್ನುವುದು ತಮ್ಮ ಮನಸ್ಸಿಗೆ ಬರುತ್ತದೆ. ಇಲ್ಲಿ ಒಂದು ಬಾರ್ ಅಸೋಸಿಯೇಷನ್ ಕೂಡ ಇದೆ. ನಮ್ಮ ಮಾನ್ಯ ಮಂತ್ರಿಗಳು ಇದುವರೆಗೂ ಅಲ್ಲಿಗೆ ಹೋಗಲಿಕ್ಕೆ ಏಕೆ ಮನಸ್ಸು ಮಾಡಲಿಲ್ಲವೋ ನನಗಂತೂ ಗೊತ್ತಾಗುತ್ತಿಲ್ಲ. ಹೀಗೆ ನೋಡದೇ ಹೋದರೆ ಇಲ್ಲಿನ ಜನರ ಸುಖ ದುಃಖಗಳನ್ನು ಕೇಳುವವರಾರು ? ಇನ್ನು ಡಿಸ್ಟ್ರಿಕ್ಟ್ ಕೋರ್ಟುಗಳ ಪರಿಸ್ಥಿತಿ ನೋಡಿದರೆ ಅವೂ ಅದೇ ರೀತಿಯಲ್ಲಿವೆ. ಇಲ್ಲಿ ಡಿಸ್ಟ್ರಿಕ್ಟ್ ಕೋರ್ಟು ಪಕ್ಕದಲ್ಲೇ ಡೆಪ್ಯುಟೀ ಕಮೀಷನರವರ ಆಫೀಸೂ ಇದೆ; ಮತ್ತು ಇಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಧೂಳು ತುಂಬಿವೆ. ಕಸ ಗುಡಿಸಿ ಸುಮಾರು ಹತ್ತು ವರ್ಷಗಳಾಗಿರಬಹುದು ಎಂದು ಕಾಣುತ್ತೆ. ಇಲ್ಲಿರುವ ಬಿಲ್ಡಿಂಗು ಈಗಾಗಲೇ ಬಿರುಕು ಬಿಟ್ಟಿದೆ. ಈಗಲೇ ಬೇಕಾದರೂ ನಾನು ಮಾನ್ಯ ಮಂತ್ರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅವರೇ ಕಣ್ಣಾರೆ ನೋಡಬಹುದು. ಇಲ್ಲಿರುವ ಲಾಯರುಗಳ ಬಾರ್ ಅಸೋಸಿಯೇಷನ್ ಯಾವ ರೀತಿ ಇದೆ, ಲಾಯರುಗಳು ಯಾವ ರೀತಿಯಾಗಿ ಊಟ ಮಾಡುತ್ತಿದ್ದಾರೆ, ಇತ್ಯಾದಿಗಳನ್ನೆಲ್ಲಾ ಚೆನ್ನಾಗಿ ಅರಿತುಕೊಳ್ಳಬಹುದು. ಇಲ್ಲಿನ ಕೋರ್ಟುಗಳನ್ನು ಹಿಂದೆ ಎಂದೋ ಒಂದು ಸಾರಿ ನಮ್ಮ ಮಾನ್ಯ ಅರ್ಥ ಸಚಿವರು ಹೋಗಿ ನೋಡಿಕೊಂಡು ಬಂದರು ಎಂದು ಕೇಳುತ್ತೇನೆ. ಅವರೇ ಹೇಳಿದಂತೆ ಇಲ್ಲಿನ ಬಿಲ್ಡಿಂಗನ್ನು ಯಾವ ಕಾಲಕ್ಕೆ ರಿಪೇರಿ ಮಾಡಿಸುತ್ತಾರೋ ನನಗಂತೂ ಗೊತ್ತಿಲ್ಲ. ಅಲ್ಲದೆ ಈ ಕೋರ್ಟು ಪ್ರದೇಶದಲ್ಲೇ ಇದ್ದ ದೊಡ್ಡ ಆಟದ ಮೈದಾನವನ್ನು ಕೋರ್ಟುಗಳ ಉಪಯೋಗಕ್ಕಾಗಿ ಕೊಡಬೇಕೆಂದು ಇಲ್ಲಿನ ಬಾರ್ ಅಸೋಸಿಯೇಷನ್ನಿನವರು ಹಾಗೂ ಕೋರ್ಟಿನವರು ಕೇಳುತ್ತಿದ್ದರೂ ಈ ಜಾಗವನ್ನು ಕೊಡದೆ ಈಗ ಬೇರೆಯವರಿಗೆ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಸುಮಾರು 25 ವರ್ಷಗಳಿಂದಲೂ ಈ ಜಾಗವನ್ನು ಕೋರ್ಟುಗಳ ಉಪಯೋಗಕ್ಕೆ ಕೊಡಬೇಕೆಂದು ಕೇಳುತ್ತಿದ್ದರೂ ಕೊಡದೇ ಈಗ ಈ ಜಾಗವನ್ನು ಬೇರೆಯವರಿಗೆ ಕೊಟ್ಟಿರುವುದು ತುಂಬಾ ವಿಷಾದದ ಸಂಗತಿ. ಈಗ ಕೋರ್ಟುಗಳಿಗೆ ಜಾಗವಿಲ್ಲ. ಇಂತಹ ಸಮಯದಲ್ಲಿ ಬೇರೆಯವರಿಗೆ ಇಲ್ಲಿನ ಜಾಗವನ್ನು ಕೊಟ್ಟಿರು

(ಶ್ರೀ ಎಲ್. ಶ್ರೀಕಂಠಯ್ಯ)

ವುದು ಸರಿಯಲ್ಲ. ಇಲ್ಲಿರುವ ಜಾಗವನ್ನು ಕೋರ್ಟುಗಳವರಿಗೇ ಕೊಟ್ಟು ಎಲ್ಲಾ ಕೋರ್ಟುಗಳನ್ನು ಎಂದರೆ ಸಿವಿಲ್ ಕೋರ್ಟುಗಳು ಹಾಗೂ ಕ್ರಿಮಿನಲ್ ಕೋರ್ಟುಗಳು ಮತ್ತು ಟ್ರಿಬ್ಯುನಲ್‌ಗಳೂ ಎಲ್ಲ ಒಂದೇ ಜಾಗದಲ್ಲಿರುವಂತೆ ಮಾಡಿದ್ದರೆ ಒಂದೇ ವಾತಾವರಣದಲ್ಲಿ ಎಲ್ಲ ಲಾಯರುಗಳೂ ಕೆಲಸ ಮಾಡಲು ಅನುಕೂಲವಾಗುತ್ತಿತ್ತು; ಮತ್ತು ಈಗಲೂ ಕಾಲ ಮಿಂಚಿಲ್ಲ. ಸರಕಾರದವರು ದೊಡ್ಡ ಮನಸ್ಸು ಮಾಡಿ ಈ ಜಾಗವನ್ನು ಕೋರ್ಟುಗಳಿಗೇ ಮೀಸಲಾಗಿಟ್ಟು ಎಲ್ಲ ಕೋರ್ಟುಗಳೂ ಒಂದೇ ಕಡೆ ಕೆಲಸಮಾಡುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಸಾರ್ವಜನಿಕರೂ ಹಾಗೂ ಲಾಯರುಗಳೂ ಸರಕಾರಕ್ಕೆ ಚಿರಋಣಿಗಳಾಗಿರುತ್ತಾರೆ.

ಇನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿರುವ ಕೋರ್ಟುಗಳಲ್ಲಿ ಕೆಲವು ಕಡೆ ಹೋಗಿ ನೋಡಿದರೆ ಅವರಿಗೆ ಬೇಕಾಗುವ ಫಾರಂಗಳೇ ಇಲ್ಲ ಎಂದು ಹೇಳುತ್ತಾರೆ. ಯಾವ ಕೋರ್ಟಿಗೆ ಹೋಗಿ ಕೇಳಿದರೂ ಇನ್ನೂ ಸರಕಾರದಿಂದ ಫಾರಂಗಳು ಬಂದಿಲ್ಲ ಎನ್ನುತ್ತಾರೆ. ಕೆಲವು ಕಡೆ ಹರಾಜು ಮಾಡಲು ಇಸ್ತಿಹಾರ್‌ನಾಮಾ ಫಾರಂ ಇಲ್ಲ ಎನ್ನುತ್ತಾರೆ. ಹೀಗೆ ನ್ಯಾಯಾಲಯಗಳಿಗೆ ಬೇಕಾಗುವ ಫಾರಂಗಳನ್ನು ಸಕಾಲದಲ್ಲಿ ಒದಗಿಸದೇ ಇದ್ದರೆ ಅವರುಗಳು ಕೆಲಸಮಾಡುವುದಾದರೂ ಹೇಗೆ? ಅನೇಕ ಕಡೆಗಳಲ್ಲಿ ಗುಮಾಸ್ತರುಗಳೇ ಫಾರಂನ್ನು ನೀವೇ ತಂದುಕೊಟ್ಟರೆ ನಾವು ಕೆಲಸಗಳನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಎಷ್ಟೋ ಹಣ ಖರ್ಚು ಮಾಡುತ್ತಿದ್ದರೂ ಫಾರಂಗಾಗಿ ಸ್ವಲ್ಪ ವ್ಯಯ ಮಾಡಿ ಏಕೆ ಸರಬರಾಜು ಮಾಡಬಾರದು! ಇದು ತುಂಬಾ ವಿಷಾದದ ಸಂಗತಿ. ಇವೊಂದೇ ಅಲ್ಲ ಇನ್ನು ಎಷ್ಟೋ ಲೋಪದೋಷಗಳು ಕೋರ್ಟುಗಳಲ್ಲಿವೆ. ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ಗಾಗಿ ಇರುವ ಕೋರ್ಟು ಹಾಲಿನಲ್ಲಿರುವ ಅವರ ಟೇಬಲ್ ಮೇಲೆ ಒಂದು ಹಸಿರು ಬಟ್ಟೆ ಹಾಕಿದ್ದಾರೆ. ಅದನ್ನು ಹಾಕಿ ಎಷ್ಟೋ ವರ್ಷಗಳಾದವು ಎಂದು ತೋರುತ್ತೆ. ಅದು ಚಿಂದಿ ಚಿಂದಿಯಾಗಿದ್ದರೂ ಕೂಡ ಇನ್ನೂ ಅದನ್ನು ಬದಲಾಯಿಸಲು ಆಗಿಲ್ಲ. ಡಿಸ್ಟ್ರಿಕ್ಟ್ ಜಡ್ಜ್‌ರವರನ್ನು ಒಂದು ಸಾರಿ ನಾನು ಕೇಳಿದಾಗ ಅವರು ಈ ಚಿಂದಿ ಚಿಂದಿ ಬಟ್ಟೆಗಳನ್ನೆಲ್ಲಾ ಪ್ಯಾಕ್ ಮಾಡಿ ಸ್ಟೋರು ಪರ್ಚೇಸ್ ಕಮಿಟಿಯವರಿಗೆ ಕಳುಹಿಸಿಕೊಟ್ಟರೆ ಆಗ ಅವರು ಒಂದು ಮೂರಡಿ ಇರುವ ಹಸಿರು ಬಟ್ಟೆ ಒಂದನ್ನು ಕಳಿಸುತ್ತಾರೆ ಎಂದು ಹೇಳುತ್ತಾರೆ. ಅದೂ ಅವರು ಕಳಿಸುವ ಬಟ್ಟೆ ಹೇಗಿರುತ್ತದೆ ಎಂದರೆ ಅದು ಕಾಲಿಗೆ ಆದರೆ ತಲೆಗೆ ಆಗುವುದಿಲ್ಲ ತಲೆಗೆ ಆದರೆ ಕಾಲಿಗೆ ಆಗುವುದಿಲ್ಲ ಎನ್ನುವಂತ ಟೇಬಲ್ ಪೂರ್ತಿ ಮುಚ್ಚಲು ಆಗುವುದಿಲ್ಲ ಇಂತಹ ಹಸುರು ಬಟ್ಟೆಗಳನ್ನು ಕೊಡುತ್ತಿದ್ದಾರೆ. ಹೀಗಾದರೆ ನ್ಯಾಯಾಲಯಗಳಿಗೆ ಒಂದು ಪವಿತ್ರತೆ ಬರುತ್ತದೆಯೇ? ಕೋರ್ಟುಹಾಲಿನಲ್ಲಿರುವ ಡಯಾಸ್ ಯಾವ ರೀತಿ ಇದೆ ಎನ್ನುವುದನ್ನು ಹೋಗಿ ನೋಡಿ ಒಂದು ಸಾರಿ ನಾನು ಅಲ್ಲಿರುವ ಜಡ್ಜ್‌ರವರನ್ನು ಕೇಳಿದಾಗ ಅವರಿಗೆ ಇಂಪ್ರೆಸ್ಟ್ ಇದೆ ಹಾಗೂ ಕಂಟಿಜೆನ್ಸಿ ಇತ್ಯಾದಿಗಳಿವೆ, ಇದರಿಂದ ಏಕೆ ಸ್ವಲ್ಪ ಖರ್ಚುಮಾಡಿ ಇವನ್ನೆಲ್ಲಾ ಸರಿಪಡಿಸಿಕೊಳ್ಳಬಾರದು ಎಂದು ಕೇಳಿದುದಕ್ಕೆ ಅವರು ಪ್ರತಿಯೊಂದಕ್ಕೂ ಲಾ ಇಲಾಖೆಯ ಮಂಜೂರಾತಿ ಬರಬೇಕು. ನಮಗೆ ಒಂದು ಕಾಸನ್ನೂ ಖರ್ಚು ಮಾಡಲು ಕೂಡ ಅಧಿಕಾರವಿಲ್ಲ ಎಂದು ಹೇಳಿದರು. ಹೀಗೆ ಒಂದು ಸಣ್ಣಪುಟ್ಟ ರಿಪೇರಿಗಳನ್ನು ಮಾಡಲೂ ಇವರಿಗೆ ಅಧಿಕಾರಕೊಡದೇ ಇರುವುದು ಸರಿಯಾಗಿಲ್ಲ. ಪ್ರತಿಯೊಂದಕ್ಕೂ ಲಾ ಇಲಾಖೆಗೇ ಬರಬೇಕು ಎಂದರೆ ತುಂಬಾ ಕಷ್ಟವಾಗುತ್ತದೆ. ಅನೇಕ ಕೋರ್ಟುಗಳಲ್ಲಿ ಗುಡಿಸಲು ಸ್ಕ್ಯಾವೆಂಜರುಗಳು ಕೂಡ ಇಲ್ಲ ಮತ್ತು ಜಡ್ಜುಗಳು ನಮಗೆ ಸ್ಕ್ಯಾವೆಂಜರುಗಳನ್ನು ನೇಮಕ ಮಾಡಲು ಕೂಡ ಅಧಿಕಾರಗಳನ್ನು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಜಾಡಮಾಲಿಗಳು ಬರದೇ ಇರುವುದರಿಂದ ಸುಮಾರು ಹತ್ತು ವರ್ಷಗಳಿಂದಲೂ ಕೋರ್ಟುಗಳನ್ನು ಗುಡಿಸದೇ ಕಸ ಅಲ್ಲೇ ರಾಶಿ ರಾಶಿಯಾಗಿ ಬಿದ್ದಿದೆ. ಆದುದರಿಂದ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ ಸರಕಾರ ಸಾಕಾದಷ್ಟು ಅಧಿಕಾರಗಳನ್ನು ಕೊಡಬೇಕು. ಇನ್ನು ಕೆಲವು ಕಡೆಗಳಲ್ಲಿ ಕೋರ್ಟುಗಳ ಕಟ್ಟಡ ಬಿರುಕುಬಿಟ್ಟು ನೀರು ಸೋರುತ್ತಿದೆ. ಅದನ್ನು ರಿಪೇರಿ ಮಾಡಲು ಪಿ. ಡಬ್ಲ್ಯು. ಡಿ. ಇಲಾಖೆಗೆ ಬರೆಯಬೇಕು ಎಂದು ಹೇಳುತ್ತಾರೆ. ಅವರು ಯಾವ ಕಾಲಕ್ಕೆ ಬರುತ್ತಾರೋ ಯಾವಾಗ ರಿಪೇರಿ ಮಾಡುತ್ತಾರೋ ನಮಗಂತೂ ಗೊತ್ತಾಗುತ್ತಿಲ್ಲ. ಹತ್ತು ವರ್ಷಗಳಾದರೂ ಕೂಡ ಇಂಜಿನಿಯರುಗಳಿಂದ ರಿಪ್ಲೈ ಬರುವುದಿಲ್ಲ ಎನ್ನುತ್ತಾರೆ. ಅಸಿಸ್ಟೆಂಟು ಇಂಜಿನಿಯರು ಎಕ್ಸಿಕ್ಯೂಟೀವ್ ಇಂಜನಿಯರನ್ನು ತೋರಿಸುತ್ತಾರೆ. ಎಕ್ಸಿಕ್ಯೂಟೀವ್ ಇಂಜನಿಯರು ಸೂಪರಿಂಟೆಂಡಿಂಗ್ ಇಂಜನಿಯರು ಮಂಜೂರು ಮಾಡುತ್ತಾರೆ, ನಮಗೆ ಹತ್ತು ರೂಪಾಯಿ ಕೆಲಸ ಮಂಜೂರು ಮಾಡಲು ಕೂಡ ಅಧಿಕಾರವಿಲ್ಲ ಎನ್ನುತ್ತಾರೆ. ಹೀಗಾಗಿ ನ್ಯಾಯ ಇಲಾಖೆಯಲ್ಲಿ ಇದರ ಕಡೆಗೆ ಸರಿಯಾದ ಗಮನ ಕೊಡುತ್ತಿಲ್ಲ. ಇಲ್ಲಿರುವ ಲೈಬ್ರರಿಯಲ್ಲಿ ಪುಸ್ತಕಗಳು ನೀರು ಸೋರಿ ಕೆಟ್ಟು ಹೋಗುತ್ತವೆ; ಇದನ್ನು ಬೇಗನೆ ರಿಪೇರಿ ಮಾಡಿಸಬೇಕೆಂದು ಹೇಳಿದರೂ ಇದುವರೆಗೂ

ಮಾಡಿಲ್ಲ ಮತ್ತು ಒಂದು ಉತ್ತಮವಾದ ಕಟ್ಟಡವನ್ನೂ ಕಟ್ಟಿಸಿ ಕೊಡಲಿಲ್ಲ; ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಕೋರ್ಟುಗಳ ಆವರಣದಲ್ಲಿ ನೀರಿನ ಒಂದು ಟ್ಯಾಪ್ ಕೂಡ ಇಲ್ಲ. ಮೈಸೂರಿನಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟು ಕಟ್ಟಡದ ಆವರಣದಲ್ಲಿ ಮಹಿಳೆಯರಿಗಾಗಿ ಹಾಗೂ ಇನ್ನಿತರರ ಸೌಕರ್ಯಕ್ಕಾಗಿ ನೀರಿನ ಒಂದು ಟ್ಯಾಪ್ ಕೂಡ ಇಲ್ಲ. ಮಹಿಳೆಯರು ಈ ಕೋರ್ಟಿನ ಆವರಣಕ್ಕೆ ಬಂದರೆ ಇವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಸರಕಾರ ಇಂತಹ ಕೋರ್ಟುಗಳ ವಿಚಾರದಲ್ಲಿ ಇನ್ನೂ ಹೆಚ್ಚು ಆಸಕ್ತಿ ವಹಿಸಿ ಸಾಧ್ಯವಾದಮಟ್ಟಿಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಉತ್ತಮವಾದ ನ್ಯಾಯ ದೊರಕುವಂತೆ ಮಾಡಿಕೊಡಬೇಕೆಂದು ತಮ್ಮ ಮುಂದೆ ಇಲ್ಲಿ ಹೇಳಿಕೊಳ್ಳುತ್ತೇನೆ.

ಇನ್ನು ಮೂರನೇಯದು ಕೋರ್ಟುಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡುವ ವಿಚಾರ. ಇದರಿಂದ ಸರಕಾರಕ್ಕೆ ಬಹುಮಟ್ಟಿಗೆ ದುಡ್ಡು ನಷ್ಟವಾಗುತ್ತಿದೆ ಮತ್ತು ಅನ್ಯಾಯವಾಗುತ್ತಿದೆ. ಇಲ್ಲೇ ನಮ್ಮ ನಗರದಲ್ಲಿ ನಾಲ್ಕು ಕೋರ್ಟುಗಳ ಶಾಖೆಗಳಿರುತ್ತವೆ. ಫಸ್ಟ್ ಮುನ್ಸೀಫ್ ಕೋರ್ಟು, ಸೆಕೆಂಡ್ ಮುನ್ಸೀಫ್ ಕೋರ್ಟು, ಫಸ್ಟ್ ಮ್ಯಾಜಿಸ್ಟ್ರೇಟ್ ಕೋರ್ಟು, ಸೆಕೆಂಡ್ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟು ಹೀಗೆ ಇವೆ. ಪ್ರತಿಯೊಂದು ಕೋರ್ಟಿಗೂ ಅಲಹಾಬಾದಿನಲ್ಲಿರುವ ಲಾ ಕಂಪನಿಯವರ ಪುಸ್ತಕಗಳನ್ನು ಹೈಕೋರ್ಟಿನವರು ಕೊಂಡು ಕೊಂಡು ತಂದು ತುಂಬುತ್ತಿದ್ದಾರೆ. ಇದನ್ನು ಬಾರ್ ಅಸೋಸಿಯೇಷನ್ನಿನವರೂ ಕೂಡ ಸರಿಯಾದ ಪುಸ್ತಕಗಳು ಇವಲ್ಲ, ಇದಕ್ಕಿಂತ ಉತ್ತಮವಾದ ಪುಸ್ತಕಗಳನ್ನು ಬೇಕಾದರೆ ನಾವು ಸರಬರಾಜು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಕೆಲವು ವೇಳೆ ಜಡ್ಜ್‌ಗಳು ಕೂಡ ಲಾಯರುಗಳನ್ನೇ ಆಲ್ ಇಂಡಿಯಾ ರಿಪೋರ್ಟರ್ ಹಾಗೂ ಇನ್ನಿತರ ಪುಸ್ತಕಗಳನ್ನು ತಮಗೆ ಬೇಕು ಎಂದು ಕೇಳುತ್ತಾರೆ ಮತ್ತು ರೆಫರೆನ್ಸ್‌ಗಾಗಿ ಸರಿಯಾದ ಪುಸ್ತಕಗಳು ಇಲ್ಲಿ ಸಿಗುತ್ತಿಲ್ಲ. ಇದಕ್ಕಾಗಿ ಬಾರ್ ಅಸೋಸಿಯೇಷನ್ನಿನವರೇ ಸರಕಾರಕ್ಕೆ ಒಂದು ಸಲಹೆ ಕಳುಹಿಸಿದ್ದಾರೆಂದು ಗೊತ್ತಾಗಿದೆ. ಅವರಿಗೆ ಈ ಪುಸ್ತಕಗಳ ಸರಬರಾಜನ್ನು ಒಪ್ಪಿಸಿದರೆ ಅವರೇ ಉತ್ತಮವಾದ ಪುಸ್ತಕಗಳನ್ನು ತಂದು ಮೂರು ಸೆಟ್ ಮಾಡಿ ಜಡ್ಜ್‌ಗಳಿಗೆ ಒಂದು ಸೆಟ್, ಲೈಬ್ರರಿಗೇ ಒಂದು ಸೆಟ್ಟು ಬಾರ್ ಅಸೋಸಿಯೇಷನ್ನಿಗೇ ಒಂದು ಸೆಟ್ಟು—ಹೀಗೆಮಾಡಿ ಸಪ್ಲೈಮಾಡುತ್ತೇವೆ ಎಂದು ಹೇಳಿದ್ದಾರೆ. ಇದರಿಂದ ಸರಕಾರಕ್ಕೂ ಹೆಚ್ಚು ಹಣ ವ್ಯಯವಾಗುವುದೂ ತಪ್ಪುತ್ತದೆ ಮತ್ತು ಎಷ್ಟೋ ಹಣ ಉಳಿತಾಯವೂ ಆಗುತ್ತದೆ. ಈಗ ಸುಮ್ಮನೆ ವೃಥಾ ಲಾ ಕಂಪನಿಯವರ ಏಜಂಟರುಗಳ ಕೈವಾಡಕ್ಕೆ ಸಿಕ್ಕಿ ಹೈಕೋರ್ಟಿನವರು ಎಲ್ಲ ಪುಸ್ತಕಗಳನ್ನೂ ಕೊಂಡು ಎಲ್ಲ ಕೋರ್ಟುಗಳಿಗೂ ಡಂಪ್ ಮಾಡುತ್ತಿದ್ದಾರೆ ಮತ್ತು ಅದರ ಒಂದು ಹಾಳೆ ತೆಗೆದು ಯಾರೂ ಕೂಡ ಓದಿ ನೋಡುತ್ತಿಲ್ಲ. ಇದರಿಂದ ಎಷ್ಟೋ ಪುಸ್ತಕಗಳೂ ಹಾಳಾಗಿ ಹೋಗುತ್ತಿವೆ. ಇಲ್ಲಿರುವ ಲೈಬ್ರರಿಯಲ್ಲಿ ಸರಿಯಾದ ಎ. ಐ. ಆರ್. ಮೈಸೂರು ಲಾ ಜರ್ನಲ್ ಯಾವುದೂ ಇಲ್ಲ ಎಂದು ಇಲ್ಲಿನ ಜಡ್ಜ್‌ಗಳೇ ಹೇಳುತ್ತಿದ್ದಾರೆ. ಇದೊಂದು ಮುಖ್ಯವಾದ ಸಲಹೆ. ಇಲ್ಲಿರುವ ಲೈಬ್ರರಿಯನ್ನು ಸರಿಯಾಗಿ ರೀ ಆರ್ಗನೈಜ್ ಮಾಡಬೇಕು. ಈ ದುಡ್ಡನ್ನು ಬೇರೆಯವರ ಮುಖಾಂತರ ಖರ್ಚು ಮಾಡುವುದಕ್ಕಿಂತ ಹೈಕೋರ್ಟಿನವರೇ ಅದನ್ನು ಪಡೆದು, ಬಾರ್ ಅಸೋಸಿಯೇಷನ್‌ಗೆ ಅದನ್ನು ಪೂರ್ತಿಯಾಗಿ ಕೊಟ್ಟು ಅವರು ಪುಸ್ತಕಗಳನ್ನು ಉನ್ನತ ಮಟ್ಟದಲ್ಲಿ ಇಟ್ಟು ಜಡ್ಜ್‌ಗಳಿಗೆ ಮತ್ತು ಲಾಯರುಗಳಿಗೆ ಅನುಕೂಲವಾಗುವಂತೆ ಒಂದು ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

3-00 P.M.

ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳಬೇಕಾಗಿದೆ. ಸರ್ಕಾರಿ ಮುದ್ರಣಾಲಯ ಇದೆ. 1965ನೇ ಇಸವಿ ಶಾಸನ ಪುಸ್ತಕ ಪ್ರಿಂಟ್ ಆಗುತ್ತದೆ, 1966—67ನೇ ಇಸವಿ ಬಂದು ಹೋದರೂಕೂಡ ಯಾವ ಒಂದು ಪೋಲಿಸ್ ಸ್ಟೇಷನ್‌ನಲ್ಲೂ ಆ ಪುಸ್ತಕ ಇರುವುದಿಲ್ಲ. ಇನ್‌ಸ್ಪೆಕ್ಟರು ಹೇಳುತ್ತಾರೆ ಸಾರ್ ನಿಮ್ಮ ಹತ್ತಿರ ಇದ್ದರೆ ಯಾವುದಾದರೂ ಒಂದು ಆಕ್ಟ್ ಕೊಡಿ ಸಾರ್, ಪೋಲೀಸ್ ಸ್ಟೇಷನ್‌ನಲ್ಲಿ ಯಾವುದೊಂದು ಪುಸ್ತಕವೂ ಇಲ್ಲ ಸಾರ್, ದಯವಿಟ್ಟು ಕೊಡಿ ಸಾರ್ ಎಂದು ಹೇಳುತ್ತಾರೆ, ಇದು ಬಹಳ ಅವಮಾನಕರವಾದ ಪ್ರಸಂಗ. ನಮ್ಮ ನ್ಯಾಯಾಲಯಗಳು ದೇವರ ಗುಡಿಗೆ ಸಮಾನವಾದವುಗಳು ಹಾಗೆಯೇ ಪೋಲೀಸ್ ಸ್ಟೇಷನ್‌ಗಳೂ ಕೂಡ ದೇವರ ಗುಡಿಗೆ ಸಮಾನವಾಗಿವೆ. ಸಾರ್ವಜನಿಕರಿಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗಿ ಅವರು ಇದ್ದಾರೆ, ಯಾವ ಒಂದು ಕಾನೂನು ಆಗಲಿ, ಸಲಹೆಯನ್ನಾಗಲಿ, ಆಕ್ಟನ್ನಾಗಲಿ, ಪೋಲೀಸ್ ಅಧಿಕಾರಿಗಳಿಗೆ ತಿಳಿಸುತ್ತಾ ಇಲ್ಲ, ಯಾವುದಾದರೂ ಪೋಲಿಸ್‌ಸ್ಟೇಷನ್ನಿಗೆ ಹೋಗಿ ನೋಡಿದರೆ ಅಲ್ಲಿ 1925ನೇ ಇಸವಿ ಐ. ಪಿ. ಸಿ ಕೋಡು ಇರುತ್ತದೆ, ಅಥವಾ ಯಾವುದಾದರೂ ಲಾಯರು ತೆಗೆದುಕೊಂಡು ಹೋಗಿ ಅಂತ ಹೇಳಿ ಕೊಟ್ಟ ಕ್ರಿಮಿನಲ್ ಪ್ರೊಸೀಜರ್ ಕೋಡು ಇರುತ್ತದೆ. ಅದನ್ನು ಬಿಟ್ಟರೆ ಅವರಿಗೆ ಸಪ್ಲೈಆಗುತ್ತಾ

(ಶ್ರೀ ಎಲ್. ಶ್ರೀಕಂಠಯ್ಯ)

ಇರುವುದು ಎಂದರೆ ಮೈಸೂರು ಗೆಜೆಟ್ಟು. ಅದನ್ನೂ ಕೂಡ ಪೋಲೀಸ್‌ನವರು ತೆಗೆದುಕೊಂಡು ಹೋಗಿ ಅಂಗಡಿಗೆ ಕೊಟ್ಟು ಬೀಡಿ ಸೇದುವುದಕ್ಕೆ ಉಪಯೋಗಿಸಿಕೊಳ್ಳತಕ್ಕ ಪರಿಸ್ಥಿತಿ ಇದೆ. ಹೀಗಾಗಿ ಅನೇಕ ಸಲ ಚಾರ್ಜ್ ಷೀಟ್ ಹಾಕುವುದರಲ್ಲೂ ಕೂಡ ತಪ್ಪಾಗುತ್ತದೆ. ರಿಪೀಲ್ ಆಗಿರತಕ್ಕ ಆಕ್ಟ್‌ನ ಮೇಲೆ ಚಾರ್ಜ್‌ಷೀಟ್ ಹಾಕಿರುತ್ತಾರೆ, ಲೀಗಲ್ ಫೆಸಿಲಿಟೀಸ್ ಅವರಿಗೆ ಕೊಡುತ್ತಾ ಇಲ್ಲ. ಆದ್ದರಿಂದ ಸರ್ಕಾರಿ ಮುದ್ರಣಾಲಯದಲ್ಲಿ ಇತ್ತೀಚೆಗೆ ಲೇಟೆಸ್ಟಾಗಿ ಪ್ರಿಂಟ್ ಮಾಡಿರತಕ್ಕ ಪ್ರತಿಯೊಂದು ಆಕ್ಟ್‌ನ್ನೂ ಪ್ರತಿಯೊಂದು ಪೋಲೀಸ್ ಸ್ಟೇಷನ್‌ಗೂ ಕೊಡಬೇಕು, ಆ ರೀತಿ ಮಾಡುವುದರಿಂದ ನಿಮ್ಮ ಅಧಿಕಾರಿಗಳು ನಮ್ಮ ಹತ್ತಿರ ಬಂದು ಗೋಗರೆಯುವುದು ತಪ್ಪುತ್ತದೆ.

ಕೊನೆಯದಾಗಿ ಇನ್ನೊಂದು ವಿಷಯ ನಮ್ಮ ಗಮನಕ್ಕೆ ಬಂದಿದೆ. ಇಷ್ಟು ವರ್ಷವೂ ಕೂಡ ಎಫ್. ಎಲ್. ಮತ್ತು ಬಿ. ಎಲ್. ಎರಡು ವರ್ಷದ ಅವಧಿಯಲ್ಲಿ ಆಗುತ್ತಾ ಇತ್ತು; ಈ ವರ್ಷ 6 ತಿಂಗಳ ಅವಧಿಯಲ್ಲಿ ಬಾರ್ ಕೌನ್ಸಿಲ್ ಎಕ್ಸಾಮಿನೇಷನ್ ಮಾಡಬೇಕೆಂದು ಇಟ್ಟು ಆ ಪ್ರಕಾರ ನಡೆಯಿತು. ಈಗ ಎಫ್. ಎಲ್. ಮತ್ತು ಬಿ. ಎಲ್. ಮೂರು ವರ್ಷದ ಡಿಗ್ರಿ ಕೋರ್ಸ್ ಮಾಡಬೇಕೆಂದು ಪ್ರಯತ್ನ ನಡೆಸುತ್ತಾ ಇದ್ದಾರೆ, ಈ ವರ್ಷಕ್ಕೆ ಮಾತ್ರ ವಿನಾಯಿತಿ ಕೊಟ್ಟಿದ್ದಾರೆ. ಈ ಪ್ರಕಾರ 3 ವರ್ಷ 6 ತಿಂಗಳ ಅವಧಿ ಮಾಡುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತದೆ. ಏಕೆಂದರೆ ಪಿ. ಯು. ಸಿ. ಆದಮೇಲೆ ಒಬ್ಬ ಹುಡುಗ ಇಂಜನಿಯರಿಂಗ್ ಗ್ರಾಜ್ಯುಯೇಟ್ ಆಗಬೇಕಾದರೆ 5 ವರ್ಷ ಆಗುತ್ತದೆ; ಮೆಡಿಕಲ್ ಗ್ರಾಜ್ಯುಯೇಟ್ ಆಗಬೇಕಾದರೆ 5 ವರ್ಷ ಆಗುತ್ತದೆ. ಲಾ ಗ್ರಾಜ್ಯುಯೇಟ್ ಆಗಬೇಕಾದರೆ ಪಿ. ಯು. ಸಿ. ಆದಮೇಲೆ ಡಿಗ್ರಿ ಇಲ್ಲದೇ ಬಿ. ಎಲ್. ಗೆ ಸೇರಿಸುವುದಿಲ್ಲ, ಅದು ಮೂರು ವರ್ಷ ಅಮೇಲೆ ಮೂರು ವರ್ಷ ಈ ರೀತಿ ಒಟ್ಟು ಅರುವರೆ ವರ್ಷ ಆಗುತ್ತದೆ. ಅದೇ ಒಬ್ಬ ಮೆಡಿಕಲ್ ಗ್ರಾಜ್ಯುಯೇಟ್ 5-5½ ವರ್ಷದಲ್ಲಿ ಆಗಬಹುದು. ಈ ರೀತಿ ಮಾಡುವುದರಿಂದ ಮುಂದೆ ಲಾಯರುಗಳಾಗುವವರಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಲಾ ಕಾಲೇಜಿನಲ್ಲಿ ಯಾವ ಕನ್‌ಸೆಷನ್‌ನ್ನೂ ಕೊಡುವುದಿಲ್ಲ, ತಿಂಗಳಿಗೆ 25 ರೂಪಾಯಿ ಕೊಡಬೇಕು. ಮೂರೂವರೆ ವರ್ಷದ ಅವಧಿಯಲ್ಲಿ ವ್ಯಾಸಂಗ ಮಾಡುವುದಕ್ಕೆ ಕಷ್ಟವಾಗುತ್ತದೆ; ಇದನ್ನು ವಿಶ್ವವಿದ್ಯಾನಿಲಯದ ಜೊತೆಯಲ್ಲಿ ಮತ್ತು ಆಲ್ ಇಂಡಿಯಾ ಬಾರ್ ಕೌನ್ಸಿಲ್ ಜೊತೆಯಲ್ಲಿ ಸಮಾಲೋಚನೆ ಮಾಡಿ ನಿರ್ದಿಷ್ಟವಾದ ನೀತಿಯನ್ನು ಈ ಲೀಗಲ್ ಎಜ್ಯುಕೇಷನ್ ಬಗ್ಗೆ ತಾವು ತಾಳಬೇಕೆಂದು ಹೇಳುತ್ತೇನೆ. ಇನ್ನೂ ಅನೇಕ ವಿಷಯಗಳು ಇವೆ, ನಮ್ಮ ಮಾನ್ಯ ಮಿತ್ರರು ಹೇಳುತ್ತಾರೆ, ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ವಿಠಲದಾಸ್ ಶೆಟ್ಟಿ (ಪುತ್ತೂರು).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರುವ ಈ ಎರಡು ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಕೊಡಲಿಚ್ಛಿಸುತ್ತೇನೆ. ಈಗಾಗಲೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಮೋಟಾರು ಸಾರಿಗೆಯನ್ನು ರಾಷ್ಟ್ರೀಕರಣ ಮಾಡುವುದಾಗಿ ಪ್ರಕಟಿಸಲಾಗಿದೆ. ಆ ರೀತಿ ಮಾಡುವಾಗ ಕೆಲವು ಭಾಗಗಳನ್ನು ಅಷ್ಟೇ ತೆಗೆದುಕೊಂಡರೆ ಅದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಹೇಗೆಂದರೆ, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕಟಣೆ ಮಾಡಿರುವಂತಹ ರಸ್ತೆಗಳಲ್ಲಿ 86 ಬಸ್ಸುಗಳು ಖಾಸಗಿಯಾಗಿ ನಡೆಯುತ್ತಾ ಇವೆ, ಈಗ ಸರ್ಕಾರದವರು 34 ಬಸ್ಸುಗಳನ್ನು ಅಲ್ಲಿ ಹಾಕುವುದಾಗಿ ನಿರ್ಣಯ ಮಾಡಿದ್ದಾರೆ ಎಂದು ತಿಳಿದುಬಂದಿದೆ. 86 ಬಸ್ಸುಗಳನ್ನು ಹಾಕುವಂತಹ ಜಾಗಕ್ಕೆ 34 ಬಸ್ಸುಗಳನ್ನು ಹಾಕಿದರೆ ಅದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಬಹುದು ಎಂದು ಸರ್ಕಾರದವರಿಗೆ ತಿಳಿಸಲಿಚ್ಛಿಸುತ್ತೇನೆ. ಈಗಾಗಲೇ ಶ್ರೀಮಾನ್ ಸಿದ್ದವೀರಪ್ಪನವರು ಹಲವಾರು ಪ್ರದೇಶಗಳಲ್ಲಿ ರಾಷ್ಟ್ರೀಕರಣ ಮಾಡಲಿಲ್ಲ ಎಂದು ಹೇಳಿದರು. ರಾಷ್ಟ್ರೀಕರಣ ಮಾಡಿದಕೂಡಲೇ ವಿರೋಧ ಪಕ್ಷದವರು ಏನೆಂದು ಹೇಳುತ್ತಾರೆ ಎಂದರೆ ರಾಷ್ಟ್ರೀಕರಣ ಮಾಡಿದ್ದರಿಂದ ಬಸ್‌ಚಾರ್ಜ್ ಮೊದಲಿಗಿಂತ ಜಾಸ್ತಿಯಾಯಿತು ಎಂದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಈ ಸರ್ಕಾರಿ ಮೋಟಾರು ವಾಹನಗಳಲ್ಲಿ ಇಟ್ಟಿರತಕ್ಕ ಹೆಚ್ಚಿನದಾದ ಚಾರ್ಜು ಸರಿಯಲ್ಲ. ಅದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುವ ಸಂದರ್ಭ ಇದೆ. ಇದು ಮಾತ್ರವಲ್ಲ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದರು, ಚುನಾವಣೆಗೆ ಸಂಬಂಧಪಟ್ಟವರು ಮತ್ತು ಕಾಂಗ್ರೆಸ್‌ಗೆ ಸಹಾಯ ಮಾಡುವಂತಹವರಿಗೆ ಹೆಚ್ಚಿನ ಅವಕಾಶ ಇದೆ, ಹೆಚ್ಚಾಗಿ ಅವರೆ ಬಸ್ಸು ನಡೆಸುತ್ತಿದ್ದಾರೆ, ಎಂದು. ಕಾಂಗ್ರೆಸ್ಸಿಗರಲ್ಲಿ ಬಸ್ ಮಾಲೀಕರಾಗಿದ್ದವರನ್ನು ಸರ್ಕಾರದವರು ಬಿಟ್ಟಿದ್ದಾರೆ ಎಂದು ಇದು ಸತ್ಯಕ್ಕೆ ದೂರವಾದ ಮಾತು, ಕಾರಣ ನಮ್ಮ ಜಿಲ್ಲೆಗೆ ಬಂದರೆ ಅವರೇ ನೋಡಬಹುದು. ಬಸ್ ನಡೆಸುವವರೆಲ್ಲಾ ಬಸ್‌ನಲ್ಲಿ ಪ್ರಯಾಣ ಮಾಡುತ್ತಾ ಇರುವವರಲ್ಲ. ಬಸ್ ಮಾಲೀಕರೆಲ್ಲ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಲ್ಲ. ಸರ್ಕಾರದವರು ರಾಷ್ಟ್ರೀಕರಣ ಮಾಡುವಂತಹ ದೃಷ್ಟಿಯನ್ನು

ಇಟ್ಟುಕೊಂಡಿರುವಾಗ ಅಂತಹ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿಲ್ಲ ಎಂದು ನಾನು ಅವರಿಗೆ ಭರವಸೆ ಕೊಡುತ್ತೇನೆ. ಅವರು ಹೇಳಿದ್ದು ಸರಿಯಲ್ಲ ಅವರು ನಮ್ಮ ಜಿಲ್ಲೆಗೆ ಬಂದರೆ ಅವರೇ ಪ್ರತ್ಯಕ್ಷ ನೋಡಬಹುದು. ರಾಷ್ಟ್ರೀಕರಣ ಮಾಡುವಂತಹುದು ಒಳ್ಳೆಯದು. ಆದರೆ ರಾಷ್ಟ್ರೀಕರಣ ಮಾಡುವಾಗ ಖಾಸಗಿ ಬಸ್ಸುಗಳನ್ನು ನಡೆಸುವಂತಹ ರೀತಿಯಿಂದ ಒಳ್ಳೆಯ ರೀತಿಯಲ್ಲಿ ಸರ್ಕಾರ ನಡೆಸುವುದನ್ನು ಜನರಿಗೆ ತೋರಿಸಿಕೊಡುವಂತಹುದು ಅವಶ್ಯಕವಾಗಿದೆ. ನಾವು ಮದ್ರಾಸು ಸರ್ಕಾರದ ಆಡಳಿತೆಯಲ್ಲಿರುವಾಗ ನಮ್ಮ ಜಿಲ್ಲೆಯಲ್ಲಂತೂ ಬಸ್ಸುಗಳಲ್ಲಿ ಪ್ರಯಾಣಿಕರು ನಿಂತು ಹೋಗುವಂತಹ ಪರಿಸ್ಥಿತಿ ಇರಲಿಲ್ಲ. ಹಲವಾರು ವರ್ಷಗಳಿಂದ ಅದೇ ರೀತಿಯಲ್ಲಿ ನಡೆಯುತ್ತಾ ಇತ್ತು. ಮೈಸೂರು ಸರ್ಕಾರದ ಆಡಳಿತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬಂದ ನಂತರ ಬಸ್ಸುಗಳು ನಿಂತು ಹೋಗುವಂತಹ ಪದ್ಧತಿ ಜಾರಿಗೆ ಬಂದಿರುತ್ತದೆ. ಉದಾಹರಣೆಗೆ ಮಂಗಳೂರಿನಿಂದ ಬೆಂಗಳೂರಿನವರೆಗೂ ಸಹ ಹಲವಾರು ಪ್ರಯಾಣಿಕರು ನಿಂತು ಬರುವಂತಹ ಸಂದರ್ಭ ಬರುತ್ತದೆ. ಒಂದು ಸಾರಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾ ಇರುವಾಗ ನಿಂತು ಪ್ರಯಾಣ ಮಾಡುತ್ತಿದ್ದ ಒಬ್ಬ ಗರ್ಭಿಣಿ ಹೆಂಗಸು ಮಧ್ಯದಲ್ಲಿ ಇಳಿಯುವಂತಹ ಸಂದರ್ಭ ಬಂತು. ನಿಂತು ಹೋಗುವಂತಹ ಪದ್ಧತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಬಹಳ ಹೆಚ್ಚು ದೂರು ಪ್ರಯಾಣ ಮಾಡುವಂತಹ ಬಸ್ಸುಗಳಲ್ಲಿ ರದ್ದಿತಿ ಮಾಡಬೇಕೆಂದು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಾತ್ರವಲ್ಲದೆ ಎಲ್ಲಾದರೂ ಒಂದು ಕಡೆ ಸರ್ಕಾರಿ ಬಸ್ಸು ಹಾಳಾದರೆ, ಖಾಸಗಿ ಬಸ್ಸುಗಳವರು ನಡೆಸುವಂತಹ ಒಂದು ಪದ್ಧತಿಯಂತೆ ಬಸ್ಸು ಹಾಳಾದ ಕೂಡಲೆ ರಿಪೇರಿ ಮಾಡುವಂತಹ ಜನರನ್ನು ಕಳುಹಿಸುತ್ತಾರೆ. ಒಂದೆರಡು ಗಂಟೆಗಳಲ್ಲಿ ರಿಪೇರಿ ಮಾಡಿ ಬಸ್ಸು ಹೊರಡುವಂತೆ ಮಾಡುತ್ತಾರೆ ಅಂತಹ ಒಂದು ಪದ್ಧತಿಯನ್ನು ಮಾಡಬೇಕು. ಹಾಸನ ಅಥವಾ ಬೆಂಗಳೂರಿನ ಮಧ್ಯೆ ಬಸ್ಸು ಹಾಳಾಗಿ ಹೋದರೆ 50-60 ಮೈಲಿ ದೂರದಿಂದ ರಿಪೇರಿ ಮಾಡುವಂತಹ ಜನರು ಬರಬೇಕಾಗುತ್ತದೆ. 5-6 ಗಂಟೆಗಳವರೆಗೂ ಪ್ರಯಾಣಿಕರು ಅಲ್ಲಿಯೇ ಉಳಿಯುವಂತಹ ಸಂದರ್ಭ ಬರುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕು ಮತ್ತು ಒಂದೆರಡು ಗಂಟೆಗಳಲ್ಲೇ ಬಸ್ಸುಗಳು ಪುನಃ ಹೋಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಅಲ್ಲದೆ ಕಳೆದ ಚುನಾವಣೆಗಳ ಸಂದರ್ಭದಲ್ಲಿ ಹಲವಾರು ಆಫೀಸರುಗಳನ್ನು ಅವರಿದ್ದ ಕಡೆಯಲ್ಲಿ ಅವರನ್ನಿಡದೆ ಬೇರೆ ಬೇರೆ ಸ್ಥಳಗಳಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ ಎಂದು ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದರು. ಅವರು ಹಾಗೆ ಹೇಳಿದ್ದು ಸರಿಯಲ್ಲ. ನಮ್ಮ ರಾಜ್ಯದ ನೌಕರವರ್ಗದಲ್ಲಿ ಹೆಚ್ಚಿಗೆ ಒಂದು ರೀತಿಯಲ್ಲಿ ಹೇಳುವುದಾದರೆ ಈ ನಾನ್‌ಗೆಜೆಟೆಡ್ ನೌಕರರು ಕಾಂಗ್ರೆಸ್ ಪಕ್ಷಕ್ಕೆ ಇಲ್ಲವೇ ಆಡಳಿತ ಪಕ್ಷಕ್ಕೆ ವಿರುದ್ಧವಾಗಿಯೇ ವರ್ತಿಸಿದ್ದಾರೆ. ಹೀಗಿದ್ದರೂ ಈ ತಪ್ಪನ್ನು ಕಾಂಗ್ರೆಸ್ ಪಕ್ಷದ ಮೇಲೆ ಅವರು ಹಾಕಿದ್ದು ಸರಿಯಲ್ಲ ಎಂದು ಹೇಳಿ, ನನಗೆ ಈ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri B. P. GANGADHAR (Tumkur).—Mr. Speaker, Sir, while opposing the demand I have a few words of praise so far as our law courts are concerned. Our law courts have been held with great esteem by members of all parties, especially by the Opposition for the reason that we have been seeing on many occasions political moves and political influences weigh with the local police and also the revenue officials. In such cases most of the cases that come up before them and are decided by them will not bear the seal of truth. Under those circumstances, if we do not have a powerful and independent and honest judiciary, many of the leaders of political parties would be done away with or they would be put behind the bars. But as there is a powerful, independent and honest judiciary in this country, in this State, I submit that most of us are safe. In fact, if I may submit, in my own case some anti-dated documents were prepared by the local police. The local police prepared a Mahazar as though it was drawn on a particular date. But the complainant himself in the witness box said that no Mahazar was drawn up on that date. All the witnesses that were examined in the court

(SRI B. P. GANGADHAR)

unanimously stated that on that day they were there on the spot and they did not see any Mahazar being drawn up. But unfortunately we saw just to implicate me the local Police Sub-Inspector had prepared an anti-dated Mahazar wherein it was stated that the Mahazar was drawn up at 5-00 P.M. on that day. He had done this on some political influence brought to bear on him, but it was rather surprising to note that when all the other important officers like the Deputy Commissioner of the District, the Assistant Commissioner, the Deputy Superintendent of Police and other important top ranking officers both police and revenue, were there, not a single one of them said that the Mahazar was drawn up till 10 o'clock that night. But unfortunately we find that the Mahazar had crept in as though it was prepared at 5 O' clock and it was filed before the court. In that Mahazar among several names, my name was very prominent because I was in charge of the propaganda and the election work of the P.S.P. Party in Tumkur District. Perhaps that was why the local Police Sub-Inspector was made to play to the tune of the ruling party and prepare a concocted anti-dated Mahazar. I can even name the person, but I do not wish to do so because I am prevented from doing that. But even the court came to the conclusion and said that the Mahazar could not have been drawn at that time on that day. In this case many top ranking officers like the Deputy Commissioner of the District, the Assistant Commissioner, the Dy. S.P., etc., figured as witnesses, but still as the judiciary was quite independent and honest and as our Judges are really above board, the court came to this conclusion and in the High Court we could get acquittal. That is why I am now standing in this House; otherwise perhaps I would have been behind the bars. In spite of the fact that the High Court has pronounced that the Mahazar could not have been drawn at that hour on that day, I submit that no action is taken against that Sub-Inspector who prepared this anti-dated false Mahazar. Is it not necessary for the Hon'ble Minister at the helm of affairs to see that such persons who are playing to the tune of the rulers in manufacturing anti-dated and false Mahazars implicating innocent persons, are properly dealt with and given deterrent punishment?

Then, Sir, I may sumbit that our law courts, as was pointed out by Prof. Srikantaiah are like cattle sheds in many places. I would request the Minister concerned, to see that proper accommodation to house the law courts throughout the State is provided.

I may also submit that it is very necessary that law courts have to be established in every taluka headquarter for the reason that there are a number of cases pending for a number of years in various courts. It is for this reason that I submit that there should be law court in every taluk headquarters. Otherwise now litigants have to spend a lot of money in prosecuting their cases. It is not that all this money goes to

lawyers. Much of the money that they spend goes for travelling and hotel charges to come to the place where the court is situated. In fact, not even one-tenth of the money spent by them goes to the pockets of lawyers. Many a time the litigants from the mofussil have to travel 60 to 70 miles to come to the nearest court to attend to their cases. In my own District of Tumkur if a litigant has to come from Huliyurdurga to Tumkur he has to travel 60 to 70 miles and spend a lot for his travel. All this botheration and expenditure would be saved if law courts are established for every taluk headquarters.

I may also state that the plight of lawyers also has to be considered. We cannot make both ends meet with the 5 per cent fees allowed to us. Oftentimes we hear loud complaints that lawyers take away much of the money from the litigants. This is not a fact. We are getting only 5 per cent. We find that the salaries of every section have gone up, but the scales of fees of lawyers have not undergone any change and it still remains at 5 per cent. I submit that it should be raised to at least 10 per cent taking the present changed circumstances into consideration.

Coming to the question of appointment of Public Prosecutors and Government Pleaders, when applications are considered for these appointments, it is said: "This is a Congressman who has worked for the Congress during the election period and he may be appointed." It is on these considerations that the appointments are made. They do not look to the capacity and the qualifications of the applicants. I submit that when these appointments are made, they should look to the merits of the person and not the political party to which he belongs. They should not mind even if the person belongs to an Opposition party if such a person is a person of high calibre and can discharge the duties very well. Unfortunately we find that nowadays persons who are mostly retired lawyers and who are briefless are recruited to the posts of Public Prosecutors and Government Pleaders because they have done election campaign for the Congress during the last election. That is the only criterion on which the appointments of Public Prosecutors and Government Pleaders are nowadays made. I submit that they should be bold enough to take independent and dispassionate decisions and appoint persons of high calibre to these posts so that they would be able to discharge Government work in the best manner.

Since the Home Minister is also here, I would like to make one more submission though it may look a little selfish. A District Court has been established in Tumkur and a big room is provided for the lawyers, which can accommodate nearly 100 lawyers to sit at a time. But, no furniture has been provided as a result of which the room is not at all made use of by the lawyers. Even the Public Prosecutor's Chambers and the Government Pleader's Chambers are not made use of for want of furniture. So, I request the Government to make up their mind at least now to provide adequate and suitable furniture so that these rooms may be made use of by the lawyers and others concerned.

Thank you, Sir.

ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ).—ಮಾನ್ಯ ಸಭಾಧ್ಯಕ್ಷರೇ, ಸಾರಿಗೆ ಹಾಗೂ ನ್ಯಾಯಾಂಗ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆ ಏನಿದೆ ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರು ಅನೇಕರು ಈ ಬೇಡಿಕೆಯ ಮೇಲೆ ಮಾತನಾಡಿದ್ದಾರೆ. ಅದರಲ್ಲಿಯೂ ನಮ್ಮ ವಿರೋಧ ಪಕ್ಷದವರು ಬಹಳ ಹೆಚ್ಚಿಗೆ ಮಾತನಾಡಿದ್ದಾರೆ. ಇದರಿಂದ ನನಗಾದರೂ ಅನ್ನಿಸುತ್ತದೆ, ವಿರೋಧಪಕ್ಷದವರು ಹೇಳತಕ್ಕ ರೀತಿನೀತಿಯಲ್ಲಿ ಏನೋ ಸರ್ಕಾರ ರಚನೆಮಾಡಿರತಕ್ಕ ಮಂತ್ರಿಮಂಡಲವಿದೆ, ಅವರಿಗೆ ಬೇರೆ ಏನೂ ಕೆಲಸವಿಲ್ಲವೆ ಸಬ್ ಇನ್‌ಸ್ಪೆಕ್ಟರ್ ಮತ್ತು ಅಲ್ಲಿರತಕ್ಕ ಅಧಿಕಾರಿಗಳ ಹತ್ತಿರ ಮಾತನಾಡುವುದು, ಅವರನ್ನು ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳಿ ಕಳುಹಿಸುವುದು, ಹೀಗೆ ಇಷ್ಟರಲ್ಲೇ ಅವರ ಕೆಲಸವಾಯಿತು ಎಂಬುದಾಗಿ ಸುಲಭವಾಗಿ ಮಾತನಾಡಿದ್ದಾರೆ. ಅದರೆ ವಿರೋಧಪಕ್ಷದವರೂ ಸಹ ಅವರವರ ಕ್ಷೇತ್ರದಲ್ಲಿ ಸ್ಥಳೀಯರಾಗಿರುತ್ತಾರೆ. ಈ ದೇಶದಲ್ಲಿ ಯಾರಿಗೂ ಏನನ್ನೂ ಮೀಸಲಾಗಿಟ್ಟಿಲ್ಲ. ನಮ್ಮ ಸ್ನೇಹಿತರು ಅನೇಕರು ಅಧಿಕಾರಿಗಳಾಗಿರುವವರ ಮೇಲೆ ನೇರವಾಗಿ ಇಂಥಿಂಥ ತಪ್ಪುಗಳನ್ನು ಮಾಡುತ್ತಿದ್ದಾರೆಂದು ತಕ್ಷಣ ಬರೆದು ತಿಳಿಸಬೇಕು. ಅದು ಬಿಟ್ಟು ಈ ರೀತಿ ಅಸೆಂಬ್ಲಿಯಲ್ಲಿ ಮಾತ್ರ ಟೀಕಿಸುವುದು ಇದು ಪ್ರಜಾ ಸರ್ಕಾರಕ್ಕೆ ಕೇಡುಮಾಡುವುದು ಇದು ಈಗ ಕಡಿಮೆಯಾಗಬೇಕು. ನನ್ನ ಮಗನೇ ಅಧಿಕಾರವಲ್ಲಿರಲಿ. ತಪ್ಪು ಮಾಡಿರಲಿ ನಾನು ಇಲ್ಲಿಗೆ ಬಂದಾಗ ಮಾತ್ರ ಪಾರ್ಟಿಯ ದೃಷ್ಟಿಯಿಂದ ಸರ್ಕಾರದ ಮೇಲೆ ದೂರು ಹೇಳುವುದು ಹೋಗಬೇಕು. ಹೀಗಾದರೆ ನಿಜವಾಗಿ ಆಡಳಿತ ಅಷ್ಟರಮಟ್ಟಿಗೆ ಚೆನ್ನಾಗಿ ನಡೆಯುವುದಕ್ಕಾಗುವುದಿಲ್ಲ. ನಾವೆಲ್ಲರೂ ಲೋಕಲ್‌ನಲ್ಲಿರತಕ್ಕವರು ನಮ್ಮ ನೆಂಟರಿಷ್ಟರೇ ಅಧಿಕಾರಿಗಳಾಗಿರುವರು. ಅವರಿಗೆ ಇರತಕ್ಕ ಅನುಕೂಲ ಮತ್ತು ಅನಾನುಕೂಲಗಳು ಏನೆಂಬುದನ್ನು ಚರ್ಚೆಮಾಡಿ ಅವರ ತಪ್ಪುಗಳನ್ನು ಅವರಿಗೇ ಹೇಳಿ ಅವರನ್ನು ಒಳ್ಳೆಯ ರೀತಿಯಿಂದ ತರುವುದಕ್ಕೆ ಪ್ರಯತ್ನಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅನೇಕ ವಿಷಯಗಳಲ್ಲಿ ಮಾತನಾಡುವುದಕ್ಕೆ ನನಗೆ ಇಷ್ಟವಿದೆ. ನಾನು ಎಸ್. ಟಿ. ಎ. ಮತ್ತು ಆರ್. ಟಿ. ಎ. ಇಲಾಖೆಗಳಲ್ಲಿ ನಾನು ಸದಸ್ಯನಾಗಿದ್ದೆ. ಅಲ್ಲಿಯೂ ಕೆಲಸ ಮಾಡಿದ್ದೇನೆ. ಆಗ ಸಿದ್ದವೀರಪ್ಪನವರೂ ನಾನೂ ಅನೇಕ ವಿಷಯಗಳನ್ನು ಪ್ರಸ್ತಾಪಮಾಡುತ್ತಿದ್ದೆವು. ನಾನು ಎಸ್. ಟಿ. ಎ. ನಲ್ಲಿ ಇದ್ದಾಗ ಶ್ರೀ ಸಿದ್ದವೀರಪ್ಪನವರು ಗೃಹಮಂತ್ರಿಗಳಾಗಿದ್ದರು. ನನಗೇ ಗೊತ್ತು. ಅವರ ಸ್ನೇಹಿತರು ಮತ್ತು ನೆಂಟರು ಬಂದು ಬಸ್ ಲೈನು ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದಾಗ ಯಾವ ರೀತಿಯಲ್ಲಿ ನಮಗೂ ಹೇಳುತ್ತಿದ್ದರೆಂದು. ಆದರೆ ಈಗಲೂ ಎಸ್. ಟಿ. ಎ. ಯಲ್ಲಿ ಆ ರೀತಿಯಲ್ಲಿಯೇ ಪ್ರವೇಶಿಸುತ್ತಾರೆಂದು ಅವರ ಭಾವನೆ. ಅದರಂತೆ ತೀರ್ಮಾನ ಕೊಡುತ್ತಾರೆಂದು ಯಾರೂ ಭಾವಿಸಬಾರದು. ಪ್ರತಿಯೊಂದು ಬಸ್ ಲೈನಿನಲ್ಲಿಯೂ ಸರ್ಕಾರದವರ ಕೈವಾಡ ಇದೆಯೆಂದು ಅವರು ಹೇಳಿದ್ದಾರೆ. ಅಲ್ಲಿರುವವರು ಹೇಳಿದಂತೆ ಮಾಡಲು ಅವಕಾಶವಿಲ್ಲ. ಅವರು ಈಗ ಹೊರಗಡೆ ಹೋಗಿದ್ದಾರೆ. ನಾವಿಬ್ಬರೂ ಅನೇಕ ವರ್ಷಗಳ ಕಾಲ ಸ್ನೇಹಿತರಾಗಿದ್ದೆವು. ನಾನು ಇನ್ನೂ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟವುಳ್ಳವನಾಗಿದ್ದೇನೆ. ಈಗ ಆರ್. ಟಿ. ಎ. ಎಂದು ನೇಮಕ ಮಾಡುತ್ತಾರೆ. ಅದರೊಳಗೆ ಒಬ್ಬ ಖಾಸಗೀ ಮನುಷ್ಯನಿರುತ್ತಾನೆ. ನಾಲ್ಕು ಜನ ಅಫಿಷಿಯಲ್ಸ್ ಇರುತ್ತಾರೆ. ಒಬ್ಬ ಖಾಸಗಿ ಮನುಷ್ಯನನ್ನು ಹಾಕುವುದರಿಂದ ಏನೂ ಪ್ರಯೋಜನವಾಗುವುದಿಲ್ಲ 3-4 ಜನ ಖಾಸಗಿಯವರಿರಬೇಕು. ಸ್ಥಳೀಯರನ್ನೇ ಹಾಕಬೇಕೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆಂದು ನಾನು ತಿಳಿದಿದ್ದೇನೆ. ಅದು ಖಂಡಿತವಾಗಿ ಸರಿಯಾಗಿರುವುದಿಲ್ಲ. ಸ್ವಲ್ಪಮಟ್ಟಿಗೆ ದೂರದಲ್ಲಿರುವವರನ್ನೇ ಅಲ್ಲಿ ನೇಮಿಸಬೇಕು. ಅವರು ಅಷ್ಟು ದೂರದಿಂದ ಬಂದರೆ ಆಗ ಅವರಿಂದಾಗತಕ್ಕ ಅನುಕೂಲ ಹಾಗೂ ಅನಾನುಕೂಲಗಳನ್ನು ತಿಳಿಯಲು ಸಹಕಾರಿಯಾಗುತ್ತದೆ. ಅದಿಲ್ಲದೆ ಸುಮ್ಮನೆ ಟೌನಿನಲ್ಲಿ ವಾಸವಾಗಿರತಕ್ಕವರನ್ನೇ ಹಾಕಿದರೆ ನಿಜವಾಗಿ ಇತರರು ಹೇಳುವುದರ ಮೇಲೆಯೇ ಡಿಪೆಂಡ್ ಆಗಬೇಕಾಗುತ್ತದೆ. ಇದರಿಂದ ಆರ್. ಟಿ. ಎ. ಯಲ್ಲಿ ಯಾವ ಒಂದು ಸರಿಯಾದ ತೀರ್ಮಾನವನ್ನೂ ಕೊಡುವುದಕ್ಕಾಗುವುದಿಲ್ಲ. ಅದರಿಂದ ಸ್ವಲ್ಪ ತೊಂದರೆಗಳಾಗುತ್ತವೆ. ಇನ್ನು ಆರ್. ಟಿ. ಒ. ಆಫೀಸಿನಲ್ಲಿ ಜನರಿಗೆ ಬಹಳ ತೊಂದರೆಗಳಾಗುತ್ತವೆ. ವ್ಯವಸಾಯದ ಉದ್ದೇಶಕ್ಕಾಗಿ ಟ್ರಾಕ್ಟರುಗಳನ್ನು ತಂದರೆ ಸಾಕಷ್ಟು ಜಾಗ್ರತೆಯಾಗಿ ಅವನ್ನು ರಿಜಿಸ್ಟರ್ ಮಾಡುತ್ತಾ ಇಲ್ಲ. ಒಂದೊಂದು ವಿಷಯಕ್ಕೂ ಒಂದೊಂದು ಉತ್ತರ ಬರೆದು ವಿಪರೀತವಾಗಿ ಕಾಲವಿಳಂಬ ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿಯೇ ಒಬ್ಬರು ಜನವರಿ ತಿಂಗಳಲ್ಲಿ ಒಂದು ಟ್ರಾಕ್ಟರನ್ನು ತಂದರು. ಅದನ್ನು ಜಾಗ್ರತೆಯಾಗಿ ರಿಜಿಸ್ಟರ್ ಮಾಡಿ ಕೊಟ್ಟಿಲ್ಲ. ಅದು ಇನ್ನೂ ಪತ್ರ ವ್ಯವಹಾರದಲ್ಲಿಯೇ ಇದೆ. ಆದ್ದರಿಂದ ಬ್ರೇಕ್ ಇನ್‌ಸ್ಪೆಕ್ಟರ್ ಆಗಿರುವವರು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಅಲ್ಲಿರತಕ್ಕ ವಾಹನಗಳನ್ನು ಇನ್‌ಸ್ಪೆಕ್ಷನ್ ಮಾಡುವ ಅವಕಾಶ ಇರಬೇಕು. ಕಾರಣ, ಸ್ವಲ್ಪ

ಮಟ್ಟಿಗೆ ಆಡಳಿತದಲ್ಲಿ ಬಿಗಿ, ಕ್ರಮಬದ್ಧತೆ ಬರುತ್ತದೆ. ಆದರೆ ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗೆ ಸುಮಾರು 60–70 ಮೈಲಿ ದೂರ ಬಂದು 2-3 ದಿನ ಕಾಯಬೇಕಾಗುತ್ತೆ, ಆಗ ಅವರ ದಿನ ಉತ್ಪತ್ತಿ ನೂರಾರು ರೂಪಾಯಿಗಳು ಲುಕ್ಸಾನು ಆಗುವದರಿಂದ. ಲಂಚ ಕೊಡುವ ಮನೋಭಾವನೆ ಬಂದು ಅವರ ಲಾಭಕ್ಕೋಸ್ಕರ ಏನಾದರೂ ಮಾಡಿಕೊಂಡು ಹೋಗಲಿ ಎಂದು ಹೇಳುವ ಸನ್ನಿವೇಶ ಬರುತ್ತದೆ. ಆದ್ದರಿಂದ ಪ್ರತಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿಯೂ ತಕ್ಷಣ ತಕ್ಕ ಕ್ರಮ ತೆಗೆದುಕೊಂಡು ಕಾಲಕ್ಕೆ ಸರಿಯಾಗಿ ವಾಹನಗಳನ್ನು ತೆಗೆದುಕೊಂಡು ಬಂದು ಚೆಕ್ ಮಾಡಿಸುವ ವ್ಯವಸ್ಥೆಯನ್ನು ಮಾಡಿಸಬೇಕು. ಕಾಲವಿಳಂಬ ತಪ್ಪಿ ಅವರ ಕೆಲಸ ಅವರು ಮಾಡಿಕೊಂಡು ಹೇಳಿದ ಸಮಯಕ್ಕೆ ತೆರಳು ಅವಕಾಶ ಆಗುವುದರಿಂದ ಆಡಳಿತದಲ್ಲಿ ಸುಧಾರಣೆ ಯಾಗುವುದಕ್ಕೆ ಅನುಕೂಲವಾಗಿರುತ್ತದೆ. ಪ್ರತಿಯೊಂದು ಹೆಡ್‌ಕ್ವಾರ್ಟರಿನಲ್ಲಿಯೂ ಇದಕ್ಕೆ ಅವಕಾಶ ಇರಬೇಕೆಂಬುದಾಗಿ ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಅನೇಕ ವಿಷಯಗಳನ್ನು ಮಾತ ನಾಡುವುದಕ್ಕೆ ಈಗ ಅವಕಾಶವಿಲ್ಲ.

ಇನ್ನು ಪ್ರೈವೇಟ್ ಟ್ಯಾಕ್ಸಿಗಳ ಬಗ್ಗೆ ಯಾವ ಬಸ್ ಸ್ಟ್ಯಾಂಡಿಗೆ ಹೋದರೂ ಹತ್ತಾರು ಟ್ಯಾಕ್ಸಿಗಳೇನೋ ಇರುತ್ತದೆ. ಬಸ್‌ನಲ್ಲಿದ್ದಾಗಲೇ ಬಂದು ಕರೆಯುತ್ತಾರೆ. ಬಾಡಿಗೆಗೋಸ್ಕರ ಅವನ್ನು ಇಟ್ಟುಕೊಂಡಿರುತ್ತಾರೆ. ಆದರೆ ಬಾಡಿಗೆ ಟ್ಯಾಕ್ಸನ್ನು ಕಟ್ಟೋ ಇರುವುದಿಲ್ಲ. ಸರ್ಕಾರಕ್ಕೆ ಇದರಿಂದ ಬರತಕ್ಕ ವರಮಾನ ಲಕ್ಷಾಂತರ ರೂಪಾಯಿಗಳು ಲುಕ್ಸಾನು ಆಗುತ್ತಿದೆಯೆಂದು ಹೇಳಿದರೆ ಅದರಲ್ಲಿ ಏನೂ ತಪ್ಪಿಲ್ಲ. ಇದನ್ನು ಎಲ್ಲರೂ ಕಣ್ಣಿನಿಂದ ನೋಡಿಯೂ ಟ್ಯಾಕ್ಸಿ ತೆರಿಗೆಯನ್ನು ಕಟ್ಟದೆ ಬಾಡಿಗೆ ಹೊಡೆಯುತ್ತಿದ್ದರೂ ಏನೂ ಕ್ರಮ ಕೈಗೊಳ್ಳುತ್ತಿಲ್ಲ. ಪ್ರತಿ ನಿಮಿಷ, ಪ್ರತಿ ಘಂಟೆಯಲ್ಲೂ ಟ್ಯಾಕ್ಸಿಯನ್ನು ಬಾಡಿಗೆಗೆ ಹೊಡೆಯುತ್ತಿದ್ದಾರೆ. ಅದನ್ನು ಕಂಡು ಹಿಡಿಯುವ ವ್ಯವಸ್ಥೆ ಏಕೋ ಸರಿಯಾಗಿಲ್ಲ. ಸರ್ಕಾರದವರು ಆ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿನ ಅಗತ್ಯತೆಯನ್ನು ಕೊಡಬೇಕು ಎಂಬುದಾಗಿ ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ಬಸ್ ಟ್ರಾನ್ಸ್‌ಪೋರ್ಟ್ ವಿಷಯ. ಸುಮ್ಮನೆ ಬಸ್ ರಾಷ್ಟ್ರೀಕರಣ ಮಾಡುತ್ತೇವೆಂದರೆ ಏನೂ ಅನುಕೂಲವಿಲ್ಲ. ಅದನ್ನು ಎಲ್ಲಾ ರಸ್ತೆಗಳಲ್ಲಿಯೂ ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಹಾಸನ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡಿದ್ದೀರಿ. 4-6 ಮೈಲಿ ಇರುವ ಮಣ್ಣಿನ ರಸ್ತೆಗಳಲ್ಲಿ ಸರ್ಕಾರ ಓಡಿಸುವುದು ಕಷ್ಟವಾಗಿ ಜನರಿಗೆ ತೊಂದರೆಯಾಗಿದೆ. ಮುಖ್ಯವಾಗಿ ತಾಲ್ಲೂಕು ಹೆಡ್‌ಕ್ವಾರ್ಟರ್ಸಿಗೂ ಬಸುಗಳು ಹೋಗಿ ಬರುವ ಅವಕಾಶವನ್ನು ಮಾಡಬೇಕು. ನಮ್ಮ ಕಡೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಸರ್ಕಾರೀ ಬಸ್ಸುಗಳ ಸರ್ವಿಸ್ಸೇ ಇಲ್ಲ. ಕ್ರಮೇಣ ಎಲ್ಲಾ ಮುಖ್ಯ ರಸ್ತೆಗಳನ್ನು ಮಾತ್ರ ರಾಷ್ಟ್ರೀಕರಣ ಮಾಡುವದು ಒಳ್ಳೆಯದು. ಆ ರೀತಿಯ ಒಂದು ಮನಾಪಲಿಯಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಈ ವಿಷಯದಲ್ಲಿ ನಾನು ಇನ್ನು ಹೆಚ್ಚಿಗೆ ಹೇಳುವುದಿಲ್ಲ. ಮುಖ್ಯವಾಗಿ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಸರ್ಕಾರಿ ಬಸ್ಸುಗಳು ಹೋಗಿಬರುವ ಅವಕಾಶವನ್ನು ಕೂಡಲೇ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನ್ಯಾಯಾಂಗ ವಿಷಯ. ಈಗಿನ ನ್ಯಾಯಾಲಯದಲ್ಲಿ ಬಹುಶಃ ಕೇಸುಗಳು ವಿಪರೀತ ವಾಗಿ ಜಾಸ್ತಿಯಾಗುತ್ತಿವೆ. ಕಾರಣ, ಸರ್ಕಾರದವರು ಕಾನೂನುಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಅದು ಸ್ವಾಭಾವಿಕ. ಅನೇಕ ವಿಷಯಗಳಲ್ಲಿ ಸ್ಟೇ ಆರ್ಡರ್ ಕೊಡುವುದೂ ಸಹ ಸಕಾರಣವಾಗಿರುತ್ತದೆ. ಅದಕ್ಕೋಸ್ಕರ ಕೊಡುತ್ತಾರೆ. ಆದರೆ ಸ್ಟೇ ಕೊಡುವ ಕಾಲದಲ್ಲಿ ಮುಂಜಾಗ್ರತೆ ವಹಿಸ ಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗಿ ಸಾವಿರಾರು ರೂಪಾಯಿಗಳು, ಲಕ್ಷಾಂತರ ರೂಪಾಯಿ ಗಳು ಸರ್ಕಾರಕ್ಕೂ, ರೈತರಿಗೂ ಲುಕ್ಸಾನು ಆಗುತ್ತದೆ. ನಮ್ಮ ಕಡೆಯಲ್ಲಿ ಒಂದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೋಸ್ಕರ ಒಂದು ಸೈಟನ್ನು ಕೊಟ್ಟಿದ್ದರು. ಅದರ ತಳಪಾಯ ಕಟ್ಟಡ ವೆಲ್ಲಾ ಮುಗಿಸಿದರು. ಈಗ ಏನೋ ಒಂದು ಕಾರಣದಿಂದ ಪ್ರೈವೇಟ್ ಪಾರ್ಟಿ ಒಂದು ಸ್ಟೇ ಆರ್ಡರನ್ನು ಕೊಟ್ಟಿದ್ದಾರೆ. ಅದು ಸುಮಾರು ಒಂದೂವರೆ ವರ್ಷ ಆಗಿದೆ. ಇಷ್ಟು ವಿಳಂಬವಾದರೆ ಹೇಗೆ? ಇದರಲ್ಲಿ ಸರ್ಕಾರದವರು ಹಣವನ್ನು ಹಾಕಿರುತ್ತಾರೆ, ಸಾರ್ವಜನಿಕರ ಷೇರು ಸಹ ಇರುತ್ತದೆ. ಇದರಿಂದ ಎಷ್ಟು ಲುಕ್ಸಾನು ಆಗುತ್ತದೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು.

3-30 P.M.

ಇನ್ನು ಹೈಕೋರ್ಟಿನಲ್ಲಿ ರಿಟ್ ಅರ್ಜಿಗಳನ್ನು ಹಾಕುವ ಸಂಭವ ಬಹಳವಾಗಿ ಇದೆ. ಇದಕ್ಕೆ ಬೇರೆ ಬೆಂಚ್ ಮಾಡಬೇಕೆಂದೂ ಅವನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕೆಂದೂ ಹೇಳುತ್ತೇನೆ.

(ಶ್ರೀ ಕೆ. ಎನ್. ವೀರಪ್ಪಗೌಡ)

ನಮ್ಮ ಮುನಿಸಿಪಾಲಿಟಿಯಲ್ಲಿ ಮತ್ತು ಜಿಲ್ಲಾ ಬ್ಯಾಂಕಿನಲ್ಲಿ ಕೌನ್ಸಿಲರು, ಡೈರೆಕ್ಟರುಗಳೂ ಆಗಿದ್ದವರನ್ನು ಸರ್ಕಾರದ ಕಾನೂನು ರೀತ್ಯಾ ಡಿಸ್‌ಕ್ವಾಲಿಫೈ ಮಾಡಿ ಡಿವಿಜನಲ್ ಕಮೀಷನರು ಆರ್ಡರ್ ಮಾಡಿದರು. ಅದರ ವಿರುದ್ಧ ಅವರು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಸ್ಟೇ ಆರ್ಡರ್ ಆಗಿ ಇನ್ನೊಂದು ಚುನಾವಣೆ ಬಂದರೂ ಅದು ತೀರ್ಮಾನವಾಗಿಲ್ಲ. ಸರ್ಕಾರಿ ಕಾನೂನು ರೀತ್ಯಾ ಡಿಸ್‌ಕ್ವಾಲಿಫೈ ಆದರೂ ಅವರು ಅಲ್ಲಿಯೇ ಇರಬೇಕಾಗಿದೆ. ಅವರನ್ನು ರಿಮೂವ್ ಮಾಡಿ ಎಂದು ಆರ್ಡರ್ ಪಾಸ್ ಮಾಡಬಹುದು. ಬಹಳ ಸಥಾನ. ಇಂಥ ಮನೋಭಾವನೆ ಬೆಳೆದು ರಿಟ್ ಅರ್ಜಿಗಳು ಜಾಸ್ತಿಯಾಗಿ ದೇಶದಲ್ಲಿ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಕಷ್ಟವಾಗಿದೆ. ನ್ಯಾಯಾಲಯಗಳು ಜಾಸ್ತಿಯಾಗಬೇಕು, ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್ಸಿನಲ್ಲಿಯೂ ಇರಬೇಕು. ಶೃಂಗೇರಿ, ತೀರ್ಥಹಳ್ಳಿ, ಕೊಪ್ಪ, ಮೂಡಗೆರೆ ಈ ಸ್ಥಳಗಳಲ್ಲಿ ನ್ಯಾಯಾಲಯಗಳಿಲ್ಲ. ಈ ಪ್ರದೇಶದ ಜನರ ನ್ಯಾಯ ಬೇಗ ತೀರ್ಮಾನವಾಗುವುದಕ್ಕೆ ಬಹಳ ಕಷ್ಟವಾಗಿದೆ. ಇದಲ್ಲದೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಬರತಕ್ಕಂಥ ಅಪ್ಲಿಕೇಷನ್‌ಗಳು ಕೋರ್ಟಿನಲ್ಲಿ ಎಷ್ಟೋ ಇವೆ. ಈ ಅರ್ಜಿಗಳ ಸಂಖ್ಯೆ ವಿಪರೀತವಾಗಿದೆ. ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ ಇದು ಜಾಸ್ತಿಯಾಗಿದೆ. ಆದುದರಿಂದ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದೊಂದು ಕೋರ್ಟ್ ಏರ್ಪಾಡು ಮಾಡಿ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಭೂಸುಧಾರಣೆ ಪ್ರಕಾರ ಗೇಣಿದಾರರಿಗೆ ಮಾಡಿಕೊಡಬೇಕಾದ ಭರವಸೆ ಬೇಗ ಪ್ರಯೋಜನವಾಗುವುದಿಲ್ಲ. ಅವರಿಗೆ ಹೆಚ್ಚು ಕಾಲ ದೊರೆಯುವ ಮೂಲಕ ರಿಕಾರ್ಡ್ ಬದಲಾವಣೆ ಮಾಡುವುದಕ್ಕೆ ಜಮೀನುದಾರರಿಗೆ ಅವಕಾಶ ಸಿಕ್ಕಿ ತೀರ್ಮಾನವೇ ವ್ಯತ್ಯಾಸವಾಗುತ್ತದೆ. ನ್ಯಾಯಾಲಯ ಏರ್ಪಾಡು ಮಾಡುವುದಕ್ಕೆ ಹೆಚ್ಚು ಖರ್ಚು ಮಾಡಿದರೂ ಚಿಂತೆಯಿಲ್ಲ ಜನರಿಗೆ ಅನುಕೂಲವಾಗಬೇಕು, ಬೇಗ ಮಾಡಿಕೊಡಬೇಕೆಂದು ಹೇಳುತ್ತೇನೆ. ನನಗೆ ಮಾತನಾಡಲು ಕೊಡತಕ್ಕಂಥ ಹತ್ತು ನಿಮಿಷದಲ್ಲಿ ಭಾಷಣ ಮುಗಿಸುತ್ತಾ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

(MR. SPEAKER in the chair)

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್ ನಂಬರ್ 4, 9, 11 ಈ ಬೇಡಿಕೆಗಳ ವಿಚಾರದಲ್ಲಿ ಕೆಲವಾರು ವಿಷಯಗಳ ಬಗ್ಗೆ ವಿರೋಧವಾಗಿ ಮಾತನಾಡುತ್ತೇನೆ.

ಮೊಟ್ಟಮೊದಲು 9ನೇ ಬೇಡಿಕೆ ಬಗ್ಗೆ ಅಂದರೆ ಪಾರ್ಲಿಮೆಂಟ್, ಸ್ಟೇಟ್ ಯೂನಿಯನ್ ಟೆರಿಟರಿ ಲೆಜಿಸ್ಲೇಚರ್ ಈ ವಿಷಯ ಮಾತನಾಡುತ್ತೇನೆ. ಒಂದು ವಿಷಯ ಸರಕಾರಕ್ಕೆ ಮನವರಿಕೆ ಮಾಡಿಕೊಡುತ್ತೇನೆ. ಪ್ರಜಾಪ್ರಭುತ್ವ ದೇಶದಲ್ಲಿ ಚೆನ್ನಾಗಿ ನಡೆಯಬೇಕು ಎನ್ನುವ ಭಾವನೆ ಇದ್ದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಂದ ಆರಿಸಿ ಹೋಗತಕ್ಕಂಥ ಪ್ರತಿನಿಧಿಗಳಿಂದ ರಾಜ್ಯಭಾರ ನಡೆಯಬೇಕು. ನಮ್ಮ ದೇಶದಲ್ಲಿ ಅನೇಕ ರಾಜ್ಯಗಳಿದ್ದು ಕೆಲವಾರು ರಾಜ್ಯಗಳ ವಿನಾ ಪ್ರತಿಯೊಂದು ರಾಜ್ಯದಲ್ಲಿಯೂ ಮೇಲ್ಮನೆ ಅಂದರೆ ಲೆಜಿಸ್ಲೇಟಿವ್ ಕೌನ್ಸಿಲ್ ಇದೆ. ಅದೇ ರೀತಿ ಮೈಸೂರು ರಾಜ್ಯ ಕೂಡ ಮೇಲ್ಮನೆ ಹೊಂದಿದೆ. ಈ ಮೇಲ್ಮನೆ ಯಾವ ಉದ್ದೇಶದಿಂದ ಇರಬೇಕು ಎಂದು ರಾಜ್ಯಾಂಗದಲ್ಲಿ ಹೇಳಿದೆಯೋ ಅದಕ್ಕೆ ವಿರೋಧವಾಗಿ ಬೇರೆ ರೀತಿಯಲ್ಲಿ ಇದರ ದುರುಪಯೋಗವಾಗುತ್ತಿರುವುದು ಕಾಣಿಸುತ್ತಿದೆ. ಪ್ರತಿನಿಧಿಗಳಿಂದ ಆರಿಸಲ್ಪಟ್ಟ ಸದಸ್ಯರು ಬಂದು ಇಂಥ ಸದನದಲ್ಲಿ ಕೂತು ವಿಷಯ ಚರ್ಚೆಮಾಡಿ ಸರಕಾರದ ಮುಂದೆ ಇಡುವುದಕ್ಕೆ ದಾರಿ ಇರುವುದರಿಂದ ಸರಕಾರದ ಮೇಲೆ ಪ್ರಭಾವ ಬೀರುವುದಕ್ಕೆ ಹೆಚ್ಚು ಗಮನ ಹರಿಸುವುದಕ್ಕೆ ಇದರಲ್ಲಿ ಅವಕಾಶವಿದೆ. ಆದರೆ ಮೇಲ್ಮನೆ ಯಾವ ಉದ್ದೇಶದಿಂದ ಸ್ಥಾಪನೆಯಾಗಿದೆಯೋ ಅದು ಈ ಉದ್ದೇಶವಲ್ಲ. ಈ ಮೇಲ್ಮನೆಯಿಂದ ಸರಕಾರದ ಖಜಾನೆಗೆ ವಿಪರೀತ ಖರ್ಚು ಬೀಳುತ್ತಿದೆ. ರಾಜ್ಯ ಸರಕಾರದವರು ಈ ಮೇಲ್ಮನೆಯನ್ನು ಕೂಡಲೇ ರದ್ದುಮಾಡಬೇಕು ಮತ್ತು ಈ ಖರ್ಚನ್ನು ನಿಲ್ಲಿಸಿ ಬೇರೆ ಕೆಲಸಕ್ಕೆ ಇದನ್ನು ಉಪಯೋಗಿಸಿಕೊಳ್ಳಬೇಕು. ಜನರಿಂದ ಆರಿಸಿ ಬಂದಂಥ ಅಸೆಂಬ್ಲಿ ಇದು ಒಂದೇ ಸದನ ಇರಬೇಕು. ಈ ಮೇಲ್ಮನೆ ಇರುವುದು ಅನಾವಶ್ಯಕ, ರದ್ದುಮಾಡಬೇಕು ಎಂಬ ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ. ಇಷ್ಟು 9ನೇ ಬೇಡಿಕೆ ಬಗ್ಗೆ ಹೇಳುತ್ತೇನೆ.

ಇನ್ನು 11ನೇ ಬೇಡಿಕೆ. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟಿಸ್ ಬಗ್ಗೆ ಮಾತನಾಡುತ್ತಾ ಕೆಲವಾರು ವಿಷಯಗಳನ್ನು ಸಂಬಂಧಪಟ್ಟ ಮಂತ್ರಿಗಳ ಮತ್ತು ಸರಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಅನೇಕರು ಮಾತನಾಡುತ್ತಾ ಕೋರ್ಟ್ ಬಿಲ್ಡಿಂಗ್ ಹೇಗೆ ಇರಬೇಕು,

ಫಲಕರಣೆಗಳು ಹೇಗೆ ಇರಬೇಕು, ನ್ಯಾಯಾಧೀಶರ ನೇಮಕ ಹೇಗೆ ಮಾಡಬೇಕು ಎಂದು ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಇದಕ್ಕೆ ಪೂರಕವಾಗಿ ಮಾತನಾಡಲು ನಾನು ಇಷ್ಟಪಡುತ್ತೇನೆ. ಸುಮಾರಾಗಿ ಬೆಂಗಳೂರು ಸಿಟಿಯಾಗಲಿ, ಮೈಸೂರು ರಾಜ್ಯದಲ್ಲಿಯು ಯಾವ ಜಾಗ ತೆಗೆದುಕೊಂಡರೂ ನ್ಯಾಯಾಲಯಕ್ಕೆ ಸರಿಯಾದ ಒಂದು ಬಿಲ್ಡಿಂಗ್ ಇಲ್ಲ. ಇರತಕ್ಕ ಬಿಲ್ಡಿಂಗ್ ಸಮರ್ಪಕವಾಗಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಇದನ್ನು ನೋಡುತ್ತೇವೆ. ಸಾಗರ, ಭದ್ರಾವತಿಯಲ್ಲಿಯೂ ನೋಡುತ್ತಿದ್ದೇವೆ. ಹಿಂದಕ್ಕೆ ಕುದುರೆ ಕಟ್ಟುವುದಕ್ಕೆ ಮಾಡಿದ ಲಾಯದಲ್ಲಿ ಇಂದು ನ್ಯಾಯಾಲಯ ನರಸಿಂಹರಾಜಪುರದಲ್ಲಿ ಇದೆ. ಶಿವಮೊಗ್ಗ ಕೋರ್ಟ್ ಬಿಲ್ಡಿಂಗಿನ ಗೋಡೆ ಕುಸಿದು ಬಿದ್ದಿದೆ. ಮುನಸಿಪ್ ಕೋರ್ಟು, ಸಿವಿಲ್ ಜಡ್ಜ್ ಕೋರ್ಟು, ಹೀಗೆ ಎಲ್ಲಾ ಕೋರ್ಟುಗಳನ್ನೂ ಇಂಥ ಕಟ್ಟಡದಲ್ಲಿಯೇ ನಡೆಸುತ್ತಿದ್ದಾರೆ. ಈ ಕಟ್ಟಡದಲ್ಲಿ ಸಂಬಂಧಪಟ್ಟ ವಕೀಲರಿಗೆ ಕೂಡುವುದಕ್ಕೆ ಜಾಗ ಇಲ್ಲ, ನ್ಯಾಯಾಧೀಶರಿಗೆ ಕೋರ್ಟು ಕೆಲಸ ನಿರ್ವಹಣೆ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಇದೇ ರೀತಿ ಅನೇಕ ಕೋರ್ಟುಗಳನ್ನು ನಡೆಸುತ್ತಿದ್ದಾರೆ. ಕೋರ್ಟಿನಲ್ಲಿ ಇರತಕ್ಕ ಕುರ್ಚಿ ಮೇಜುಗಳ ವಿಚಾರ ಹೇಳುವುದಾದರೆ ಕಾಲುಗಳು ಸರಿಯಾಗಿ ಇರತಕ್ಕ ಕುರ್ಚಿ ಟೇಬಲ್ ಕಾಣುವುದಿಲ್ಲ. ಸರಕಾರ ಇದಕ್ಕೆ ಗಮನಕೊಡುತ್ತಿಲ್ಲ. ಅಲ್ಲಿಯ ಕುರ್ಚಿ ಟೇಬಲ್‌ಗಳಿಗೆ ನಾಲ್ಕು ಕಾಲು ಇವೆ ಎಂದು ಭಾವಿಸುವುದು ತಪ್ಪು. ಈ ಕೋರ್ಟಿನಲ್ಲಿ ಇರತಕ್ಕ ಕುರ್ಚಿಗೆ ಎರಡೂ ಮುಕ್ಕಾಲು ಅಥವಾ ಮೂರು ಕಾಲುಗಳು ಇರುತ್ತವೆ. ಇಂಥ ಕಚೇರಿಯಲ್ಲಿ ನ್ಯಾಯ ನಿರ್ವಹಣೆ ಮಾಡುತ್ತಿದ್ದಾರೆ. ಸರಿಯಾದ ಫರ್ನೀಚರ್ ಇಲ್ಲದೇ ಇರತಕ್ಕದ್ದನ್ನು ತಮ್ಮ ಅವಗಾಹನೆಗೆ ತರುತ್ತೇನೆ.

ಇನ್ನು ನ್ಯಾಯಾಧೀಶರ ಬಗ್ಗೆ ಹೇಳುವುದಾದರೆ, ಅವರ ಸ್ಥಾನ ಉನ್ನತ ಮಟ್ಟದಲ್ಲಿ ಇದೆ. ಆದರೆ ಅವರು ತೃಪ್ತಿಯಿಂದ ಇಲ್ಲ ಎಂಬುದನ್ನು ತಮಗೆ ತಿಳಿಸಲು ಅಪೇಕ್ಷಿಸುತ್ತೇನೆ. ಡಿಸ್ಟ್ರಿಕ್ಟ್ ಕೋರ್ಟ್ ನ್ಯಾಯಾಧೀಶರಿಗೆ ಸೆಷನ್ಸ್ ಕೋರ್ಟ್ ನ್ಯಾಯಾಧೀಶರಿಗೆ ಕೊಡುವ ಕ್ವಾರ್ಟರ್ಸ್ ಬಿಟ್ಟರೆ ಬೇರೆ ನ್ಯಾಯಾಧೀಶರಿಗೆ ಇರುವುದಕ್ಕೆ ಕ್ವಾರ್ಟರ್ಸ್‌ಗಳು ಇಲ್ಲ. ನ್ಯಾಯಾಧೀಶರಿಗೆ ವರ್ಗವಾದರೆ ಮೊದಲು ಅವರು ಇರುವುದಕ್ಕೆ ಮನೆ ಹುಡುಕಬೇಕಾಗುತ್ತದೆ. ಆದುದರಿಂದ ಪ್ರತಿಯೊಬ್ಬ ನ್ಯಾಯಾಧೀಶರಿಗೆ ವಾಸಿಸುವುದಕ್ಕೆ ಕ್ವಾರ್ಟರ್ಸ್ ತಯಾರಿಸಿ ಕೊಡುವ ವ್ಯವಸ್ಥೆ ಮಾಡಬೇಕು. ವರ್ಗವಾದ ತಕ್ಷಣ ಅವರು ಮನೆ ಹುಡುಕುತ್ತಿರುತ್ತಾರೆ. ಮನೆಯ ಸಲುವಾಗಿ ಕಷ್ಟಪಡುತ್ತಾರೆ. ಇದಕ್ಕಾಗಿ ಅನೇಕರು ವರ್ಗ ಮಾಡುವುದು ಬೇಡ ಎಂದು ಸಹ ಹೇಳುತ್ತಾರೆ. ಇದಕ್ಕೆ ಅವಕಾಶ ಕೊಡಬೇಡಿ. ಇದಕ್ಕೆ ಸರಕಾರ ಗಮನ ಹರಿಸಬೇಕು ಎಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ಬಡ ಜನರು ಹೆಚ್ಚಾಗಿದ್ದಾರೆ. ಈ ಬಡ ಜನರಿಗೆ ಫ್ರೀ ಲೀಗಲ್ ಏಡ್ ದೊರೆಯುವ ಹಾಗೆ ಕಾನೂನು ಮಾಡಬೇಕು. ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ನೂರಕ್ಕೆ ಎಂಭತ್ತರಷ್ಟು ಜನ ಹಳ್ಳಿಗಳಲ್ಲಿರುತ್ತಾರೆ. ನೂರಕ್ಕೆ ಎಂಭತ್ತರಷ್ಟು ಭಾಗ ಬಡವರಿಗೆ ಸಂಬಂಧಪಟ್ಟ ವ್ಯವಹಾರ ಕೋರ್ಟಿನಲ್ಲಿ ಇರುತ್ತದೆ. ಸ್ಟಾಂಪ್ ಫೀಜ್ ಕೊಟ್ಟು ತುಂಬಾ ಖರ್ಚುಮಾಡಿ ಬಡವರಿಗೆ ಕೋರ್ಟು ವ್ಯವಹಾರ ನಡೆಸುವುದಕ್ಕೆ ಆಗುವುದಿಲ್ಲ. ಆದುದರಿಂದ ಬಡವರಿಗೆ ಫೀಜ್ ಇಲ್ಲದ ಹಾಗೆ ಮಾಡಿ ಫ್ರೀ ಲೀಗಲ್ ಏಡ್ ದೊರೆಯುವುದಕ್ಕೆ ಪ್ರತ್ಯೇಕವಾದ ಒಂದು ಶಾಸನ ರಚನೆ ಮಾಡಬೇಕು ಎಂದು ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ. ಕೆಲವರು ಸದಸ್ಯರು ಆಗಲೇ ತಿಳಿಸಿಬಿಟ್ಟಿದ್ದಾರೆ, ಕೋರ್ಟ್‌ನಲ್ಲಿ ಕಂಟೆಂಪ್ಟ್ ಆಫ್ ಕೋರ್ಟ್ ಪ್ರೊಸೀಡಿಂಗ್ಸ್ ಸರ್ಕಾರದ ಮೇಲೆ ನಡೆದಿತ್ತು ಎಂದು. ಸೊರಬ ತಾಲ್ಲೂಕು ಆಫೀಸಿನಲ್ಲಿ ಒಬ್ಬರು ಗುಮಾಸ್ತರು ಇದ್ದರು. ಅವರು ತಪ್ಪು ಮಾಡಿದರು ಎಂದು ಸಸ್ಪೆನ್‌ಷನ್‌ನಲ್ಲಿ ಇಟ್ಟರು, ಡಿಸ್ಮಿಸ್ ಮಾಡಿದರು. ಕೋರ್ಟಿನಲ್ಲಿ ಅವರಂತೆ ಕೇಸು ಆಗಿದೆ. ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಅನೇಕಸಾರಿ ಮನವಿಗಳನ್ನು ಸರ್ಕಾರಕ್ಕೆ ಕಳುಹಿಸಿದರೂ ಇವೊತ್ತು ಸಹ ಏನೂ ಮಾಡದೆ ಅದನ್ನು ಪೆಂಡಿಂಗ್‌ನಲ್ಲಿ ಇಟ್ಟುಕೊಂಡಿದ್ದಾರೆ.

ಕೊನೆಯದಾಗಿ, ಬಸ್ಸುಗಳ ರಾಷ್ಟ್ರೀಕರಣದ ಬಗ್ಗೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ ಮತ್ತು ಭದ್ರಾವತಿಗೆ 8–9 ಮೈಲಿ ಇರತಕ್ಕ ದಾರಿಯಲ್ಲಿ ದಿವಸಕ್ಕೆ 50-60-100 ಬಸ್ಸುಗಳು ಓಡಾಡುತ್ತಾ ಇವೆ. ಅಷ್ಟು ಜನಸಂದಣಿ ಜಾಸ್ತಿಯಾಗಿದೆ. ಇವನ್ನು ಸರ್ಕಾರದವರು ರಾಷ್ಟ್ರೀಕರಣ ಮಾಡಬೇಕು ಎನ್ನುವ ಯೋಚನೆ ಮಾಡಿ ಈಗ ಕೈಬಿಟ್ಟಿದ್ದಾರೆ, ಏಕೆ ಎನ್ನುವುದು ಅರ್ಥವಾಗುತ್ತಾ ಇಲ್ಲ. ನನಗೆ ತಿಳಿದು ಬಂದುದರಲ್ಲಿ ಕೆಲವರು ದೊಡ್ಡ ಹಿತಾಸಕ್ತಿಗಳು ಕೈಹಾಕಿರುವುದರಿಂದ ಕೆಲವು ಮಂದಿ ಅವರಿಗೆ ಬೇಕಾಗಿರತಕ್ಕ ಜನರು ಬಸ್ಸು ನಡೆಸುತ್ತಾ ಇರುವುದರಿಂದ ರಾಷ್ಟ್ರೀಕರಣ ಮಾಡುವುದಕ್ಕೆ ತಯಾರು ಇಲ್ಲ ಎನ್ನುವ ವಿಷಯ ಬಂತು. ಇದಲ್ಲದೆ ಬಸ್ಸಿನ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿ ಮೋಸ ನಡೆದಿದೆ ಎಂದು ಪತ್ರಿಕೆಗಳಲ್ಲಿ ನೋಡಿದ್ದೇವೆ. ಹೀಗೆ ಪೋಲಾಗುತ್ತಿದೆ. ಇದರ ಬಗ್ಗೆ ಕೂಡಲೇ ತನಿಖೆ ಮಾಡಬೇಕು. ಮಾನ್ಯ ಸಿದ್ಧವೀರಪ್ಪನವರ ಕಾಲದಲ್ಲಿ ಪ್ರತಿವರ್ಷ 4 ಪರ್ಸೆಂಟು ನೆಟ್ ಪ್ರಾಫಿಟ್ ರಾಜ್ಯ ಸರ್ಕಾರಕ್ಕೆ ಬರುತ್ತಿತ್ತು ಎಂದು ಹೇಳಿ ಅದೇ ಡಿಪಾರ್ಟ್‌ಮೆಂಟಿನಲ್ಲಿ ಶೇಕಡಾ

(ಶ್ರೀ ಎಸ್. ಬಂಗಾರಪ್ಪ)

ಸುಮಾರು 30-35 ರಷ್ಟು ಬರುತ್ತಿತ್ತು ಎನ್ನುವ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯ ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ಬರುವಂತೆ ಮಾಡಿ. ಮತ್ತು ಅಲ್ಲಿರುವ ಲೋಪದೋಷ ಅನ್ಯಾಯ ಏನು ಇದೆಯೋ ಅದಕ್ಕೆ ಸಂಪೂರ್ಣ ಗಮನಕೊಟ್ಟು ನ್ಯಾಯ ದೊರಕಿಸಿ ಕೊಡುತ್ತಾರೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕೊಟ್ರಬಸವಯ್ಯ ಸೋಗಿ (ಹಡಗಲಿ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಸಾರಿಗೆ ಮತ್ತು ಪ್ರವಾಸಿ ಮಂತ್ರಿಗಳು ಹಾಗೂ ನ್ಯಾಯಾಂಗ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ ಆ ಬಗ್ಗೆ ಕೆಲವು ಸಲಹೆಗಳನ್ನು ಹಾಗೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಸಾರಿಗೆಯನ್ನು ಬಹುತೇಕ ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಬೇಕು ಎನ್ನುವ ವಿಚಾರದಲ್ಲಿ ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಅಷ್ಟೇ ಅಲ್ಲದೆ ಇದನ್ನು ರಾಜ್ಯಾದ್ಯಂತ ಈ ಸಾರಿಗೆ ರಾಷ್ಟ್ರೀಕರಣ ಮಾಡುವುದಕ್ಕೆ ಸರ್ಕಾರದವರು ಕೂಡಲೇ ತೀವ್ರ ಕ್ರಮಕೈಗೊಳ್ಳಬೇಕು ; ಎಂದು ಹೇಳುತ್ತೇನೆ. ಸಮಾಜವಾದಿ ತತ್ವಕ್ಕೆ ಹೊಂದಿಕೊಳ್ಳುವ ಅಥವಾ ರಾಜ್ಯಾದ್ಯಂತ ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಸರ್ಕಾರ ತೀವ್ರ ಆಸಕ್ತಿ ವಹಿಸಬೇಕು ಎಂದು ಹೇಳುತ್ತೇನೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸಾರಿಗೆ ರಾಷ್ಟ್ರೀಕರಣ ಮಾಡಿದ್ದು, 1964 ರಲ್ಲಿ ಎಂದರೆ ಈಗ 3 ವರ್ಷದ ಕೆಳಗೆ ರಾಷ್ಟ್ರೀಕರಣ ಆಯಿತು. ಅದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡಿದೆವು. ಆದರೆ ಅದರಲ್ಲಿ ಆಗತಕ್ಕ ಕೆಲವು ತೊಂದರೆ ಮತ್ತು ಅನಾನುಕೂಲತೆಗಳನ್ನು ಗಮನಿಸಿದರೆ ಅದು ವರವಾಗಿ ಬರುವ ಬದಲು ಶಾಪವಾಗಿ ಬಂತು ಎನ್ನುವ ರೀತಿಯಲ್ಲಿ ಅಲ್ಲಿಯ ವಿದ್ಯಮಾನಗಳು ನಡೆಯುತ್ತಿವೆ. ಇದು ಸರ್ಕಾರದ ತಪ್ಪು ಎಂದು ಹೇಳಲಿಕ್ಕೆ ಸಾಧ್ಯ ಇಲ್ಲ. ಸರ್ಕಾರದವರು ಅಲ್ಲಿಯ ವಿದ್ಯಮಾನಗಳನ್ನು ಸರಿಪಡಿಸಲಿಕ್ಕೆ ತೀವ್ರ ಗಮನ ಹರಿಸಬೇಕು. ಈ ವಿಷಯವನ್ನು ಸಾರಿಗೆ ಶಾಖೆಯ ಉಪಮಂತ್ರಿಗಳಾದ ವೀರಯ್ಯನವರಿಗೂ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಅದನ್ನೆಲ್ಲಾ ವಿಸ್ತರಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಸಾರಿಗೆ ವ್ಯವಸ್ಥೆಯಲ್ಲಿ ಬಸ್ಸುಗಳನ್ನು ಬಿಡುವ ಕಾಲದಲ್ಲಿ ಮೊಟ್ಟ ಮೊದಲನೆಯ ತೊಂದರೆ ಎಂದರೆ ಸರಿಯಾದ ವೇಳೆಯನ್ನು ಪಾಲನೆ ಮಾಡುವುದಿಲ್ಲ. ಬಸ್ಸಿನ ಕಂಡಕ್ಟರ್ಸ್ ಆಗಲಿ, ಡ್ರೈವರ್ಸ್ ಆಗಲಿ ಯಾರೇ ಆಗಲಿ ಅದರಿಂದ ತೊಂದರೆಯಾಗುತ್ತದೆ. ಯಾವ ಸಮಯಕ್ಕೆ ಯಾವ ಬಸ್ಸು ಹೊರಡುತ್ತದೆ ಅದು ಪ್ರವಾಸಿಕರಿಗೆ ಗೊತ್ತು ಗುರಿ ಇಲ್ಲದಿರುವ ಪ್ರಸಂಗ ಇದೆ. ಬಸ್ಸು ವೇಳೆಗೆ ಸರಿಯಾಗಿ ನಡೆಯುವ ಪ್ರಸಂಗ ನಮ್ಮಲ್ಲಿ ಇಲ್ಲ. ಇದನ್ನು ಸಂಬಂಧಪಟ್ಟ ಸಚಿವರು ಗಮನಿಸಿ ತಕ್ಕ ವ್ಯವಸ್ಥೆ ಮಾಡಬೇಕು ಎಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ತೊಂದರೆ ಏನು ಎಂದರೆ ಬಸ್ ಕಂಡಕ್ಟರ್ಸ್, ಡ್ರೈವರ್ಸ್ ನಡತೆ ವಿಚಾರ. ಸರ್ಕಾರಕ್ಕೆ ಒಳ್ಳೆಯ ಹೆಸರು, ಕೆಟ್ಟ ಹೆಸರು ತರತಕ್ಕದ್ದು ಈ ಸಾರಿಗೆ ಉದ್ಯಮದಿಂದ ಎಂದು ಹೇಳುತ್ತೇನೆ. ಬಸ್ಸಿನಲ್ಲಿ ಕೂತುಕೊಂಡರೆ ಪ್ರವಾಸಿಕರು ಸರ್ಕಾರದ ಬಗ್ಗೆ ಟೀಕೆ ಮಾಡುತ್ತಾರೆ. ನಾನು ಡಿವಿಸನಲ್ ಅಡ್ವೈಸರಿ ಕಮಿಟಿಯ ಮೆಂಬರ್ ಆಗಿದ್ದೇನೆ. ಬಸ್ಸಿನಲ್ಲಿ ಕೂತುಕೊಂಡು ಹೋದಾಗ ಜನರು ನನ್ನ ಮುಂದೆಯೇ ಟೀಕೆ ಮಾಡಿದರು. ನನಗೆ ಬಹಳ ಖೇದನೆ ಆಗುತ್ತಾ ಇದೆ. ಸಮಯಕ್ಕೆ ಸರಿಯಾಗಿ ಬಸ್ಸು ಬರದೇ ಇರುವುದು, ಬಸ್ಸಿನ ಕಂಡಕ್ಟರ್ಸ್, ಡ್ರೈವರ್ಸ್‌ಗೆ ಇರುವ ಅಹಂಭಾವ ಮತ್ತು ಅವರಲ್ಲಿರುವ ವರ್ತನೆ ಬಗ್ಗೆ ವಿಷಾದವೆನಿಸುತ್ತದೆ. ಅವರಲ್ಲಿ ವಿನಯಶೀಲತೆ, ಸೌಜನ್ಯ ಯಾವುದೂ ಇಲ್ಲ. ಇದರಿಂದ ಪ್ರವಾಸಿಕರಿಗೆ ಬಹು ರೀತಿಯ ತೊಂದರೆಯಾಗಿದೆ. ಅಷ್ಟೇ ಅಲ್ಲ ಒಳ್ಳೆಯ ಹೆಸರಾಗಲಿ ಕೆಟ್ಟ ಹೆಸರಾಗಲಿ ತರತಕ್ಕದ್ದು ಸಾರಿಗೆ ವ್ಯವಸ್ಥೆಯ ಕಂಡಕ್ಟರ್ಸ್ ಮತ್ತು ಡ್ರೈವರ್ಸ್‌ನಿಂದ ಬರುತ್ತದೆ. ಬಸ್ ರಾಷ್ಟ್ರೀಕರಣದಿಂದ ಸಾರಿಗೆ ವ್ಯವಸ್ಥೆಯಲ್ಲಿ ನಾನಾ ವಿಧವಾದ ರೀತಿಯಲ್ಲಿ ನಾನಾ ಮುಖಗಳಲ್ಲಿ ಹಣ ಪೋಲಾಗುತ್ತಿದೆ. ಅನೇಕ ವಿಧವಾದ ಅನೇಕ ರಂಧ್ರಗಳು ಇವೆ. ಯಾವ ರೀತಿ ಪೋಲಾಗುತ್ತಿದೆ ಅದನ್ನು ಗೊತ್ತು ಹಚ್ಚುವುದಕ್ಕೆ ಸಾಧ್ಯ ಇಲ್ಲದೇ ಇರುವ ಪರಿಸ್ಥಿತಿಯಲ್ಲಿ ಕಂಡುಬರುತ್ತಿದೆ. ಅದು ಹೇಗಾಗಿದೆ ಎಂದರೆ—

ಸರಕಾರಿ ಬಸ್ಸಿನಲ್ಲಿ ಓಡಿಯಾಡುವ 'ಲಕ್ಷ್ಮಿ'
ಜಾರಿದಳು ಎಲ್ಲಿಗೋ ಯಾರಿಗೂ ಸಿಗದೆ
ಕಂಡಕ್ಟರನ ತೆರೆಯ ಮರೆಯಲ್ಲಿ ಅಡಗಿದ್ದು
ಸರಕಾರವನು ಅಣಕಿಸುವಳು ಮುಗುದೆ;

ಈ ರೀತಿ ಸಾರಿಗೆ ಬಸ್ಸುಗಳಲ್ಲಿ ಸರ್ಕಾರಕ್ಕೆ ಹಣ ಪೋಲಾಗುತ್ತಿದೆ. ಅಷ್ಟೇ ಅಲ್ಲ ಪ್ರವಾಸ ಮಾಡತಕ್ಕ ಕಾಲದಲ್ಲಿ ಪ್ರವಾಸಿಕರ ಅನುಭವ ಹೇಳುತ್ತೇನೆ. ನಾನು ಹೆಚ್ಚಾಗಿ ಬಸ್ಸಿನಲ್ಲಿ ಪ್ರವಾಸ ಮಾಡತಕ್ಕವನು. ವಾರದಲ್ಲಿ ನಾಲ್ಕಾರು ದಿವಸ ಬಸ್ಸಿನಲ್ಲಿ ಪ್ರವಾಸ ಮಾಡುತ್ತಿದ್ದೇನೆ. ನಾನು ಕಣ್ಣಾರೆ ಕಂಡಿರತಕ್ಕ ಪರಿಸ್ಥಿತಿ ಹೇಳುವುದಾದರೆ—

ಸರಕಾರಿ ಬಸ್‌ನ ಕಂಡಕ್ಟರನು ಗುಡುಗಿದನು
ಟಿಕೆಟ್ಟು ಕೇಳಿದರೆ 'ಸೀಟಿಲ್ಲ ರೈಟೋ'
ಮಾರಾಯ ಹ್ಯಂಗಾರ ಕೊಂಡೊಯ್ಯೊ ಎಂದರೆ
ಎಲ್ಲರೂ ಒಳಬನ್ನಿ, ತೆಗಿ ದುಡ್ಡು ರೈಟೋ,

ಈ ರೀತಿ ಪರಿಸ್ಥಿತಿ ಇದೆ. ಬಳ್ಳಾರಿ ಜಿಲ್ಲೆಯ ಸಾರಿಗೆ ವ್ಯವಸ್ಥೆ ಬಹುತೇಕ ಕಂಡಕ್ಟರ್ಸ್ ಡ್ರೈವರ್ಸ್ ಈ ರೀತಿ ನಡೆಯುವುದು ನನ್ನ ಸ್ವಂತ ಅನುಭವಕ್ಕೆ ಬಂದಿದೆ. ಇರತಕ್ಕ ಪರಿಸ್ಥಿತಿ ಹೇಳಿದ್ದೇನೆ. ಸರ್ಕಾರವನ್ನಾಗಲಿ ಅಥವಾ ಯಾರನ್ನೇ ಆಗಲಿ ದೂಷಣೆ ಮಾಡಿ ಹೇಳುತ್ತಾ ಇಲ್ಲ. ಇದನ್ನು ವಿರೋಧ ಪಕ್ಷದವರು ಮಾಡುತ್ತಾರೆ; ಅಷ್ಟೇ ಸಾಕು. ಇರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಕಳಕಳಿಯಿಂದ, ಆಸಕ್ತಿಯಿಂದ, ಸಂಕಟದಿಂದ ಹೇಳತಕ್ಕ ಮಾತು. ಮುಖ್ಯವಾಗಿ ಏನು ಎಂದರೆ ಬಸ್ಸು ನಡೆಸುವುದಾದರೂ ಅದರ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಕಂಡಕ್ಟರ್ 11ನೇ ಅವತಾರ. ಜನರು ಅವನನ್ನು ನೋಡಿ ಹೆದರಿಕೊಳ್ಳಬೇಕು. ಅಷ್ಟುಮಟ್ಟಿಗೆ ಪರಿಸ್ಥಿತಿ ಇದೆ. ನಾವು ಮಾಡಬೇಕಾದ ಒಂದೇ ಒಂದು ದೊಡ್ಡ ಸುಧಾರಣೆ ಎಂದರೆ ಕಂಡಕ್ಟರುಗಳೂ ಮತ್ತು ಡ್ರೈವರುಗಳೂ ಸೌಜನ್ಯ ಮತ್ತು ವಿನಯದಿಂದ ಪರಸ್ಪರ ಸೌಹಾರ್ದದಿಂದ ಪ್ರವಾಸಿಗರೊಡನೆ ನಡೆಯುವುದನ್ನು ಕಲಿತರೆ ಅನೇಕ ಲೋಪದೋಷಗಳನ್ನು ತಿದ್ದಿದಂತಾಗುತ್ತದೆ ಮತ್ತು ಜನರ ಪ್ರೀತಿ, ವಿಶ್ವಾಸ ಮತ್ತು ಮೆಚ್ಚುಗೆಯನ್ನು ಅವರು ಸಂಪಾದಿಸುತ್ತಾರೆ. ಮತ್ತು ರಾಷ್ಟ್ರೀಕರಣವಾಗಿರುವ ಸಾರಿಗೆ ವ್ಯವಸ್ಥೆ ಹೆಚ್ಚು ಜನಪ್ರಿಯವಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಸವಿನಯದಿಂದ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ನಮ್ಮ ಮಾನ್ಯ ಸ್ನೇಹಿತರು ಹೇಳುವಂತೆ ಕಂಡಕ್ಟರುಗಳು ಬರೀ ಡಿಕ್ಟೇಟರುಗಳು ಮಾತ್ರವಲ್ಲ ಪಾಕಿಸ್ತಾನದ ವಿದೇಶಾಂಗ ಸಚಿವರಾಗಿದ್ದ ಭುಟ್ಟೋ, ಎನ್‌ಕ್ರುಮಾ, ಸುಕರ್ನೊ ಅವರುಗಳಂತೆ ದರ್ಪಾಧಿಕಾರ ಉಪಯೋಗಿಸುವಷ್ಟುಮಟ್ಟಿಗೆ ನಡೆದುಕೊಳ್ಳುತ್ತಿದ್ದಾರೆ. ಇವರನ್ನು ಸರಿಯಾದ ರೀತಿಯಲ್ಲಿ ಹದ್ದುಬಸ್ತಿನಲ್ಲಿಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಡಿವಿಜನಲ್ ಅಡ್ವೈಸರಿ ಕಮಿಟಿ ಎಂದು ಮಾಡಿದ್ದಾರೆ. ಅದರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಈ ಕಮಿಟಿಯವರು ಮಾಡುವ ಉಪದೇಶಕಾರಕವಾದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬಂಧನಕಾರಿಯಾದ ಸೂತ್ರವಿಲ್ಲ. ಎಷ್ಟೋ ಸಲಹೆಗಳನ್ನು ಕಾರ್ಯಗತ ಮಾಡದೆ ಇರತಕ್ಕ ಪ್ರಸಂಗಗಳು ಹೆಚ್ಚಾಗಿವೆ. ಡಿವಿಜನಲ್ ಅಡ್ವೈಸರಿ ಕಮಿಟಿಯಲ್ಲಿ ಮಾಡಿರತಕ್ಕ ತೀರ್ಮಾನಗಳು ವೈಯಕ್ತಿಕವಾದ ಅಭಿಪ್ರಾಯ ಮಾತ್ರವಲ್ಲ ತೀರ್ಮಾನದ ರೂಪದಲ್ಲಿ ಮಾಡುತ್ತಿದ್ದೇವೆ. ಅಂಥ ತೀರ್ಮಾನಗಳು ಬಂಧನಕಾರಿಯಾಗಿ ಕಾರ್ಯಗತವಾಗುವಂತೆ ಒಂದು ಕಾಯಿದೆ ವ್ಯವಸ್ಥೆ ಮಾಡಬೇಕು. ಇಲ್ಲವೆ ಇದ್ದರೆ ಆ ಕಮಿಟಿಯ ಅಭಿಪ್ರಾಯಕ್ಕೆ ಬೆಲೆ ಇಲ್ಲದಂತಾಗಿ, ಪ್ರಜಾಸತ್ತಾತ್ಮಕವಾದ ಅಭಿಪ್ರಾಯಕ್ಕೆ ಬೆಲೆ ಇಲ್ಲದಂತಾಗುತ್ತದೆ. ಅನೇಕ ಮಾನ್ಯ ಸದಸ್ಯರು ಗ್ರಾಮಾಂತರ ಪ್ರದೇಶದಲ್ಲಿ ಪ್ರವಾಸ ಮಾಡಿ ಅಲ್ಲಿರುವ ಕಷ್ಟ ಸುಖಗಳು ಮತ್ತು ತೊಂದರೆಗಳನ್ನು ತಿಳಿದುಕೊಂಡು ಅರ್ಥಮಾಡಿಕೊಂಡವರಾಗಿ ಇರುತ್ತಾರೆ. ಆದ್ದರಿಂದ ನಮ್ಮ ಸದಸ್ಯರಾಗಲೀ ಯಾರೇ ಜವಾಬ್ದಾರಿ ಪ್ರಜೆಗಳಾಗಲೀ ಬಂದು ಹೇಳಿದಾಗ ಅದರ ಬಗ್ಗೆ ಸೂಕ್ತ ಗಮನ ಕೊಟ್ಟು ಅದನ್ನು ಸರಿಪಡಿಸುವುದರಲ್ಲಿ ಸರ್ಕಾರದವರು ಆಸಕ್ತಿ ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆ ಬಸ್ ಸ್ಟಾಪುಗಳು ಮತ್ತು ಬಸ್ ಷೆಲ್ಟರುಗಳಿಲ್ಲ. ಇದನ್ನು ಕೂಡಲೇ ರಚನೆ ಮಾಡುವುದಕ್ಕೆ ಸರ್ಕಾರದವರು ಕ್ರಮ ಕೈಕೊಳ್ಳಬೇಕು. ಬಸ್ಸುಗಳನ್ನು ಬಿಡತಕ್ಕ ವೇಳೆ ಮತ್ತು ಮಾರ್ಗಗಳ ವಿಚಾರದಲ್ಲಿ ಹೆಚ್ಚು ತೊಂದರೆ ಇಲ್ಲದಂತೆ ರಾಷ್ಟ್ರೀಕರಣವಾಗುವುದಕ್ಕೆ ಹಿಂದೆ ಖಾಸಗಿಯವರು ಯಾವ ವೇಳೆ ಮತ್ತು ಮಾರ್ಗಗಳನ್ನಿಟ್ಟುಕೊಂಡಿದ್ದರೋ (timings and Routes) ಅದನ್ನೇ ಇಟ್ಟುಕೊಂಡರೆ ಹೆಚ್ಚು ಅನುಕೂಲವಾಗುತ್ತದೆ. 30-40 ವರ್ಷಗಳ ಅನುಭವದಿಂದ ಅವರು ಅದನ್ನು ಕಾಪಾಡಿಕೊಂಡು ಬಂದಿದ್ದರು. ಅದು ಜನಗಳಿಗೂ ಅನುಕೂಲವಾಗಿತ್ತು, ಜನರೂ ಅದಕ್ಕೆ ಹೊಂದಿಕೊಂಡಿದ್ದರು. ಅದೇ ವ್ಯವಸ್ಥೆಯನ್ನೇ ನಮ್ಮ ಸರ್ಕಾರದವರೂ ಇಟ್ಟುಕೊಂಡರೆ ಒಳ್ಳೆಯದು, ಆ ರೀತಿ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

(ಶ್ರೀ ಎನ್. ಎಂ. ಕೊಟ್ರುಬಸವಯ್ಯ ಸೋಗಿ)

ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಬಸ್ಸುಗಳಲ್ಲಿ ಕೇವಲ ಒಂದೇ ಒಂದು ಬಾಗಿಲು ಮಾಡಿದ್ದಾರೆ. ಇದರಿಂದ ಬಸ್ ಸ್ಟ್ಯಾಂಡಿನಲ್ಲಿರತಕ್ಕ ಜನರಿಗೆ ತೊಂದರೆ ಬಹಳವಾಗುತ್ತದೆ. ಎಷ್ಟೋ ವೇಳೆ ಗಂಡಸರು ಮತ್ತು ಹೆಂಗಸರಲ್ಲಿ ಸ್ವಲ್ಪ ತಿಕ್ಕಾಟವಾಗಿ ಒಮ್ಮೊಮ್ಮೆ ಬಹಳ ಅಸಹ್ಯವಾದ ದೃಶ್ಯವನ್ನು ನೋಡತಕ್ಕ ಪ್ರಸಂಗ ಬರುತ್ತದೆ. ನಗರಗಳಲ್ಲಿನ ಬಸ್ಸುಗಳಿಗೆ ಎರಡು ಬಾಗಿಲು ಮಾಡಿದ್ದಾರೆ. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಸ್ಸುಗಳಿಗೂ ಎರಡು ಬಾಗಿಲು ಮಾಡಬೇಕು. ಇದಕ್ಕೆ ತೀವ್ರವಾದ ಗಮನ ಕೊಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಹಂಪೆಯನ್ನು ಇನ್ನೂ ಹೆಚ್ಚು ಆಕರ್ಷಕವಾದ ರೀತಿಯಲ್ಲಿ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು. ಅಲ್ಲಿ ಒಂದು ವಿಮಾನ ನಿಲ್ದಾಣ ಕೂಡ ಆಗಬೇಕಾಗಿದೆ. ಬಳ್ಳಾರಿಯಲ್ಲಿರುವ ವಿಮಾನ ನಿಲ್ದಾಣವನ್ನು ಅಭಿವೃದ್ಧಿಗೊಳಿಸಬೇಕು ಅಥವಾ ಹಂಪೆಗಾದರೂ ಒಂದು ವಿಮಾನ ನಿಲ್ದಾಣದ ಏರ್ಪಾಡು ಮಾಡಬೇಕು. ವಿದೇಶಗಳಿಂದ ಬರತಕ್ಕ ಪ್ರವಾಸಿಗರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ.

ಹಡಗಲಿ ಹತ್ತಿರದ ಸಿಂಗಟಲೂರು ಬೆಟ್ಟ ತುಂಗಭದ್ರ ನದಿಯ ದಡದಲ್ಲಿದೆ. ಇದು ಪ್ರಶಸ್ತವಾದ ಸ್ಥಳ. ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು. ಅದರಂತೆಯೇ ಹಡಗಲಿ ತಾಲ್ಲೂಕು ಮೈಲಾರೇಶ್ವರ ಬೆಟ್ಟವನ್ನೂ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು. ಇದೂ ಬಹಳ ಪ್ರಶಸ್ತವಾದ ಸ್ಥಳ. ಬೇಸಿಗೆ ಕಾಲದಲ್ಲಿ ವಿಹಾರಕ್ಕೆ ಯೋಗ್ಯವಾಗಿರುತ್ತದೆ.

ನ್ಯಾಯಾಂಗದ ವಿಚಾರವಾಗಿ ಒಂದೇ ಒಂದು ಮಾತು ಹೇಳುತ್ತೇನೆ. ಸುಮಾರು 2-3 ವರ್ಷಗಳ ಕೆಳಗೆ ಹೂವಿನ ಹಡಗಲಿಯಲ್ಲಿ, ಆಗ ನ್ಯಾಯಾಂಗ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮರಾಯರು ಕೋರ್ಟನ್ನು ಪ್ರಾರಂಭಿಸಿದರು. ಆ ಕೋರ್ಟಿಗೆ ಇದುವರೆಗೂ ಸರಿಯಾದ ಕಟ್ಟಡವಿಲ್ಲ. ಒಂದು ಸಣ್ಣ ಮನೆಯಲ್ಲಿ ಆ ಕೋರ್ಟು ನಡೆಯುತ್ತಿದೆ. ಅಲ್ಲಿ ಸ್ಥಳ ಸಾಕಾಗುವುದಿಲ್ಲ. ಬಹಳ ತೊಂದರೆಯಾಗಿದೆ. ಆದಕಾರಣ ಸರಿಯಾದ ವ್ಯವಸ್ಥಿತವಾದ ಒಂದು ಹೊಸ ಕೋರ್ಟ್ ಕಟ್ಟಡವನ್ನು ಕಟ್ಟಿಸಿಕೊಡಬೇಕು ಎಂದು ನ್ಯಾಯಾಂಗ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಅನೇಕ ಕಡೆ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರುಗಳ ನೇಮಕವಾಗಿಲ್ಲ. ಅವರನ್ನು ಕೂಡಲೇ ನೇಮಕ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ಆಕ್ಟನ್ನು ತೆಗೆದುಕೊಂಡರೂ ಅದಕ್ಕೆ ರೂಲ್ಸ್ ಆಗಿವೆ. ಕಾಯಿದೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ಕನ್ಸಾಲಿಡೇಟ್ ಮಾಡಿ ಒಂದು ಪುಸ್ತಕ ರೂಪದಲ್ಲಿ ಹೊರಡಿಸಬೇಕು. ಅನೇಕ ರೂಲ್ಸ್ ಸಿಕ್ಕದೆ ನಮಗೆ ಬಹಳ ತೊಂದರೆಯಾಗಿದೆ. ಈ ಎಲ್ಲ ತೊಂದರೆಗಳನ್ನು ನಿವಾರಿಸಿ ನಮಗೆ ಅನುಕೂಲ ಮಾಡಿಕೊಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಯಾವುದೇ ರೀತಿಯಿಂದ ವಿರೋಧ ಪಕ್ಷದವರು ಮಾಡುವಂತೆ ಟೀಕೆ ಟಿಪ್ಪಣಿಗಳನ್ನು ಮಾಡದೆ ಇರತಕ್ಕ ತೊಂದರೆಗಳನ್ನು, ನಿವಾರಿಸಬೇಕು ಎನ್ನುವ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಸರ್ಕಾರದವರ ಮುಂದೆ ಇಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಎಲ್ಲವನ್ನೂ ನಿವಾರಿಸಬೇಕೆಂದು ತಿಳಿಸಿ, ಸಭಾಪತಿಗಳು ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ನ್ಯಾಯಾಂಗ ಖಾತೆಯ ಮಂತ್ರಿಗಳು, ಮತ್ತು ಸಾರಿಗೆ ಖಾತೆಯ ಮಂತ್ರಿಗಳು ತಂದಂಥ ಬೇಡಿಕೆಯನ್ನು ವಿರೋಧ ಮಾಡಿ ನಾನು ನನ್ನ ಕೆಲವು ಅಭಿಪ್ರಾಯಗಳನ್ನು ತಿಳಿಸಬೇಕೆಂದಿದ್ದೇನೆ.

ನಮ್ಮ ರಾಜ್ಯದಲ್ಲಿ ಅನೇಕ ಪೇಟೆಗಳಲ್ಲಿ ಖಾಸಗಿಯಾಗಿ ಕಾರು ಇಟ್ಟುಕೊಳ್ಳುವವರು ಪಬ್ಲಿಕ್ ಟ್ಯಾಕ್ಸಿಯಾಗಿ ಉಪಯೋಗಿಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬಹಳ ನಷ್ಟ ಆಗುತ್ತಿದೆ. ಖಾಸಗಿ ಕಾರಿಗೆ ಮೂರು ತಿಂಗಳಿಗೆ 40 ರೂಪಾಯಿ ಟ್ಯಾಕ್ಸ್ ಕೊಡಬೇಕು ಪಬ್ಲಿಕ್ ಟ್ಯಾಕ್ಸಿ ಆಗಿ ಉಪಯೋಗ ಮಾಡುವವರು 75 ರೂಪಾಯಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಈ ವಿಷಯ ಅಲ್ಲಿರುವ ಪೋಲೀಸ್ ಅಧಿಕಾರಿಗಳಿಗೆ ಗೊತ್ತಿದ್ದರೂ ಕೂಡ ಅವರು ಲಂಚದ ಕಾರಣದಿಂದ ಅಥವಾ ಅವರಿಗೆ ಧರ್ಮಾರ್ಥವಾಗಿ ಒಂದು ವಾಹನವನ್ನು ಉಪಯೋಗ ಮಾಡುವ ಸಂದರ್ಭ ಸಿಕ್ಕುವ ಕಾರಣದಿಂದ ಅವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇದರಿಂದ ನಮ್ಮ ದೇಶಕ್ಕೆ, ಸರ್ಕಾರಕ್ಕೆ ಹೇರಳವಾದ ನಷ್ಟವಾಗುತ್ತದೆ. ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ನಿಗಾ ತೆಗೆದುಕೊಂಡು

ಆ ರೀತಿ ನಷ್ಟವಾಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಏಕೆಂದರೆ ಪ್ರತಿಯೊಂದು ಸಣ್ಣ ಸಣ್ಣ ಪೇಟೆಯಲ್ಲಿ ಕೂಡ ಯಾವ ಸಮಯದಲ್ಲಿ ಹೋದರೂ ಈ ರೀತಿಯ ಅನೇಕ ಟ್ಯಾಕ್ಸಿಗಳಿರುತ್ತವೆ.

ನಮ್ಮ ದೇಶದಲ್ಲಿ ಈ ವಾಹನಗಳ ತೆರಿಗೆ ವಿಷಯ ಹೇಳುವುದಾದರೆ ನಿಜವಾಗಿ ಬಹಳ ಮಿತಿ ಮೀರಿದ್ದು. ನಮ್ಮ ಜನತೆಗೆ ವಾಹನ ಸೌಕರ್ಯ ಮತ್ತು ಸಾರಿಗೆ ಸೌಕರ್ಯ ಹೆಚ್ಚಾಗಿ ಸಿಕ್ಕಬೇಕಾಗಿದ್ದರೆ ರಿಯಾಯಿತಿ ದರದಲ್ಲಿ ಟ್ಯಾಕ್ಸ್ ಇಡುವಂಥದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಬಹಳ ಅಗತ್ಯವಿದೆ ಎಂದು ನಾನು ಒತ್ತಿ ಹೇಳುತ್ತೇನೆ. ಏಕೆಂದರೆ ಟ್ಯಾಕ್ಸ್ ಹೆಚ್ಚಿದಂತೆಲ್ಲ ವಾಹನವನ್ನಿಟ್ಟು ಕೊಳ್ಳುವವರ ಸಂಖ್ಯೆ ಕಡಮೆಯಾಗುತ್ತದೆ. ಅದರಿಂದ ಸರ್ಕಾರಕ್ಕೆ ಕೂಡ ಒಂದು ರೀತಿಯಲ್ಲಿ ನಷ್ಟವಾಗುತ್ತದೆ. ಮಳೆಗಾಲದ ಸಮಯದಲ್ಲಿ ಅನೇಕ ಪಬ್ಲಿಕ್ ಲಾರಿ ಮಾಲೀಕರು ಟ್ಯಾಕ್ಸ್ ಕಟ್ಟಲಿಕ್ಕೆ ಕೂಡ ಕಷ್ಟವಾಗುತ್ತದೆ ಎನ್ನುವ ಕಾರಣದಿಂದ ಅವರು ಲಾರಿಗಳನ್ನು ಒಳಗೆ ಇಟ್ಟುಕೊಂಡು ಟ್ಯಾಕ್ಸ್ ಕೊಡುವುದಿಲ್ಲ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಬರುವ ಟ್ಯಾಕ್ಸ್ ಕೂಡ ಕಡಮೆಯಾಗುತ್ತದೆ. ಅದರ ಬದಲು ನ್ಯಾಯವಾದ ರೀತಿಯಲ್ಲಿ ಸುಲಭ ರೀತಿಯಲ್ಲಿ ಟ್ಯಾಕ್ಸ್ ಕೊಡುವ ಕಲ್ಪನೆ ಮಾಡಿಕೊಟ್ಟರೆ ಅದರಿಂದ ವಾಹನ ಸಂಚಾರಕ್ಕೆ ಮತ್ತು ಸಾರಿಗೆ ಸಂಚಾರಕ್ಕೆ ಹೆಚ್ಚಿನ ಅನುಕೂಲತೆ ಸಿಕ್ಕುತ್ತದೆ. ಮಳೆಗಾಲದಲ್ಲಿ ಸಾಮಾನ್ಯವಾಗಿ ಎಲ್ಲ ಜೀವನಾವಶ್ಯಕ ವಸ್ತುಗಳಿಗೆ ಸಾರಿಗೆ ಸೌಕರ್ಯದ ಅಡಚಣೆಯಿಂದ ಕ್ರಯ ಏರುತ್ತದೆ. ಆ ಸಂದರ್ಭದಲ್ಲಿ ನಮ್ಮ ಜನತೆಗೆ ಕೂಡ ನಷ್ಟವಾಗುತ್ತದೆ. ಮತ್ತು ಅನೇಕ ವಾಹನಗಳನ್ನು ಒಳಗೆ ಇಟ್ಟುಕೊಳ್ಳುವ ಸಂದರ್ಭವಿರುವುದರಿಂದ ಸರ್ಕಾರಕ್ಕೂ ಕೂಡ ನಷ್ಟವಾಗುತ್ತದೆ. ಆದುದರಿಂದ ನ್ಯಾಯವಾದ ರೀತಿಯಲ್ಲಿ ಟ್ಯಾಕ್ಸ್ ಇಟ್ಟರೆ ಸಾರ್ವಜನಿಕರಿಗೂ, ವಾಹನಗಳಲ್ಲಿ ಕೆಲಸ ಮಾಡುವ ನೌಕರರಿಗೂ ಮತ್ತು ಸರ್ಕಾರಕ್ಕೂ ಕೂಡ ಪ್ರಯೋಜನವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

4 00 P.M.

ಅನೇಕ ಕಡೆಗಳಲ್ಲಿ ಸಾರಿಗೆಯ ತೆರಿಗೆಯ ಪ್ರತಿಫಲ ಮುನಿಸಿಪಾಲಿಟಿಗಳಿಗೆ ಮತ್ತು ಪಂಚಾಯಿತಿಗಳಿಗೆ ಸಿಕ್ಕದೆ ಆ ಪ್ರಾಂತಗಳಲ್ಲಿರುವ ಮಾರ್ಗಗಳ ಸ್ಥಿತಿ ಒಳ್ಳೆಯದಾಗಿರುವುದಿಲ್ಲ. ಮುಖ್ಯವಾಗಿ ಮಂಗಳೂರಿನ ಕಡೆ ಹೇಳುವುದಾದರೆ ಆ ಷಹರಿನಲ್ಲಿ ಸಾವಿರಾರು ಬಸ್ಸುಗಳು, ಲಾರಿಗಳು ಮತ್ತು ಕಾರುಗಳಿವೆ. ಆದರೆ ಅಲ್ಲಿ ಮಾರ್ಗವನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಮೋಟಾರು ವಾಹನಗಳ ತೆರಿಗೆಯ ನಿರ್ದಿಷ್ಟ ಪ್ರಮಾಣ ಸಿಕ್ಕದಿರುವುದೇ ಕಾರಣ. ಮಾರ್ಗ ದುರಸ್ತಿಯ ಜವಾಬ್ದಾರಿ ಮುನಿಸಿಪಾಲಿಟಿ ಮತ್ತು ಪಂಚಾಯಿತಿಗಳಿಗಿದ್ದರೂ ಕೂಡ ಅದಕ್ಕೆ ಸಂಬಂಧಪಟ್ಟ ಮಾರ್ಗಗಳಲ್ಲಿ ಸರ್ಕಾರಿ ವಾಹನಗಳೂ ಮತ್ತಿತರ ವಾಹನಗಳೂ ಓಡಾಡುತ್ತವೆ, ಹಾಗೆ ಆ ರಸ್ತೆಗಳನ್ನು ಉಪಯೋಗ ಮಾಡುವಾಗ ಆ ವಾಹನಗಳಿಂದ ಬರುವ ತೆರಿಗೆಯಲ್ಲಿ ಒಂದು ಅಂಶವನ್ನಾದರೂ ಮುನಿಸಿಪಾಲಿಟಿ ಮತ್ತು ಪಂಚಾಯಿತಿಗಳಿಗೆ ಕೊಡಬೇಕು, ಹಾಗೆ ಕೊಡದಿದ್ದರೆ ಆ ಸಂಸ್ಥೆಗಳು ಯಾವ ರೀತಿ ರಸ್ತೆಗಳನ್ನು ರಿಪೇರಿ ಮಾಡುವುದು ಸಾಧ್ಯ ಎಂದು ಸರ್ಕಾರವನ್ನು ಪ್ರಶ್ನಿಸಬೇಕಾಗಿದೆ. ಆದುದರಿಂದ ಈ ವಿಷಯದಲ್ಲಿ ಗಮನಿಸಿ ಮೋಟಾರು ವಾಹನಗಳಿಂದ ಬರುವ ತೆರಿಗೆಯಲ್ಲಿ ಒಂದು ನಿರ್ದಿಷ್ಟ ಅಂಶವನ್ನು ಮುನಿಸಿಪಾಲಿಟಿ ಮತ್ತು ಪಂಚಾಯಿತಿಗಳಿಗೆ ಕೊಡುವ ಅಗತ್ಯವುಂಟು ಎಂದು ಹೇಳುತ್ತಿದ್ದೇನೆ.

ಇನ್ನು ಆರ್. ಟಿ. ಓ. ಆಫೀಸಿನ ವಿಚಾರ ಹೇಳುವುದಾದರೆ, ಅಲ್ಲಿ ಬಹಳ ಲಂಚವಿದೆ. ಟ್ಯಾಕ್ಸ್ ರಿನ್ಯೂಯಲ್‌ಗೆ ಹೋದಾಗ ಅನೇಕ ವೇಳೆ ಸರಿಯಾದ ಕಾಲದಲ್ಲಿ ಕೆಲಸ ಮಾಡಿಕೊಡುವುದಿಲ್ಲ, ಉದ್ದೇಶಪೂರ್ವಕವಾಗಿ ಫೈಲನ್ನು ಜಾಗ್ರತೆ ಡಿಸ್‌ಪೋಸ್ ಮಾಡದೆ ಸ್ವಪ್ರಯೋಜನಕ್ಕಾಗಿ ಅನೇಕ ಕಾಲ ಅದನ್ನು ತಡೆ ಹಿಡಿಯುವುದಿದೆ. ಆ ರೀತಿಯಾಗದಂತೆ ಹೆಚ್ಚಿನ ನಿಗಾ ಇಟ್ಟು ಲಂಚಕ್ಕೆ ಆಸ್ಪದ ಇಲ್ಲದಂತೆ ವ್ಯವಸ್ಥೆ ಮಾಡಬೇಕು.

ಈಗ ಭೂ ಮಸೂದೆಯ ವಿಷಯವನ್ನು ಕೂಡ ಹೇಳಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಲ್ಯಾಂಡ್ ಟ್ರಿಬ್ಯೂನಲ್ ಕೆಲಸ ಕ್ರಮವಾಗಿ ನಡೆಯುವ ಏರ್ಪಾಡು ಮಾಡಿಲ್ಲ. ಈಗಿರುವ ಮುನ್ಸೀಫ್ ಕೋರ್ಟುಗಳಿಗೇ ಲ್ಯಾಂಡ್ ಟ್ರಿಬ್ಯೂನಲ್ ಕೆಲಸವನ್ನು, ಕೇಸುಗಳನ್ನು ವಿಲೇವಾರಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಮುನ್ಸೀಫ್ ಕೋರ್ಟುಗಳಿಗೆ ಮೊದಲೇ ಸಿವಿಲ್ ವ್ಯಾಜ್ಯಗಳ ಕಾಟ ಹೆಚ್ಚಾಗಿರುವುದರಿಂದ, ರೆಂಟ್ ಪೆಟಿಷನ್ ಮತ್ತು ರಿಡೆಂಪ್ಷನ್ ಪೆಟಿಷನ್ ಕೆಲಸವಿರುವುದರಿಂದ, ಮೊದಲೇ ಹೆಚ್ಚಾಗಿರುವ ಕೆಲಸದ ಜೊತೆಗೆ ಟ್ರಿಬ್ಯೂನಲ್ ಕೆಲಸ ಬೇರೆ ಸೇರಿ ಬಹಳ ಹೆಚ್ಚು ಕೆಲಸವಾಗಿ ಅನೇಕ ಕಡೆ ದಾಖಲು ಮಾಡಿದ ಅರ್ಜಿದಾರರಿಗೆ ನೋಟೀಸು ಕೂಡ ಹೋಗಿಲ್ಲ. ಇದಕ್ಕೆ ಕೋರ್ಟುಗಳಿಗೆ ಬೇಕಾದ ಸಿಬ್ಬಂದಿ ಕೂಡ ಹೆಚ್ಚು ಮಾಡಿಲ್ಲ. ಅಲ್ಲದೆ ಆ ಆಫೀಸುಗಳಲ್ಲಿ

(ಶ್ರೀ ಚೋಳ ರಘುರಾಮ ಶೆಟ್ಟಿ)

ಬೇಕಾದ ದಾಖಲೆ, ರಿಕಾರ್ಡು ಕೂಡ ಇರುವುದಿಲ್ಲ; ಸರ್ವಿಸ್ ಸ್ಟ್ಯಾಂಪು ಕೂಡ ಅಲ್ಲಿ ದೊರೆಯುವುದಿಲ್ಲ ಹೀಗಾಗಿ ಲ್ಯಾಂಡ್ ಟ್ರಿಬ್ಯೂನಲ್ ಕೇಸುಗಳ ಸಂಖ್ಯೆ ಸಾವಿರಗಟ್ಟಲೆಯಾಗಿ ಸಿವಿಲ್ ಕೋರ್ಟುಗಳ ಕೆಲಸದಲ್ಲಿ ಅವ್ಯವಸ್ಥೆಯಾಗಿದೆ. ಇದನ್ನು ಹೋಗಲಾಡಿಸಲು ಸರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಮಾಡಿ ಈ ಸಂಬಂಧವಾದ ಕೆಲಸ ಸರಾಗವಾಗಿ ಆಗುವಂತೆ ಮಾಡ ಬೇಕಾಗಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ).—ಸಭಾಪತಿಗಳೇ, ಈ ದಿನ ರಾಜ್ಯದ ಸಾರಿಗೆ ಮತ್ತು ಸಂಪರ್ಕ ಮಂತ್ರಿಗಳು ಮತ್ತು ನ್ಯಾಯಾಂಗ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬಿಚ್ಛಿಸುತ್ತೇನೆ. ಈ ದಿವಸ ನಮ್ಮ ದೇಶದಲ್ಲಿ ಸಾರಿಗೆ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಬೇಕು, ಜನಸಾಮಾನ್ಯರಿಗೆ ಅನುಕೂಲ ಮಾಡಬೇಕು ಎಂಬ ಘನೋದ್ದೇಶದಿಂದ ಅನೇಕ ಹೆದ್ದಾರಿಗಳನ್ನು ಹಾಗೂ ಇನ್ನು ಕೆಲವು ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿರುವುದು ಸ್ವಾಗತಾರ್ಹವಾದುದು. ಆದರೆ ಅನೇಕ ಸಂದರ್ಭಗಳಲ್ಲಿ ಸರಕಾರಿ ಬಸ್ಸಿನ ಪ್ರಯಾಣದಿಂದ ಅನುಕೂಲವಾಗದೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ. ಕೆಲವು ಸರಕಾರಿ ಬಸ್ಸುಗಳಲ್ಲಿ ಕಿಟಕಿಗಳಿಗೆ ಗಾಜೇ ಇರುವುದಿಲ್ಲ, ಬಾಗಿಲಿರುವುದಿಲ್ಲ. ದಾರಿಯಲ್ಲಿ ಬಸ್ಸುಗಳು ಕೆಟ್ಟುಹೋಗಿ ನಿಂತರೆ ಜಾಗ್ರತೆ ಸರಿಮಾಡಿಕೊಂಡು ಮುಂದಕ್ಕೆ ಪ್ರಯಾಣಮಾಡಲು ಅವಕಾಶ ವಾಗುವುದಿಲ್ಲ. ಏಕೆಂದರೆ ರಿಪೇರಿ ಮಾಡಲು ಬೇಕಾದ ಸಾಮಾನುಗಳನ್ನು ಬಸ್ಸಿನವರಿಗೆ ಕೊಟ್ಟಿರು ವುದಿಲ್ಲ. ಕೆಲವು ಕಡೆ ಒಳ್ಳೆಯ ಬಸ್ಸುಗಳನ್ನು ಓಡಿಸುತ್ತಿಲ್ಲ. ಸರಕಾರದ ಉದ್ದೇಶ ನೆರವೇರ ಬೇಕಾದರೆ ಇರುವ ಲೋಪಗಳನ್ನು ಸರಿಪಡಿಸಬೇಕು. ಬಸ್ಸುಗಳು ಕಾಲಕ್ಕೆ ಸರಿಯಾಗಿ ನಿಲ್ದಾಣವನ್ನು ಬಿಡುವುದಿಲ್ಲ, ಕೆಲವುವೇಳೆ ಗಂಟೆಗಟ್ಟಲೆ ನಿಧಾನವಾಗಿ ಹೋಗುವುದುಂಟು. ಇದನ್ನು ಸಂಬಂಧಪಟ್ಟ ಅಧಿಕಾರವರ್ಗದವರಿಗೆ ತಿಳಿಸಿದರೆ ಅದಕ್ಕೆ ನಿಗಾ ಕೊಡುವುದಿಲ್ಲ. ಹೀಗಾಗಿ ಜನರಿಗೆ ಕಷ್ಟವಾಗಿದೆ. ಇದನ್ನು ನೋಡಿದರೆ ಯಾವಾಗಲೂ ಸಾಯುವವರಿಗೆ ಅಳುವವರು ಯಾರು ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. 12-7-67ರಲ್ಲಿ ನಾನು ಸರಕಾರಿ ಬಸ್ಸಿನಲ್ಲಿ ಪ್ರಯಾಣ ಮಾಡಿದಾಗ ಬೆಂಗಳೂರನ್ನು 6 ಗಂಟೆಗೆ ಬಿಡಬೇಕಾದ ಬಸ್ಸು 7 ಗಂಟೆಗೆ ಬಿಟ್ಟಿತು. ಹೀಗಾದಾಗ ಪ್ರಯಾಣಿಕರ ಟೀಕೆಟಿಪ್ಪಣಿ ಕೇಳಬೇಕಾದರೆ ಸಹನೆ ಮೀರುತ್ತದೆ. ಇಂಥಾದ್ದಕ್ಕೆ ಅವಕಾಶ ಕೊಡದೆ ಎಚ್ಚರಿಕೆಯಿಂದ ಅಧಿಕಾರಿಗಳು ನೋಡಿಕೊಳ್ಳಬೇಕು. ಜೊತೆಗೆ ಬಸ್ಸು ಓಡುವಾಗ ಅಲ್ಲಲ್ಲಿ ಅನೇಕ ಕಡೆ ಟ್ರಾಫಿಕ್ ಕಂಟ್ರೋಲರುಗಳನ್ನು ನೇಮಕ ಮಾಡಿದ್ದಾರೆ. ಅವರು ಬಸ್ಸು ಬಂದ ತಕ್ಷಣ ಅದರಲ್ಲೇನಾದರೂ ಲೋಪವಿದ್ದರೆ ಅದನ್ನು ಸರಿಪಡಿಸಿ ಆದಷ್ಟು ಜಾಗ್ರತೆಯಾಗಿ ಬಸ್ಸುಗಳನ್ನು ಕಳಿಸುವ ವ್ಯವಸ್ಥೆ ಮಾಡುವುದಿಲ್ಲ. ಅವರ ಮಾತುಕತೆ ಲೆಕ್ಕಾಚಾರ, ವ್ಯವಹಾರ ಮುಗಿದಮೇಲೆ ಬಸ್ಸನ್ನು ಮುಂದಕ್ಕೆ ಕಳಿಸುತ್ತಾರೆ. ಸಣ್ಣಪುಟ್ಟ ಕಾರಣಗಳಿಂದ ಅಗಾಧವಾದ ಬಂಡವಾಳ ಹಾಕಿ ದೊಡ್ಡ ದೊಡ್ಡ ಬಸ್ಸುಗಳನ್ನಿಟ್ಟಿದ್ದರೂ ಸರಕಾರದವರು ಸಣ್ಣ ಅಧಿಕಾರಿಗಳು ಮಾಡುವ ಲೋಪದೋಷಗಳಿಗಾಗಿ ಅನೇಕ ಸದಸ್ಯರ ಟೀಕೆಗೆ ಗುರಿಯಾಗಬೇಕಾಗಿದೆ. ಆ ಕಾರಣ ದಿಂದ ಸರಕಾರದವರು ಇಂಥ ನೌಕರರನ್ನು ಕ್ರೂರವಾಗಿ ಶಿಕ್ಷಿಸಿ ಅಥವಾ ಬೇರೆ ರೀತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಇದರ ಆಡಳಿತದಲ್ಲಿರುವ ಲೋಪಗಳನ್ನು ಸರಿಪಡಿಸಿದರೆ ಜನರಿಗೆ ಪ್ರಯೋಜನ ವಾಗುತ್ತದೆ. ಇಂದು ಸರಕಾರಿ ಬಸ್ಸುಗಳ ಜೊತೆಗೆ ಖಾಸಗಿ ಬಸ್ಸುಗಳು ಸಹ ಇವೆ. ಬಸ್ ಛಾರ್ಜಿನಲ್ಲಿ ಖಾಸಗಿ ಬಸ್ಸುಗಳ ದರಕ್ಕೂ ಸರಕಾರಿ ಬಸ್ಸುಗಳ ದರಕ್ಕೂ ಬಹಳ ವ್ಯತ್ಯಾಸವಿದೆ, ಸರಕಾರಿ ಬಸ್ಸುಗಳಲ್ಲಿ ದರ ಜಾಸ್ತಿ ಇದ್ದರೂ ಪ್ರಯಾಣ ಸುಖವಿಲ್ಲ, ಓವರ್‌ಲೋಡ್ ಸಹ ಉಂಟು, ಈ ರೀತಿ ಕಷ್ಟವಿದೆ. ಇದು ಸ್ಪುಟ್ನಿಕ್ ಯುಗವಾದರೂ ಬಸ್ಸುಗಳ ವೇಗ ಕಡಮೆ, ಬೆಂಗಳೂರಿನಿಂದ ಶಿಡ್ಲಘಟ್ಟಕ್ಕೆ 30 ಮೈಲಿ ಹೋಗಬೇಕಾದರೆ 3 ಗಂಟೆ ಬೇಕು. ಇದರಿಂದ ಜನರಲ್ಲಿ ತಾಳ್ಮೆ ಹೋಗಿ ಆಯಾಸವಾಗುತ್ತದೆ. ಹೀಗಾಗಿ ಬಹಳಮಟ್ಟಿಗೆ ಸರಕಾರಿ ಬಸ್ಸುಗಳ ಆಡಳಿತ ಕೆಟ್ಟಿದೆ. ಆದಷ್ಟು ಜಾಗ್ರತೆ ಇರುವ ಲೋಪದೋಷಗಳನ್ನು ಸರಿಪಡಿಸಬೇಕು. ಜೊತೆಗೆ ಬಸ್ಸುಗಳು ಮಧ್ಯೆ ಕೆಟ್ಟುಹೋಗಿ ನಿಂತುಹೋಗುವ ಪ್ರಸಂಗಗಳಿವೆ, ನಿಲ್ಲಬಾರದೆಂದು ಹೇಳುವುದಿಲ್ಲ. ಆದರೆ ನಿಂತಾಗ ಸರಿಪಡಿಸುವುದಕ್ಕೆ ಬಸ್ಸುಗಳಲ್ಲಿ ಯಾವ ಟೂಲ್ಸ್ ಕೂಡ ಇರುವುದಿಲ್ಲ. ಖಾಸಗಿ ಬಸ್ಸುಗಳವರು ದಾರಿಯಲ್ಲಿ ಸಿಕ್ಕಿದರೂ ಅವರು ಸಹಾಯಮಾಡುವುದಿಲ್ಲ, ಖಾಸಗಿಯವರ ಬಳಿ ಬೇಕಾದ ಟೂಲ್ಸ್ ಇರುತ್ತದೆ. ಸರ್ಕಾರಿ ಬಸ್‌ಗಳಲ್ಲಿ ಸ್ಪ್ಯಾನರ್, ಸ್ಕ್ರೂ ಡ್ರೈವರ್ ಮುಂತಾದ ಯಾವ ಟೂಲ್ಸ್ ಸಹ ಇರುವುದಿಲ್ಲ. ಇನ್ನು ಮುಂದಾದರೂ ಬೇಕಾದ ಟೂಲ್ಸ್ ಬಸ್ಸುಗಳಲ್ಲಿಡುವುದು ಒಳ್ಳೆಯದು. ಜೊತೆಗೆ ಕೆಲವು ಬಸ್ಸುಗಳು ಗಂಟೆಗೆ ಹತ್ತು ಮೈಲಿಗಳಿಗಿಂತ ವೇಗವಾಗಿ ಹೋಗು ವುದಿಲ್ಲ, ಅಷ್ಟು ಕೆಟ್ಟಿರುವ ಹಳೆಯ ಬಸ್ಸುಗಳನ್ನು ಹಾಕದೆ ಒಳ್ಳೆಯ ಬಸ್ಸುಗಳನ್ನು ಹಾಕಿ ಅವು

ಎಲ್ಲೂ ನಿಲ್ಲದೆ ಕಾಲಕ್ಕೆ ಸರಿಯಾಗಿ ಊರನ್ನು ತಲಪುವಂತೆ ಸರಿಯಾಗಿ ರಿಪೇರಿಮಾಡಿ ಹಾಕಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು, ಇರುವ ಲೋಪಗಳನ್ನು ಸರಿಪಡಿಸಬೇಕು ಎಂದು ಸಲಹೆಮಾಡಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

Sri DIGAMBAR RAO BALAWANT RAO (Aland).—Mr. Speaker, Sir, while opposing the Demands No. 4 and 11, I would first speak about Demand No. 11—Administration of Justice. It is true that the intention of the framers of the Constitution has been that judiciary should be independent of the executive and having that in mind they inserted articles 217 and 233 in the Constitution. We find recently the interference of the Executive in the appointment of judges. In the appointment to High Court, very junior and not up to the mark judges are being appointed and no doubt this has created dissatisfaction among the members of the Bar. Similarly, it has been done in the appointment to the sub-ordinate courts. The Executive has been over asserting.

Sri S. D. KOTHAVALE (Sankeshwar).—Sir, in consultation with the Governor certain appointments have been made on the Benches of the High Court. He says juniors have been appointed and this has led to dissatisfaction of the others. Can such a comment be made with regard to the personnel of the High Court ?

Sri DIGAMBAR RAO BALAWANT RAO.—I said that the interference of the Executive has been too much because there are cases......

Sri S. R. KANTHI.—Sir, there is another point. The High Court Judges are appointed by the President of India on the recommendation of the Governor. The second thing is, so far as district judges are concerned, they are appointed by the Governor. The action of the Governor and the action of the President cannot be criticicised by members of this House.

Sri DIGAMBAR RAO BALAWANT RAO.—I am only critising the recommendation of the Executive.

Mr. SPEAKER.—In criticising the recommendation of the Executive the member is saying that those who have been appointed have created discontent.

Sri DIGAMBAR RAO BALAWANT RAO.—I am speaking of the Bar.

Mr. SPEAKER.—Has the member understood his own responsibility ? I believe, the conduct of the High Court Judges cannot be brought before this House.

Sri DIGAMBAR RAO BALAWANT RAO.—I am not. It is the interference of the Executive.

Mr. SPEAKER.—If he says that the recommendation is bad, I have nothing to say. But if he says anything about 'after the appointment', I cannot allow.

Sri S. R. KANTHI.—The Hon'ble Member must also know that somebody has to recommend either to the Governor or the President. But, these matters are quite confidential and what he presumes may not be correct at all.

Mr. SPEAKER.—No doubt, somebody has to recommend. But that body which has a right to recommend is not beyond criticism of this House. So, he has spoken so vaguely and delightfully that there is nothing against anybody.

*(laughter)*

Sri DIGAMBAR RAO BALAWANT RAO.—Sir, I refer to the posts of Public Prosecutors in the District and Sessions Courts. In making these appointments, it is sheer favouritism of the Treasury Benches. There also, senior and experienced people are ignored and some people who are in the good books of the Treasury Benches are appointed. In this respect the Executive is acting in excess of its powers.

Regarding Assistant Pleaders for the Munsiff Magistrate Courts, I submit, many of the failures of Government cases are due to the reason that they are not paid well. They are paid Rs. 25 per case. I submit at least Rs. 50 should be paid to such Assistants who are no less than Law Graduates and they must be paid Rs. 150 per month and it is only then that the litigation may improve and it may add to the revenue of the State. It is no good being penny wise, pound foolish. In the Munsiff Courts because many cases fail, much loss is being caused to the State which must be avoided hereafter.

Regarding functions of the court, we find in the lower courts whenever a witness comes there he is examined and bhatta is not paid immediately. Such instances are innumerable. I was myself a witness in one case where I had appeared on behalf of the prosecution in a case against a bus driver. But, I was not paid any bhatta in the Gulbarga Court. Some times what happens is, if the witness turns hostile, he is not paid any bhatta. It is the responsibility of prosecution that the witness does not turn hostile. Regarding other items, I have to submit that inter-State bus services in Gulbarga District are not improved. As a matter of fact, in Aland taluka, there is necessity of running buses to Maharastra border and also for some other routes where our people have got trade and commerce in the border. Secondly, there is no bus stand at Aland although it is a taluk place. It needs to be constructed at the earliest moment. So, also I would submit that there are some private vehicles plying on the route which are not meant for them and the police are indifferent and that has indirectly hampered the collection of revenue to the State. This also must be stopped.

With these observations I close my speech.

Sri S. D. KOTHAWALE.—Mr. Speaker, while supporting the Demands made by the Hon'ble Ministers, I would like to offer a few remarks regarding certain points pertaining to the administration of justice only. The hon'ble friends on the opposite have paid glowing

tributes to the independence of judiciary here. We are equally proud that the judiciary here and in other parts of India is independent. The Indian Nation under the leadership of Congress Party framed the Constitution in which........

SRI DIGAMBAR RAO BALAWANT RAO.—I said Indian Nation under the leadership of Indian Congress framed the Constitution in which the independence of judiciary is guaranteed. In this Mysore State we are very keen in maitaining that independence and observing and respecting the judicial decisions in cases even where it is possible to take a different view. Mysore is one of the few States in India which has effected seperation of judiciary almost comp etely. Judicial Seperation has been in force here for a number of years.

AN HON'BLE MEMBER.—Separation of judiciary and not judicial separation.

SRI S. D. KOTHAVALE.—I accept. But, if the hon'ble member looks into the meaning of this word in the dictionary, there is no difference in the sense it is expressed.

It may be seen that there are other States which have not gone to the same extent. We may find here that in the enforcement of Land Reforms Act or the Tenancy Laws, probably Mysore is the only State which has decided to entrust it to the judiciary. In other States in which this land reforms are in operation and the decision of the tenancy cases is in the hands of executive, Assistant Commissioner, Tahsilder, and so on. So, the hon'ble members may find that the Mysore Government is very keen in maintaining the independence of judiciary in every respect.

Criticisms have been made by many members on the opposite regarding the pendency of writs in the State. Here, I would like to give certain figures with respect to the pendency and the decision of the writ petitions. Since 1962 about 5,843 writs were filed. Out of this 815 were dismissed at the admission stage; as many as 2,259 were decided in favour of the Government and about 1230 were decided against the Government or the departments concerned. I have collected these figures from the reply given to a question in the Legislative Council.

SRI S. R. KANTHI.—The question put in the Legislative Council was about the writ petitions filed aginst several departments from 1962 upto date. The answer given is 2,259 decided in favour of the Government and decided against...

SRI H. SIDDAVEERAPPA.—I am glad the minister has collected some figures. He may please give figures ever since the Constitution was ushered into, from 26th January 1950. He can conveniently have 2 phases. From 1950 to 1957 and from 1957 to 1967. Like that he can give which will enlighten us.

SRI S. R. KANTHI.—The suggestion is good but it requires the help of the High Court. They say that it would take a long time and they want extra staff for that.

Sri S. D. KOTHAVALE.—From these figures it is very obvious that many writ petitions have been filed frivolously and a large majority, nearly 3/4ths dismissed after full hearing and about 25 per cent succeeded. But even here I think the success of 25 per cent also is not happy. It is for the Government to take this figure into consideration and see that the various administrative departments including the Law Department function more efficiently so that the writ petitions could be avoided and even if filed frivolously they would not be decided against the Government.

With respect to delays in the disposal of cases it is agreed that there are delays. But, here I would like to pinpoint one reason for the delay, the role played by the parties to the litigation and the advocates who respresent them. I think many practising advocates here must ask to themselves, to what extent, they are responsible. The advocates would like to take adjournment after adjourments and in some cases I find most of the records concern only adjourment applications. I think the delay is due to the adjournments taken by the parties and their advocates. That should be avoided. If filing of cases is very high, then there is case for the Government to appoint more judges. But the recent trend appears to be that filing of cases has gone down particularly in the civil courts and with the relaxation of the prohibition law probably the cases are likely to be few. Therefore the delay might be avoided provided the parties and their advocates are prompt in getting justice. Justice delayed is justice denied. It is well known to all.

I hear that the pendency of cases in the High Court is of the order of 6,500. I think this is a very large pendency. The pendency in civil appeals is 2,802 and the pendency in criminal appeals is 486. If these arrears are to be cleared, I think there is a clear case for the addition of one or two Judges to the High Court. I hope that Government will take this into consideration and see that one or two more judges are appointed to the High Court so that these arrears may be cleared.

4-30 P.M.

A request was made by one of the hon. Members that a special bench be appointed to hear industrial disputes under the Industrial Disputes Act. I think this is a good suggestion. Thereby many troubles may be avoided in the industrial field and there will be a industrial peace also.

Complaints were made regarding the appointment of Public Prosecutors and Government Pleaders. As far as I know, Government has been following some procedure in this matter. The District Judges and District Magistrates are consulted in this matter. They send their recommendations and out of the persons recommended selections are made. So, I do not know how allegations can be made against the selections saying that this party men or that party men are selected. One should be more responsible in making such allegations.

About libraries, furniture and court buildings, these are the grievances which should, of course, be tackled. There should be some sort of phased programme in the construction of court buildings and in giving library facilities and furniture to the courts and to the bar associations. In this connection, I will make one suggestion. The bar associations collect certain subscriptions for the management of their associations. As far as my experience goes, the Bar Association in Belgaum District have got their own libraries. They purchase books out of their subscription, and if Government gives some substantial contribution to these bar associations, much of the difficulty will disappear. With these observations I support the Demand.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಎರಡು ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ. ಮಾನ್ಯ ಸಿದ್ಧವೀರಪ್ಪನವರು ಸರಕಾರದವರು ನಡೆಸುತ್ತಿರುವ ಸಾರಿಗೆ ವ್ಯವಸ್ಥೆಯ ಬಗ್ಗೆ ಹಾಗೂ ಕೆಲವು ಖಾಸಗೀ ಬಸ್ಸು ಮಾಲೀಕರುಗಳಿಗೆ ಕೊಡುತ್ತಿರುವ ರಕ್ಷಣೆ ಹಾಗೂ ಪ್ರೋತ್ಸಾಹದ ಬಗ್ಗೆ ಬಹಳ ಕಟುವಾಗಿ ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದು ರಾಜ್ಯ ಸರ್ಕಾರದವರು ಈ ರಾಷ್ಟ್ರೀಕರಣ ಮಾಡತಕ್ಕಂತಹ ವಿಚಾರದಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ಅವರು ಆಡಿದಂತೆ ನಡೆಯುತ್ತಿಲ್ಲ. ಒಂದಲ್ಲ ಒಂದು ನೆಪ ಮುಂದೆ ಮಾಡಿ ಅದನ್ನು ಮುಂದೆ ಹಾಕುತ್ತಿದ್ದಾರೆ. ಇದರಿಂದ ಒಪ್ಪಿಕೊಂಡಂಥ ರಾಷ್ಟ್ರೀಕರಣ ತಡವಾಗಿ ನಡೆಯುತ್ತಿರುವುದೂ ಅಲ್ಲದೆ ವಿಶೇಷವಾಗಿ ನಷ್ಟವನ್ನೂ ಕೂಡ ನಾವು ಅನುಭವಿಸಬೇಕಾದ ಸ್ಥಿತಿ ಉಂಟಾಗಿದೆ. ರಾಷ್ಟ್ರೀಕರಣ ಮಾಡಿರತಕ್ಕ ರೂಟುಗಳಲ್ಲಿ ವಿಶೇಷವಾಗಿ ಖಾಸಗೀ ಬಸ್ಸುಗಳನ್ನು ಓಡಿಸುವ ವ್ಯವಸ್ಥೆ ಮಾಡಿರತಕ್ಕದ್ದು ಮತ್ತು ಇದನ್ನು ಹೋಗಲಾಡಿಸದೇ ಹೋದರೆ ನಷ್ಟವನ್ನು ತುಂಬಿಕೊಳ್ಳುವುದೂ ಕಷ್ಟವಾಗುತ್ತದೆ. ಹಿಂದೆ ತಾವು ಕೋಲಾರದಲ್ಲಿ ಆದ ಸಮಸ್ಯೆಗಳ ಬಗ್ಗೆ ಇಲ್ಲಿ ಕೇಳಿರಬಹುದು. ಆಗ ಅಲ್ಲಿ ಸುಮಾರು ಆರೇಳು ಲಕ್ಷ ರೂಪಾಯಿಗಳಷ್ಟು ನಷ್ಟವಾಯಿತು ಎಂದು ನಾವು ಕೇಳಿದ್ದೇವೆ. ನಾನು ಹೇಳುತ್ತೇನೆ, ರಾಜ್ಯ ಸರಕಾರದವರು ಈಗಲಾದರೂ ಸಹ ಈ ಕಾರ್ಯಗಳನ್ನು ಹೇಗಾದರೂ ಮಾಡಿಕೊಂಡು ಹೋಗುತ್ತಾರೆ ಖಾಸಗೀ ಮಾಲೀಕರುಗಳು ಓಡಿಸುವ ಬಸ್ಸುಗಳು ಹೋಗಬೇಕಾದರೆ ನಮ್ಮಲ್ಲಿ ಚಾಸಿಗಳು ಸರಿಯಾಗಿ ಸಿಕ್ಕುತ್ತಿಲ್ಲ ಎಂದು ಹಿಂದೆ ಒಂದು ಸಲ ಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸಿನವರು ಇಲ್ಲಿ ಹೇಳಿದ್ದರು ಇದರಿಂದ ತಡವಾಗಿದೆ ಎಂದು ಹೀಗೆ ಒಂದಲ್ಲ ಒಂದು ನೆಪ ಹೇಳುವುದನ್ನು ನಾನಂತೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗ ರಾಷ್ಟ್ರೀಕರಣ ಮಾಡತಕ್ಕದ್ದು ಅಲ್ಲದೆ ಅದು ಕಾರ್ಯಗತವಾಗುವಂತೆ ಮಾಡಬೇಕು. ರಾಜ್ಯದ ಎಲ್ಲಾ ರೂಟುಗಳನ್ನೂ ಸರಕಾರದವರೇ ತೆಗೆದುಕೊಳ್ಳಬೇಕು ಎಂದು ಈ ಸಭೆಯಲ್ಲಿ ಒತ್ತಾಯಪಡಿಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಬದರಿನಾರಾಯಣ ಐಯ್ಯಂಗಾರ್ಯರವರು ನಮ್ಮ ಜಿಲ್ಲೆಯವರು ಮತ್ತು ಅವರು ಮಾತನಾಡಿದ್ದೂ ಕೂಡ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ ವಿಚಾರಗಳನ್ನೇ ಸಮರ್ಥಿಸುತ್ತಾ ಹೇಳಿದರು. ಇದರಲ್ಲಿ ಅವರು ನಡೆಸುವುದಾದರೆ ಸರಿಯಾಗಿ ನಡೆಸಿಕೊಂಡು ಹೋಗಿ, ಕೇವಲ ತತ್ವದ ದೃಷ್ಟಿಯಿಂದ ನಿರ್ವಹಣೆ ಮಾಡಬೇಕೆಂದು ಅವ್ಯವಸ್ಥೆ ಮಾಡುವುದಕ್ಕೆ ಹೋಗಬೇಡಿ ಎಂದು ಅವರು ಹೇಳಿದಂತೆ ನಾನೂ ಕೂಡ ಅದನ್ನು ಒಪ್ಪುತ್ತೇನೆ. ಶ್ರೀಮಾನ್ ಬದರೀ ನಾರಾಯಣರವರು ತಪ್ಪು ತಿಳಿದುಕೊಳ್ಳದಿದ್ದರೆ ಇಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಅವರು ಒಂದು ದೊಡ್ಡ ಖಾಸಗೀ ಮೋಟಾರು ಕಂಪನಿಯ ಎಂದರೆ ಸಿ.ಕೆ.ಎಂ.ಎಸ್. ಸರ್ವಿಸ್ ಎಂದು ಹೇಳುತ್ತಾರೆ, ಇದರ ಒಂದು ಡೈರೆಕ್ಟರಾಗಿರುತ್ತಾರೆ. ಇವರಿಗೆ ಅಪಾರವಾದ ರೂಟುಗಳಿವೆ. ಶಿವಮೊಗ್ಗದಿಂದ ಚಿಕ್ಕಮಗಳೂರು, ಹಾಗೂ ಹರಿಹರ ಹೀಗೆ ಬಹಳವಾದ ರೂಟುಗಳನ್ನು ಇವರಿಗೆ ಕೊಟ್ಟಿದ್ದಾರೆ. ಆದರೆ ಶಿವಮೊಗ್ಗ ಜಿಲ್ಲೆಯ ಯಾವ ಜನರನ್ನಾದರೂ ಕೇಳಿದರೆ ಇದು ಹೇಗಿದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ ಇದು ಒಂದು ಗಾದೆಯಂತಾಗಿದೆ. ಇಲ್ಲಿರುವ ಜನ ಯಾವುದಾದರೂ ತುರ್ತು ಕೆಲಸಕ್ಕಾಗಿ ಹೋಗಬೇಕಾಗಿದ್ದರೆ ಮತ್ತು ಕಾಲಕ್ಕೆ ಸರಿಯಾಗಿ ಮುಟ್ಟಬೇಕು ಎಂದು ಬಸ್ಸಿನಲ್ಲಿ ಹೋಗಬೇಕಾಗಿದ್ದರೆ, ಸಿ. ಕೆ. ಎಂ. ಎಸ್. ಸರ್ವಿಸ್ಸಿನಲ್ಲಿ ಹೋಗಬಾರದು ಬೇರೆ ಬಸ್ಸುಗಳಲ್ಲಿ ಹೋಗಬೇಕೆಂದು ಹೇಳುತ್ತಾರೆ. ಇದನ್ನು ಯಾರು ಬೇಕಾದರೂ ಅಲ್ಲಿ ಕೇಳಬಹುದು. ಅವರಿಗೇ ಗೊತ್ತಾಗುತ್ತದೆ. ಅವರಿಗೆ ಅಪಾರವಾದ ರೂಟುಗಳನ್ನು ಕೊಟ್ಟಿದ್ದಾರೆ. ಏನೋ ಒಂದು ರೀತಿಯಲ್ಲಿ ಈ ಮೋಟಾರು ಕಂಪೆನಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ,

(ಶ್ರೀ ಎಸ್. ಗೋಪಾಲಗೌಡ)

ಇವರಿಗೆ ಬೇಕಾದಷ್ಟು ರೂಟುಗಳಿವೆ. ಇವನ್ನೆಲ್ಲಾ ಸರಕಾರದವರೇ ತೆಗೆದುಕೊಳ್ಳಬೇಕು. ಇದೇ ರೀತಿ ಕೆಲವು ಖಾಸಗೀ ಬಸ್ಸುಗಳು ಮಂಗಳೂರಿನಲ್ಲೂ ಇವೆ. ಇವನ್ನೆಲ್ಲಾ ಸರಕಾರದವರೇ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಇವೊತ್ತು ರಾಜ್ಯದ ಎಲ್ಲ ಕಡೆಯಲ್ಲೂ ಸಾರಿಗೆ ವ್ಯವಸ್ಥೆಯನ್ನು ಪೂರ್ತಿಯಾಗಿ ಸರಕಾರದವರೇ ತೆಗೆದುಕೊಳ್ಳಬೇಕು ಮತ್ತು ಯಾರಿಗೂ ಲುಕ್ಸಾನು ಆಗದಂತೆ ಇದನ್ನು ನಡೆಸಿಕೊಂಡು ಹೋಗಬೇಕಾದುದು ಅವಶ್ಯಕ. ಒಳ್ಳೆಯ ರೀತಿಯಲ್ಲಿ ಸರಕಾರದವರೇ ಬಸ್ಸುಗಳನ್ನು ನಡಸಿಕೊಂಡು ಹೋಗಬೇಕು ಎನ್ನುವುದರಲ್ಲಿ ಎರಡು ಅಭಿಪ್ರಾಯ ಯಾರಲ್ಲೂ ಇಲ್ಲ. ಮಾನ್ಯ ಸಿದ್ಧವೀರಪ್ಪನವರು ಹೇಳಿದ ಹಾಗೆ ಒಂದು ಬಸ್ಸು ಹಳ್ಳಕ್ಕೆ ಬಿತ್ತು. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿರಿ ಎಂದು ಕೇಳಿದರು. ಈ ವ್ಯವಸ್ಥೆಯಲ್ಲಿ ಟ್ರಾಫಿಕ್ ಕಂಟ್ರೋಲರುಗಳು ಹಾಗೂ ಇನ್ನಿತರ ಪೋಸ್ಟುಗಳು ಬೇಕೆಂದು ಹುದ್ದೆಗಳನ್ನು ಹೆಚ್ಚು ಮಾಡಿಕೊಂಡಿದ್ದಾರೆ. ಎಷ್ಟು ಜನರಿದ್ದರೂ ಕೂಡ ಒಂದು ಬಸ್ಸು ಷೆಡ್ಡು ಬಿಟ್ಟು ಹೊರಡುವಾಗ ಅದು ಹೊರಗೆ ಓಡಾಡಲು ಯೋಗ್ಯವಾಗಿದೆಯೋ ಇಲ್ಲವೇ ಎನ್ನುವುದನ್ನು ಯಾರೂ ಸರಿಯಾಗಿ ನೋಡುತ್ತಿಲ್ಲ. ಹತೋಟಿ ಇಲ್ಲದೇ ಇಂತಹ ವ್ಯವಸ್ಥೆ ಮಾಡಿದ್ದಾರೋ ಎಂದು ನನಗನಿಸುತ್ತದೆ. ಸ್ಟಾಫ್ ಬೇಕು ಎಂದು ಹೆಚ್ಚು ಪೋಸ್ಟುಗಳನ್ನು ಕ್ರಿಯೇಟ್ ಮಾಡಿ ಭರ್ತಿ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಯಾವ ತರಹದ ವ್ಯವಸ್ಥೆಯೂ ಇರುವಂತೆ ಕಾಣುತ್ತಿಲ್ಲ. ನಾನು ಮೊನ್ನೆ ಶಿವಮೊಗ್ಗಕ್ಕೆ ಇದೇ ಬಸ್ಸಿನಲ್ಲಿ ಹೋಗಿ ಬಂದೆ. ಬಸ್ಸು 1 ಗಂಟೆ 5 ನಿಮಿಷಕ್ಕೆ ಹೊರಡಬೇಕಾದ್ದು 2-45 ಗಂಟೆಗೆ ಹೊರಟಿತು ಮತ್ತು ರಾತ್ರಿ ಹನ್ನೊಂದು ಗಂಟೆ ವೇಳೆಗೆ ಶಿವಮೊಗ್ಗ ಸೇರಿತು. ಸಾಲದ್ದಕ್ಕೆ ಇದು ಎಕ್ಸ್‌ಪ್ರೆಸ್ ಬಸ್ಸು ಎಂದು ಬೋರ್ಡು ಬೇರೆ ಹಾಕಿದ್ದಾರೆ. ಯಾರಿಗಾದರೂ ಇದು ನಾಚಿಕೆಗೇಡಿತನದ ವಿಚಾರ ಎಂದು ಅನಿಸುತ್ತದೆ. ಇದನ್ನು ಅಧಿಕಾರಿಗಳು ಸರಿಯಾಗಿ ತಿಳಿದುಕೊಂಡು ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯವಾಗಿ ಹೇಳುತ್ತೇನೆ.

ಇನ್ನು ಇಲ್ಲಿರುವ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚು ಮಾಡುತ್ತೇವೆ ಎಂದು ಹಿಂದೆ ಒಂದು ಸಾರಿ ಇಲ್ಲಿ ಹೇಳಿ ಆಶ್ವಾಸನೆ ಕೂಡ ಕೊಟ್ಟಿದ್ದರು. ಇದರಲ್ಲಿ ಮುಂಬಯಿ ಕರ್ನಾಟಕದವರು ಹಾಗೂ ಹಳೇ ಮೈಸೂರಿನವರು ಎಂದು ಇರುವುದರಿಂದ ಇಲ್ಲಿರತಕ್ಕ ಪದ್ಧತಿಗಳನ್ನು ದುರುಪಯೋಗಪಡಿಸಿಕೊಂಡು ಒಂದೇ ಯೂನಿಯನ್ ಇಲ್ಲಿಲ್ಲದೆ ಬೇರೆಯಾಗಿದೆ. ಇದರಲ್ಲಿ ಸ್ವಲ್ಪ ತೊಂದರೆಗಳಂತೂ ಆಗಿವೆ ಎಂದು ನಾನು ತಿಳಿಯುತ್ತೇನೆ. ಆದರೆ ಇಲ್ಲಿರುವವರಿಗೆ ಸರಿಯಾದ ಸಂಬಳಸಾರಿಗೆಗಳನ್ನು ಕೊಡದೇ ಹೋದರೆ ಅವರುಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಏನೋ ಯೂನಿಯನ್ನಿನವರು ಸ್ವಲ್ಪ ಬಿಗಿಯಿಂದ ಇದ್ದಾರೆ ಎಂದು ಸರಕಾರದವರು ಇದರಲ್ಲಿ ಇಲ್ಲದ ಮುಷ್ಕರ ಹಾಗೂ ಗೊಂದಲಗಳಿಗೆ ಅವಕಾಶ ಕೊಡುವುದು ಸರಿಯಲ್ಲ. ನಾವೆಲ್ಲಾ ಇಲ್ಲಿ ಒಪ್ಪಿಕೊಂಡಿರುವಂತೆ ಸರಕಾರ ರಾಷ್ಟ್ರೀಕರಣ ಮಾಡಬೇಕೆಂದಿರುವ ಈ ಕಾಲದಲ್ಲಿ ಅವರಿಗೆಲ್ಲ ಏನೇನು ಕೊಡಬೇಕೋ ಅವನ್ನೆಲ್ಲಾ ಕೊಡಬೇಕಾದುದು ಅವಶ್ಯಕ. ಇದನ್ನು ಕೊಡಬೇಕೆಂದು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಒಂದು ಮಾತನ್ನು ಜುಡಿಷಿಯರಿ ಬಗ್ಗೆ ಹೇಳಬೇಕಾಗಿದೆ. ಭೂ ಸುಧಾರಣೆ ಜಾರಿಗೆ ಕೊಡುತ್ತೇವೆ ಎಂದು ಶಾಸನವನ್ನೇನೋ ತಂದರು. ಇದನ್ನು ನಡೆಸುತ್ತಾರೋ ಇಲ್ಲವೋ ಮುಂದೆ ನೋಡಬೇಕು. ಒಂದು ವೇಳೆ ಇದನ್ನು ಜಾರಿಗೆ ಕೊಡುವ ಪಕ್ಷದಲ್ಲಿ ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಬಹಳ ವಿವಾದಗಳು ಉಂಟಾಗುವುದರಿಂದ ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಟ್ರಿಬ್ಯುನಲ್ಲನ್ನು ರಚನೆ ಮಾಡುವುದಕ್ಕೆ ಸರಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿ ನಗರ).—ಮಾನ್ಯ ಸಭಾಪತಿಗಳೇ, ಮಾನ್ಯ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ರವರು ಮಂಡಿಸಿರುವ ಈ ಡಿಮ್ಯಾಂಡನ್ನು ಅನುಮೋದಿಸಿ ಎರಡು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಈ ಬಸ್ಸುಗಳನ್ನು ನನ್ನ ಕ್ಷೇತ್ರ ಎಂದರೆ ಶಾಂತಿನಗರ, ಅಲಸೂರು ಮತ್ತು ಅಲ್ಲಿಂದ ಇತರ ಕಡೆಗಳಿಗೆ ಕಳುಹಿಸುತ್ತಾರೆ. ಆದರೆ ಏನು ಪಾಪ ಮಾಡಿದ್ದಾರೋ ಜನ ಹಳೇ ಬಸ್ಸುಗಳನ್ನು ಕಳುಹಿಸುತ್ತಾ ಇದ್ದಾರೆ. ನಾನು ಕಾರ್ಪೊರೇಷನ್‌ನಲ್ಲಿ ಇದ್ದಾಗಿನಿಂದಲೂ ಹೇಳುತ್ತಾ ಇದ್ದೇನೆ, ಮೇಯರೂ ಸಹ ಒಂದು ಸಲ ಅಧಿಕಾರಿಗಳನ್ನು ಕರೆಸಿ ಹೇಳಿದ್ದಾರೆ. ಹಳೇ ಬಸ್ಸುಗಳನ್ನು ಕಂಟೋನ್‌ಮೆಂಟ್ ಕಡೆಗೆ ಕಳುಹಿಸುತ್ತೀರಿ, ಹೊಸ ಬಸ್ಸುಗಳನ್ನು ದಯವಿಟ್ಟು ಕಳುಹಿಸಿ ಎಂದು ಹೇಳಿದರೆ ಇದುವರೆಗೂ ಕೂಡ ಅದನ್ನು ಸರಿಪಡಿಸಿಲ್ಲ. ಆದ್ದರಿಂದ ಈಗಲಾದರೂ ಅದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತಾ ಇದ್ದೇನೆ. ಅಲಸೂರಿನಲ್ಲಿ ಪುರಾತನವಾದ ಬಹಳ ಒಳ್ಳೆಯ ದೇವಸ್ಥಾನ, ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಇದೆ, ಅಲ್ಲಿ ಒಂದು ಬಸ್ ಸ್ಟಾಂಡ್

ಇವೆ, ಹೆಣ್ಣು ಮಕ್ಕಳು ಎಳೆ ಮಕ್ಕಳನ್ನು ಎತ್ತಿಕೊಂಡು ನಿಂತಿರುತ್ತಾರೆ, ಅಲಿಗೆ ಬಸ್‌ಸ್ಟಾಪ್ ಬಂದು ಎಷ್ಟೋ ವರ್ಷ ಆಯಿತು. ಇದುವರೆಗೂ ಬಸ್‌ಸ್ಟ್ಯಾಂಡ್ ಷೆಲ್ಟರ್ ಹಾಕಿಲ್ಲ. ಕಾರ್ಪೊರೇಷನ್ ಅಧಿಕಾರಿಗಳಿಗೆ ಕಾಗದ ಬರೆದಿದ್ದೇನೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಏಕೆ ಈ ತರಹ ಮಾಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ನಾನು ಪ್ರತಿದಿವಸ ನೋಡುತ್ತಾ ಇದ್ದೇನೆ, ಆಫೀಸುಗಳಿಗೆ ಹೋಗುವ ಸಮಯದಲ್ಲಿ ಹೆಣ್ಣು ಮಕ್ಕಳು, ಗಂಡಸರು 200-300 ಅಡಿ ನಿಂತುಕೊಂಡು ಬಸ್‌ಗೆ ಕಾಯುತ್ತಾ ಇರುತ್ತಾರೆ. ಇನ್‌ಸ್ಪೆಕ್ಟರನ್ನು ಕೇಳಿದರೆ ಬಸ್‌ಗಳು ಇಲ್ಲ ಎಂದು ಹೇಳುತ್ತಾರೆ. ಬಸ್‌ಗಳು ಇರುವುದೂ ಸಹ ಟೈಂಗೆ ಸರಿಯಾಗಿ ಬರುತ್ತಾ ಇಲ್ಲ, ಬೇಕಾದರೆ ನೀವೇ ಅಲ್ಲಿಗೆ ಒಂದು ಸಲ ಭೇಟಿ ಕೊಟ್ಟು ನೋಡಿ ನಿಮಗೆ ಗೊತ್ತಾಗುತ್ತದೆ. ನಾಗರಿಕರಿಗೆ ಸರ್ಕಾರದವರು ಒಳ್ಳೆಯ ರೀತಿಯಲ್ಲಿ ಬಸ್ಸುಗಳನ್ನು ಹಾಕಿ ನಾಗರಿಕ ಸೌಕರ್ಯ ಮಾಡಿಕೊಡಬೇಕೆಂದು ಎಷ್ಟು ಸಾರಿ ಕಾಗದ ಬರೆದು ತಿಳಿಸಿದರೂ ಕೂಡ ಅಧಿಕಾರಿಗಳು ಆ ಬಗ್ಗೆ ಗಮನ ಕೊಡುತ್ತಾ ಇಲ್ಲ, ನಾಗರಿಕರಿಗೆ ಅನ್ಯಾಯ ಮಾಡುತ್ತಾ ಇದ್ದಾರೆ, ಆಫೀಸುಗಳಿಗೆ ಬರುವ ಜನಗಳಿಗೆ ಅನುಕೂಲವಾಗುತ್ತಾ ಇಲ್ಲ. 200—300 ಅಡಿ ಹೆಂಗಸರು ಗಂಡಸರು ಕ್ಯೂನ್ ಆಗಿ ನಿಂತುಕೊಂಡಿರುತ್ತಾರೆ ಅವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಜಾಗ್ರತೆಯಾಗಿ ಟೈಂಗೆ ಸರಿಯಾಗಿ ಬರುವಂತೆ ಅದನ್ನು ಸರಿಪಡಿಸಬೇಕೆಂದು ಹೇಳುತ್ತಾ ಇದ್ದೇನೆ. ಶಾಂತಿ ನಗರದ ಏರಿಯಾದಲ್ಲಿ ಬಸ್ ರೂಟ್ ನಂಬರ್ 19ಗೆ ಬಸ್ ಷೆಲ್ಟರ್ ಇಲ್ಲದೇ ಬಹಳ ತೊಂದರೆಯಾಗಿದೆ. ಬಿಸಿಲು ಕಾಲದಲ್ಲಿ ಬಿಸಿಲಿನಲ್ಲಿ ನಿಂತೂ ನಿಂತೂ ಜನಗಳಿಗೆ ಸಾಕಾಗಿ ಹೋಗುತ್ತದೆ, ಅದೇ ರೀತಿ ಮಳೆಗಾಲದಲ್ಲಿ ಮಳೆ ಬಂದರೆ ಜನಗಳಿಗೆ ನಿಂತುಕೊಳ್ಳುವುದಕ್ಕೆ ಅವಕಾಶವಿಲ್ಲದೆ ತೊಂದರೆಯಾಗಿದೆ. ಇದೇ ರೀತಿ ಅಲಸೂರಿನಲ್ಲಿ ಬಸ್ ಷೆಲ್ಟರ್ ಇಲ್ಲ, ಬಸ್ ಸ್ಟಾಪ್ ಇರುವ ಕಡೆ ಯಾರೂ ಬರುತ್ತಿಲ್ಲ ಎಂದು ಹೇಳಿ ಬೇರೆ ಕಡೆ ಅನಾನುಕೂಲವಾಗಿರುವ ಕಡೆ ಅದನ್ನು ಹಾಕಿರುತ್ತಾರೆ. ಬಹಳ ಕಾಲದಿಂದ ಇದ್ದ ಈ ಬಸ್ ಸ್ಟಾಪನ್ನು ಈ ರೀತಿ ಬೇರೆಕಡೆಗೆ ಹಾಕಿ ಏಕೆ ಈ ರೀತಿ ಅನಾನುಕೂಲ ಮಾಡಿದ್ದೀರಿ ಎಂದು ನಾನು ಬರೆದಿದ್ದೇನೆ ಅದಕ್ಕೆ ಉತ್ತರ ಬಂದಿಲ್ಲ. ಆದ್ದರಿಂದ ಅದನ್ನು ದಯವಿಟ್ಟು ಇನ್‌ಸ್ಪೆಕ್ಷನ್ ಮಾಡಿ ಎಲ್ಲಿ ಹಿಂದೆ ಬಸ್ ಸ್ಟಾಪ ಇತ್ತೋ ಅಲ್ಲೇ ಹಾಕಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ.

ಸರ್ಕಾರಿ ಬಸ್ಸುಗಳಿಂದ ಆದಾಯ ಬರಬೇಕೆಂದು ತಾವು ನಿರೀಕ್ಷೆ ಮಾಡುತ್ತಾ ಇದ್ದೀರಿ. ಅದಕ್ಕೆ ಬದಲಾಗಿ ಡ್ರೈವರ್ಸ್ ಮತ್ತು ಕಂಡಕ್ಟರುಗಳು ಆದಾಯ ಮಾಡುತ್ತಾ ಇದ್ದಾರೆ. ಮುಂದೆ ಜೀಪ್‌ಗಳನ್ನು ಇಟ್ಟು ಟಿಕೆಟ್ ಚೆಕ್ ಮಾಡುತ್ತಾ ಇದ್ದರು. ಆಗ ಭಯ ಭಕ್ತಿಯಿಂದ ಅವರುಗಳು ನಡೆದುಕೊಳ್ಳುತ್ತಾ ಇದ್ದರು. ನಾನು ಬೆಂಗಳೂರಿನಲ್ಲಿ 24 ಗಂಟೆ ಸಂಚಾರ ಮಾಡುತ್ತಾ ಇರುತ್ತೇನೆ, ಇದು ಹೇಗೆ ನಡೆಯುತ್ತದೆ ಎಂಬುದು ನನಗೆ ಗೊತ್ತು. ಈಗ ಸಾಯಂಕಾಲವಾದರೆ ಟಿಕೆಟ್ಟನ್ನೇ ಕೊಡುವುದಿಲ್ಲ. ಕೊಟ್ಟ ದುಡ್ಡನ್ನು ಜೇಬಿಗೆ ಹಾಕಿಕೊಳ್ಳುತ್ತಾರೆ, ಈ ತರಹ ಅನ್ಯಾಯ ಮಾಡುತ್ತಾ ಇದ್ದಾರೆ. ಇದಕ್ಕೆ ಅಧಿಕಾರಿಗಳು ಗಮನ ಕೊಡುತ್ತಾ ಇಲ್ಲ. ಮುಂಚೆ ಜೀಪಿನಲ್ಲಿ ಬಂದು ಚೆಕ್ ಮಾಡಿ ಕ್ರಮ ತೆಗೆದುಕೊಳ್ಳುತ್ತಾ ಇದ್ದರು, ಈಗ ಮಾಡುತ್ತಾ ಇಲ್ಲ, ಇದನ್ನು ಯಾರೂ ಕೂಡ ಗಮನಿಸುವುದಿಲ್ಲ. ಪ್ರಯಾಣಿಕರಿಗೆ 5 ಪೈಸೆ ಉಳಿತಾಯವಾಗುತ್ತದೆ. ಇವರಿಗೆ 10 ಪೈಸೆ ಜೋಬಿಗೆ ಬರುತ್ತದೆ, ಈ ರೀತಿ ಬಹಳ ಅನ್ಯಾಯ ನಡೆಯುತ್ತಾ ಇದೆ, ನಾಳೆ ದಿವಸ ಕಲೆಕ್ಷನ್ ಕಮ್ಮಿಯಾದರೆ 1—2 ಪೈಸೆ ನಾವೇ ಜಾಸ್ತಿ ಕೊಡಬೇಕಾಗುತ್ತದೆ. ಇದನ್ನು ಸರಿಪಡಿಸಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಕೇಂಬ್ರಿಡ್ಜ್ ಲೇ ಔಟ್ ಅಂತ ಇದೆ ಅಲ್ಲಿಗೆ 21 (ಎ) ಬಸ್ ಹಾಕಿದ್ದಾರೆ. ಸಾಧಾರಣ 5—6 ಜನ ಕೂಡ ಬರುತ್ತಿಲ್ಲ. ದೊಮ್ಮಲೂರುವರೆಗೂ ಹಾಕಿ ಅಲ್ಲಿಂದ ಕೇಂಬ್ರಿಡ್ಜ್ ಲೇ ಔಟ್‌ಗೆ ಬಂದರೆ ಅನುಕೂಲವಾಗುತ್ತದೆ ಎಂದು ಹೇಳಿ ಅಧಿಕಾರಿಗಳಿಗೆ ಬರೆದಿದ್ದೇನೆ. ಆ ರೀತಿ ಮಾಡಿದರೆ ನಿಮಗೂ ಕೂಡ ಆದಾಯ ಬರುತ್ತದೆ. ಆದರೆ ಇದುವರೆಗೂ ಕೂಡ ಆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಅವರು ಬಸ್ ರೂಟಿನಲ್ಲಿ ಹೋಗಿ ನೋಡಬೇಕು. ಆದಾಯ ಬರುತ್ತದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬೇಕು. ಅಲ್ಲಿ ಪ್ಯಾಸೆಂಜರ್ಸ್ ಯಾರೂ ಇರುವುದೇ ಇಲ್ಲ ದೊಮ್ಮಲೂರಿಗೆ ಮಾರತ್ ಹಳ್ಳಿಯಿಂದ ಬಸ್ ಬರುತ್ತದೆ ಅದರಲ್ಲಿ ಸೀಟು ಸಿಕ್ಕುವುದಿಲ್ಲ. ಮಾರತ್ ಹಳ್ಳಿಯಿಂದಲೇ ಫುಲ್ ಆಗಿ ಬರುತ್ತದೆ. ಜನ ನಿಂತೂ ನಿಂತೂ ಮನೆಗೆ ಹೋಗುತ್ತಾರೆ, ಇದನ್ನು ಅಧಿಕಾರಿಗಳಿಗೆ ತಿಳಿಸಿದರೂ ಕೂಡ ಯಾವ ಪ್ರಯೋಜನವೂ ಆಗಿಲ್ಲ. ಇದಕ್ಕೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬಸ್ಸುಗಳನ್ನು ಬೆಳಿಗ್ಗೆ ಹೊತ್ತು ಷೆಡ್‌ನಿಂದ ಕಳುಹಿಸುವಾಗ ಯಾರೂ ಕೂಡ ನಟ್ ಟೈಟ್ ಆಗಿವೆಯೋ ಇಲ್ಲವೋ ಎಂಬುದನ್ನು ಚೆಕ್ ಮಾಡಿ ಕಳುಹಿಸುತ್ತಾ ಇಲ್ಲ. ಅದನ್ನು ಹಾಗೆಯೇ ಡ್ರೈವರ್ಸ್ ತೆಗೆದುಕೊಂಡು ಬಂದು ದಾರಿಯಲ್ಲಿ ಯಾರು ಸಿಕ್ಕುತ್ತಾರೆಯೋ ಅವರಮೇಲೆ ಬಿಡುವುದು ಜಾಸ್ತಿಯಾಗಿದೆ. ಈ ರೀತಿಯಾಗುತ್ತಾ ಇರುವುದು ಸರ್ಕಾರದವರಿಗೆ ಕೆಟ್ಟ ಹೆಸರು ಬರುತ್ತಾ ಇದೆ. ಅಲ್ಲದೇ ನಷ್ಟವೂ ಕೂಡ ಆಗುತ್ತಾ ಇದೆ. ಬಸ್‌ಗಳನ್ನು ಷೆಡ್‌ನಿಂದ ಬಿಡುವಾಗ ಚೆಕ್ ಮಾಡುತ್ತಿಲ್ಲ,

(ಶ್ರೀ ಎ. ನಂಜಪ್ಪ)

ಕ್ಲೀನ್ ಮಾಡುತ್ತಿಲ್ಲ, ಈ ರೀತಿ ಬಹಳ ಅನ್ಯಾಯ ನಡೆಯುತ್ತಾ ಇವೆ, ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**Mr. SPEAKER.**—Now a request has come that we might sit till 6-30 P.M if it suits the Hon'ble Ministers. I do not know whether they have got any prior engagements.

**Sri S. R. KANTHI.**—We have no objection.

**Mr. SPEAKER.**—Now Mr. Bommai will speak.

*Sri Siddaiah Kashimat rose.*

**Mr. SPEAKER.**—I have noted Sri Siddaiah Kashimath.

**Sri SIDDAIAH KASHIMATH** (Shirahatti).—I have been standing up for a number of times today and yet I have not been able to catch your eye.

**Mr. SPEAKER.**—Is it a complaint against me or the whip?

**Sri SIDDAIAH KASHIMATH.**—We have been trying to catch your eye so many times. If we are not to be allowed to speak, then we will sign and go away. What is the use of taking so much trouble to give cut motions on this demand and still not being able to get a chance to speak on them? This is going on ever since the beginning of this Session. We are tolerating it since the beginning, but it has reached a stage when it cannot be tolerated. What does this mean?

**Mr. SPEAKER.**—What does the Leader of the Opposition and the Whips say to this?

**Sri SIDDAIAH KASHIMATH.**—There should not be any discrimination like this. My friends also are suffering like this.

**Mr. SPEAKER.**—I can understand the righteous indignation.

**Sri SIDDAIAH KASHIMATH.**—I stood up 10 times. Are we to stand here like school children? This is not the way to function here. We have come here representing 1 lakh of people and we have also to put forth our views before the House. The procedure now followed is intolerable. If we are not to be allowed to speak, then why should we come here?

**Mr. SPEAKER.**—If this kind of criticism were to come like this, then I will have to take up all powers unto myself.

**Sri SIDDAIAH KASHIMATH.**—You have seen me here for the past 5 years. Such a procedure was not in vogue then. This is something new.

**Mr. SPEAKER.**—Anger or indignation, is no manopoly of any single individual. If the Hon'ble member, Sri Siddiah Kashimath represents one lakh of people, I represent two crores. There is only one Speaker for the whole State. Let us not get into that domain. Such reasons

should be avoided by the tact of the Whips. I am getting too many slips. It shows that there is no coherence, let alone soli larity. I am trying to be liberal as much as possible. This should be discussed amongst members and they should come to conclusion. If I do not respect the lists that are sent to me, it amounts to discourtesy to the Whips. Otherwise, I will have to take the power in my hands. Every member here is an elected member.

AN HON'BLE MEMBER.—Sir, it is not a complaint against the Speaker.

Mr. SPEAKER—Anyway, it is not a compliment to anybody.

Sri S. R. KANTHI.—Sir, the trouble is not on this side, it is always on the other side.

Sri H. SIDDAVEERAPPA.—Now that the Hon'ble Minister for Parliamentary Affairs seems to think that the trouble......

Mr. SPEAKER.—The member is intervening within the time that is available for others!

Sri H. SIDDAVEERAPPA.—Although there are varied parties on this side, by and large, as you have seen, so far things have been moving according to some approved plan. May be, my friend Sri Siddaiah Kashimath has not got a chance. That is a different matter. But, barring the solitary instance, I do not think any other thing has come to your notice to make a sweeping generalization that the trouble is on this side. I can say that trouble is always there to the sweet will of the Minister for Parliamentary Affairs.

Mr. SPEAKER.—If I disclose all that, there will be plenty of trouble everywhere. Do the members want me to do that? Sri Siddaiah Kashimath is not the only member. I have got with me, in writing, not one request, but several requests. Therefore, I am appealing to the Whips to come to some conclusion. If they do not help me, what can I do? All this will go into the records, it may be to the credit or discredit. I am prepared to sit for two hours more. Let the members try to help me.

ಶ್ರೀ ಸಿದ್ದಯ್ಯ ಕಾಶಿಮಠ್.—ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ಅನೇಕಾವರ್ತಿ ತಂದಿದ್ದೇನೆ. ನನಗೆ ಯಾವಾಗಲೂ ಹೀಗೆ ತೊಂದರೆ ಆಗುತ್ತಿದೆ. ತಮಗೂ ಗೊತ್ತಿದೆ ಇದು.

Mr. SPEAKER.—Again it Seems that the hon. member is not catching the point. He is a member of a Party. I will have to disclose that he is not controlled by his Whip. I do not know whether it is a partywise list; how can I distinguish?

Sri S. R. BOMMAI (Kundgol).—Sir, I oppose the Demands. I associate myself with the sentiments expressed in this House so far as the high traditions of judiciary of our State. But, the ministerial part of the judicial administration, is a very sorry state of affairs. With my experience and the information given to me, I can say that the Courts have been handicapped by the non-supply of stationery and forms. We

(SRI S. R. BOMMAI)

are ashamed to receive summons in a small piece of paper by the Judicial Magistrate, and no summon forms are supplied to the Courts for the past so many years in North Karnatak. I know of instances, where the Judicial Officers got them privately printed and have been managing the affairs of the Courts. I feel the Law Department has forgotten the Courts about the supply of stationery and furniture. Adequate staff is not provided to look after the law books as a result of which the law books are being stored in one room without use.

Coming to the question of enactment of laws in this State, nearly 100 uniform laws have been enacted, but no rules have been framed as yet. In many Acts and laws, there are a number of flaws in printing as well as in drafting. The High Court has observed in one of their judgement that certain amendments are necessary for a number of Acts, particularly the Land Revenue Act, the Land Reforms Act and also the Municipal Act. Though this judgement was pronounced one year back, nothing has been done by the Law Department to amend these Acts. The Land Revenue Act empowers the revenue authorities to deal with appeals. But the revenue authorities pass orders under a number of Acts and no appeal provision is made. Another contingency arose in 1965 under the Civil Court Act. The Civil Court Judge of Hubli is transferred and the powers are entrusted to the Munsiff. The Munsiff cannot pass any judicial orders nor the District Judge. So, we have no Civil Court in Hubli, during this period and there is no suitable provision in the Civil Courts Act. This has also been observed by the High Court in one of their judgements. In a number of cases, particularly when strictures are passed against the revenue or executive or police officers, it is the duty of the Law Department to bring it to the notice of the concerned Department or the Minister concerned. That has not been done at all. The Law Department has failed in its noble work. The law books must be made available immediately they are printed. If we go to a Government printing press, we don't find law books. If we are not able to get the law books and rules, how are we to manage? How can the public know the rules when the lawyers are not able to get the books?

5-00 P.M.

I would like to speak one or two words about the State Transport. Tax on Tractors vehicles are very heavy with the result the agriculturists have to suffer a lot. Every time the agriculturists or the owner of the vehicle have to go to Road Transport Authority's Office and get his vehicle passed. Corruption is at rampant in that office. He has to go twice or thrice in a year to get his work done. The Hon'ble Minister will kindly bear in mind and see that every owner of the vehicle should be made to visit that office only once in a year so that the trouble of visiting twice or thrice will be avoided. I would like to bring to the notice of the Hon'ble Minister that there are no sufficient

number of Bus shelters in Hubli City. We represented to the Transport Department to construct Bus shelters. Since 4 years we are pressing the Department to construct Bus Shelters. But no action has been taken. Women and children will have to stand waiting for the bus in the hot sun and rain. Therefore, the Hon'ble Minister will kindly attend to this and see that shelters are constructed immediately wherever necessary. I am told that Civil Court at Hubli is going to be shifted to some other place. This is a very important question so far as the Hubli City is concerned. Sir, in 1948, the High Court of Bombay held a judicial enquiry and also sent a judge of the High Court to conduct an enquiry. Taking into consideration all the facts, they had arrived at a conclusion that there should be a Court there. The work of the present Court is very heavy. The people also feel that the Court should be there only. If the Court is shifted to some other place against the wishes of the people, there will be great agitation by the people. Kindly consider this. Thank you, Sir.

† Sri M. MALLIKARJUNASWAMY (Malavalli).—Mr. Speaker Sir, while welcoming the demands on Taxes on Vehicles, Parliament, State/Union Territory Legislature and Administration of Justice, I would like to meet some of the points raised by some Hon'ble Members of this House. Some of the members have demanded for impartial judiciary. Judiciary in my opinion is doing very good work and it is very impartial in upholding justice. Our Hon'ble Colleague Sri Kothawale has referred to a number of writ petitions pending in the High Court and that speaks of the efficiency of the Government. He quoted wrong figures. Of course it was corrected by the Minister for Parliamentary affairs.

Sri S. D. KOTHAWALE.—I had given the correct figures. Our Colleague Sri Mallikarjunaswamy has not understood it properly.

Sri M. MALLIKARJUNASWAMY.—Now even 25 per cent of the writs that have been filed are not very regular and the Government is mostly not responsible for some of these writs. But I make a humble suggestion that most of these writs could have been avoided if the Government was a bit cautious and intelligent. Therefore, the Minister concerned should make up his mind to avoid the criticisms at the hands of the public with regard to these writ petitions. Even the Congress people are criticising the Government on this point. The Government should not give way for such criticisms.

Sri H. Siddaveerappa has pointed out that two party system of Government would solve the problems that confronted the State. He thinks that social order could be brought about and the so called Nationalisation could also be done in all the fields in a better manner. Two party system is not possible in this country because as we are seeing the Jansangh and Communists parties are not working properly. The Communist Party has been split up into Left and Right and no concrete useful work has been done by both the wings, but instead they have created some fear among the public and the people are left in the

(SRI M. MALLIKARJUNASWAMY)

lurch. Mr. Siddaveerappa and Gopala Gowda spoke as though they are opposed to the method of nationalisation that the Congress Government is following. Sri Gopala Gowda a member of the S.S.P. always holds on to this policy of nationalisation and we are also committed to the policy of nationalisation. Let me tell him that we will go ahead with the policy of nationalisation. Nationalisation has become much more important after independence and after panchayat Raj. It is not the profit that is important in public utilities, but it is the social gain that is more important in nationalisation.

Coming to the Administration of Justice, Mr. Speaker Sir, I would like to say that the representation of scheduled castes and scheduled tribes in the Judiciary or in any other service is inadequate. In the appointment of Public Prosecutors and Government Pleaders, the Government will have to view in a sympathetic manner. But the benefit of protection is denied to minorities with regard to the constitutional safeguards and the Acts pertaining to the eradication of untouchability. The eradication of untouchability was moved at the instance of Mahathma Gandhi and Dr. Ambedkar, but the programme is left unimplemented and remained in the white paper chapter of the Indian Constitution. The Government will have to view it in a sympathetic manner so that these poor people will get their share. Of course the Law Minister is always sympathetic, generous and has a soft corner for these people and he will see what best could be done will be done. It is the duty of the Legislators to protect this principle and uphold justice especially to the lowest strata of the society in this country.

Mahathma Gandhi had observed that we suffer from imperfect way of doing things and we suffer from imperfect judgements. Judiciary and Law Courts are always anxious to dispense justice. But the other authorities have always been suppressing this truth because of their fallacious attitude.

Again I am referring to the reprsentation of the scheduled castes and scheduled tribes in some cadres in High Court and in the District and Sessions Courts. Last time when two people applied for the post of District and Sessions Judge, they said there are no qualifications. But as a matter of fact there is no constitutional provision to say that this is the qualification and so much of experience is required. The qualifications they were having was quite enough. But these unilateral authorities of the Judiciary took a decision and stipulated 10 years experience. It appears as if they have done this to keep out the scheduled castes and scheduled tribes. In this connection I give a strong note to the Chief Minister and that was not given proper heed. Even now it is possible for men who are in the administration to take to their mind and see that justice is upheld. With these remarks I close my speech.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇರತಕ್ಕ ವಾಹನ ತೆರಿಗೆ ಮತ್ತು ನ್ಯಾಯಾಂಗದ ಖಾತೆಯ ಬಗ್ಗೆ ಇಟ್ಟಿರತಕ್ಕ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿವರಗಳನ್ನು ತಮ್ಮ ಮುಂದೆ ಹೇಳಲು ಬಯಸುತ್ತೇನೆ.

ಈಗ ಬೆಂಗಳೂರು ನಗರದಲ್ಲಿ ಈ ವಾಹನಗಳ ಮೇಲೆ ತೆರಿಗೆ ಈ ರಾಜ್ಯದ ಯಾವ ಭಾಗದಲ್ಲೂ ವಸೂಲು ಆಗದಷ್ಟು ಭಾಗ ಇಲ್ಲಿ ವಸೂಲು ಆಗುತ್ತದೆ. ಸುಮಾರು ಒಂದು ಕೋಟಿ 25 ಲಕ್ಷಕ್ಕಿಂತ ಹೆಚ್ಚಿಗೆ ಬೆಂಗಳೂರು ನಗರದಲ್ಲಿ ಸಂಚಾರ ಮಾಡತಕ್ಕ ವಾಹನಗಳ ಮೇಲೆ ವಸೂಲು ಆಗುತ್ತದೆ. ಇದರ ಬಗ್ಗೆ ಹೇರಳವಾಗಿ ಕಾರ್ಪೊರೇಷನ್ನಿನವರು ಸುಮಾರು 60-70 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ವರ್ಷಂಪ್ರತಿ ಈ ರಸ್ತೆಗಳ ನಿರ್ಮಾಣ ಮತ್ತು ರಸ್ತೆಗಳ ರಿಪೇರಿಗಾಗಿ ಖರ್ಚು ಮಾಡುತ್ತಿದ್ದಾರೆ. ಹಿಂದೆ ಮಾನ್ಯ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಕಾರ್ಪೊರೇಷನ್ ಬಗ್ಗೆ ಆಗಿನ ವಾಹನಗಳನ್ನು ಮತ್ತು ಆಗ ಇರತಕ್ಕ ಮೈಲಿಗಳ ಲೆಕ್ಕ ತೆಗೆದುಕೊಂಡು 5 ಲಕ್ಷ ರೂಪಾಯಿಯನ್ನು ಕಾರ್ಪೊರೇಷನ್ ಬಗ್ಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದರು. 10 ವರ್ಷದಿಂದ ಎಷ್ಟು ಪ್ರಗತಿ ಸಾಧಿಸಿದ್ದೇವೆ ಎನ್ನುವುದನ್ನು ಅನೇಕ ಸಂದರ್ಭಗಳಲ್ಲಿ ಕೇಳಿದ್ದೇವೆ. ಈಗ 200 ಮೈಲಿ ತನಕ ಕಾರ್ಪೊರೇಷನ್ ವಿಸ್ತಾರವಾಗಿದೆ. 1957ರಲ್ಲಿ ಇದ್ದ ವಾಹನಗಳ ಸಂಖ್ಯೆಗಿಂತ ಈಗ ಅದರ 8ರಷ್ಟು 10ರಷ್ಟು ಸಂಖ್ಯೆ ಜಾಸ್ತಿಯಾಗಿದೆ. ಕಾರ್ಪೊರೇಷನ್ನಿಗೆ ಕೊಡತಕ್ಕ ದತ್ತ ಹಿಂದೆ ಇದ್ದ 5 ಲಕ್ಷ ರೂಪಾಯಿಯನ್ನು ಮಾತ್ರ ಸರ್ಕಾರ ಕೊಡುತ್ತಿದ್ದಾರೆ. ಅನೇಕ ಸಾರಿ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲೂ ಕಾರ್ಪೊರೇಷನ್ ನಿಯೋಗ ಹೋಗಿ ಹೇಳಿದರೂ ಕೂಡ ನಗರದ ಬಗ್ಗೆ ಆಸಕ್ತಿ ವಹಿಸಿಲ್ಲ. ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡಿದ್ದಾರೆ. ಈಗ ಕಾರ್ಪೊರೇಷನ್ ಸರ್ಕಾರದ ಸಂಸ್ಥೆ ಆಗಿದ್ದರೂ, ಕಾರ್ಪೊರೇಷನ್‌ನ್ನು ನಿರ್ಲಕ್ಷಿಸಿ ಮಾಡಿರತಕ್ಕದ್ದು ಬಹಳ ಶೋಚನೀಯ ವಿಚಾರ. ಮುಖ್ಯ ಮಂತ್ರಿಗಳು ಹೇಳತಕ್ಕ ಮಾತುಗಳ ಪ್ರಕಾರ ನಿಜವಾಗಿ ನಡೆಸುತ್ತಾರೆ ಎಂದು ಆದ ಪಕ್ಷದಲ್ಲಿ ಅವರು ಹೇಳಿಕೆ ಕೊಟ್ಟಿರುವ ಪ್ರಕಾರ ಆದಷ್ಟು ಜಾಗ್ರತೆ ಕಾರ್ಪೊರೇಷನ್ನಿಗೆ ನ್ಯಾಯವಾಗಿ ಏನು ದೊರಕಬೇಕೋ ಅದನ್ನು ದೊರಕಿಸಿಕೊಡುತ್ತಾರೆ ಎಂದು ನಂಬುತ್ತೇನೆ. ಈ ವರ್ಷವೇ ಕಾರ್ಪೊರೇಷನ್ನಿಗೆ ಸಲ್ಲಬೇಕಾದ್ದುದನ್ನು ಒದಗಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ಬೆಂಗಳೂರು ಟ್ರಾನ್ಸ್‌ಪೋರ್ಟ್ ಬಗ್ಗೆ ಕೆಲವು ವಿಚಾರಗಳನ್ನು ನಾಗರೀಕರು ನ್ಯೂಸ್ ಪೇಪರ್‌ನಲ್ಲಿ ಅನೇಕ ಸಾರಿ ತಿಳಿಸಿದ್ದಾರೆ. ಬೆಂಗಳೂರು ನಗರದ ಬಸ್ಸುಗಳ ಸಂಚಾರ ಕಾಲಕ್ಕೆ ಸರಿಯಾಗಿ ಓಡುವುದಿಲ್ಲ. ಬಂದರೆ ಎಲ್ಲಾ ಒಟ್ಟಿಗೆ ಬರುತ್ತವೆ. ಬರದಿದ್ದರೆ ಗಂಟೆಗಟ್ಟಲೆ ಬರುವುದಿಲ್ಲ. ಬಸ್ಸುಗಳು ಯದ್ವಾ ತದ್ವಾ ಇವೆ. ಅನೇಕ ಸಾರಿ ನಾಗರೀಕರು ಹೇಳಿಕೊಂಡಿದ್ದಾರೆ, ಈ ಸಂದರ್ಭದಲ್ಲಿ peak hour services ಹೆಚ್ಚಿಗೆ ನಡೆಯುತ್ತಾ ಇಲ್ಲ. ಕಛೇರಿಗೆ ಹೋಗಬೇಕಾದ ಜನಗಳು ಮತ್ತು ಸಾಯಂಕಾಲದ ವೇಳೆ ಬರುವಾಗ ಕಷ್ಟಪಟ್ಟು ತೊಂದರೆ ಪಡುತ್ತಾ ಇದ್ದಾರೆ. ಮಳೆಗಾಲದಲ್ಲಿ ಪಡಬಾರದ ಕಷ್ಟ ಪಡುತ್ತಿದ್ದಾರೆ. ಇದರ ಬಗ್ಗೆ ರೋಡ್ ಟ್ರಾನ್ಸ್‌ಪೋರ್ಟ್ ಸಾಕಾದಷ್ಟು ಆಸಕ್ತಿ ವಹಿಸುತ್ತಾ ಇಲ್ಲ. B. T. S. ಬಸ್ ಲಾಸ್‌ನಲ್ಲಿ ವರ್ಕ್ ಮಾಡುತ್ತಾ ಇದೆ ಎಂದು ಹೇಳುತ್ತಿದ್ದೀರಿ. ಖಾಸಗೀಯವರು ನಡೆಸುತ್ತಾ ಇದ್ದಾಗ ಬೇಕಾದಷ್ಟು ಲಾಭ ಬರುತ್ತಿತ್ತು. ಈಗ ಲಾಭ ಬರುತ್ತಾ ಇಲ್ಲ ಎಂದರೆ ಆಡಳಿತ ಅಷ್ಟು ವ್ಯವಸ್ಥಿತವಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು, ಇದು ಶೋಚನೀಯವಾಗಿ ಹೇಳಬೇಕಾಗಿದೆ. ಬಿ.ಟಿ.ಎಸ್. ನಲ್ಲಿ ಆಗಲಿ, ಬೇರೆ ಸಂದರ್ಭದಲ್ಲಿ ಆಗಲಿ ಆಗತಕ್ಕ ನಷ್ಟ ಏತರಿಂದ ಎಂದರೆ ಕಂಡಕ್ಟರ್ಸ್, ಡ್ರೈವರ್ಸ್ ಸೇರಿಕೊಂಡು ಟಿಕೇಟು ಸರಿಯಾದ ರೀತಿ ಕೊಡದೆ ಇಷ್ಟು ಮೋಸ ಮಾಡುತ್ತಿದ್ದಾರೆ. ಸಾಕಾದಷ್ಟು ಮಾಹಿತಿ ಕೊಟ್ಟರೂ ಶ್ರದ್ಧೆ ವಹಿಸುತ್ತಾ ಇಲ್ಲ. ಬಿ.ಟಿ.ಎಸ್. ಕಂಪನಿ ನಡೆಯುತ್ತಾ ಇದ್ದ ಕಾಲದಲ್ಲಿ ಜನಗಳಿಗೆ ಒಂದು ತೃಪ್ತಿ ಇತ್ತು ಅದು ಈಗ ಬಹಳ ಕಡಿಮೆ ಆಗಿದೆ. ಎಲ್ಲಾ ಯದ್ವಾ ತದ್ವಾ ಆಗಿದೆ.

ಬಿ. ಟಿ. ಎಸ್. ತೆಗೆದುಕೊಂಡ ಕಾಲದಲ್ಲಿ ಷೇರ್ ಹೋಲ್ಡರ್ಸ್ ಕಂಪನಿಗಳು ಏನು ತೀರ್ಮಾನ ಮಾಡಿದರೋ ಅದು ಬಹಳ ಕಡಿಮೆ ಎಂದು ಅನೇಕರು ಈಗಾಗಲೇ ತಮ್ಮ ಕೇಳಿಕೆಯನ್ನು ಒಪ್ಪಿಸಿದ್ದಾರೆ. ಈ ಬಗ್ಗೆ ಅವರಿಗೆ ಷೇರಿಗೆ ಬರಬೇಕಾದ ಮೊತ್ತ ನ್ಯಾಯವಾಗಿ ಬರದೇ ಅವರು ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ಅವರು ಅನೇಕ ಸಾರಿ ಒತ್ತಾಯ ಮಾಡಿರುವ ಕೇಳಿಕೆ ಬಗ್ಗೆ, ಸರಿಗೆ ಮಂತ್ರಿಗಳು ತಕ್ಷಣ ತೆಗೆದುಕೊಂಡು ನ್ಯಾಯವಾಗಿ ಏನು ಸಲ್ಲಬೇಕಾಗಿದೆಯೋ ಅದನ್ನು ಸಲ್ಲಿಸುತ್ತಾರೆಂದು ನಂಬಿದ್ದೇನೆ. ಇದನ್ನು ಮಾನವೀಯತೆಯ ದೃಷ್ಟಿಯಿಂದ ಜಾಗ್ರತೆ ತೀರ್ಮಾನ ಮಾಡುತ್ತಾರೆಂದು ನಂಬಿದ್ದೇನೆ. ಬಿ. ಟಿ. ಎಸ್. ದೆಸೆಯಿಂದ ಆಗುವ ಆಕ್ಸಿಡೆಂಟ್‌ಗಳಿಂದ ಅನೇಕ ಮನೆಗಳಿಗೆ, ಕಾಂಪೌಂಡ್‌ಗೆ ಹೊಡೆದಿದೆ. ಮಕ್ಕಳು ಮತ್ತೆ ವೃದ್ಧರ ಮೇಲೆ ಬಿಡಲ್ಪಟ್ಟಿದೆ ಎಂಬ ವರದಿಗಳು ಬರುತ್ತಿವೆ. ಇದರ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಹೇಳಿದ ಹಾಗೆ ಇದರ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಇದರ ಬಗ್ಗೆ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಇದರ ಅನಾಹುತ ದಿನೇ ದಿನೇ ಹೆಚ್ಚಾಗಿ ಜನಗಳು ಬಹಳ ತೊಂದರೆ ಪಡುತ್ತಾರೆ ಎಂದು ಹೇಳಬಯಸುತ್ತೇನೆ.

ಆಮೇಲೆ ಕೋರ್ಟ್‌ಗಳ ಬಗ್ಗೆ ಹೇಳಬೇಕಾದರೆ ಸಾಮಾನ್ಯವಾಗಿ ಕೋರ್ಟ್‌ಗೆ ಕೇಸುಗಳು ಹಾಕಿದರೆ ಆ ಕೋರ್ಟಿನಿಂದ ಈ ಕೋರ್ಟಿಗೆ ಈ ಕೋರ್ಟಿನಿಂದ ಆ ಕೋರ್ಟಿಗೆ ಕೇಸುಗಳು

(ಶ್ರೀ ಟಿ. ಆರ್. ಶಾಮಣ್ಣ)

ಬದಲಾವಣೆ ಆಗಿ ಕಕ್ಷಿಗಾರರು ತೊಂದರೆ ಪಡುತ್ತಿದ್ದಾರೆ. ಕೇಸುಗಳು ಬೇಗ ತೀರ್ಮಾನ ಆಗುವುದಕ್ಕೆ ಏನು ಬೇಕೋ ಅದನ್ನು ಮಾಡಿದರೆ ಜನಗಳಿಗೆ ಸೌಕರ್ಯ ಆಗುತ್ತದೆ. ಕೋರ್ಟುಗಳ ವ್ಯವಸ್ಥೆ ಒಂದೇ ಕಡೆ ಇದ್ದರೆ ಬಹಳ ಅನುಕೂಲವಾಗುತ್ತದೆ. ಆ ಕೋರ್ಟಿನಿಂದ ಈ ಕೋರ್ಟಿಗೆ ಓಡಾಡುವ ಪರಿಸ್ಥಿತಿ ತಪ್ಪುತ್ತದೆ. ಕೋರ್ಟುಗಳನ್ನು ಒಂದೇ ಕಡೆ ಏರ್ಪಾಡು ಮಾಡಿ ಇದರ ಬಗ್ಗೆ ಲೈಬ್ರರಿ ಆಗಲಿ, ಫರ್ನಿಚರ್ ಆಗಲಿ ಮತ್ತು ನೌಕರರಿಗೆ ಬೇಕಾದಂಥ ಸೌಕರ್ಯಗಳು ಇವುಗಳನ್ನು ಆದಷ್ಟು ತೀವ್ರವಾಗಿ ಒದಗಿಸುವ ಆಸಕ್ತಿ ವಹಿಸಬೇಕು. ಅರ್ಥಸಚಿವರು ಹೀಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದರು. ಆ ಭರವಸೆ ಕಾರ್ಯಗತ ಬೇಗ ಆಗುತ್ತದೆ ಎಂದು ನಂಬಿದ್ದೇನೆ. ಈ ಮಂತ್ರಿಮಂಡಲದಲ್ಲಿ ನೌಕರರಾಗಿರುವವರು, ಲಾಯರ್ ಆಗಿರುವವರು ತಾವು ಆಸಕ್ತಿ ವಹಿಸದೇ ಇದ್ದರೆ ಬೇರೆ ಯಾರೂ ವಹಿಸಲು ಸಾಧ್ಯ? ಜಡ್ಜುಗಳನ್ನು ಅಪಾಯಿಂಟ್ ಮಾಡುವಾಗ ಸಾಧ್ಯವಾದಷ್ಟು ಮೆರಿಟ್ ಕನ್ಸಿಡರೇಷನ್ ತೆಗೆದುಕೊಳ್ಳಬೇಕು. ಇತರ ಕನ್ಸಿಡರೇಷನ್ ತೆಗೆದುಕೊಳ್ಳಬಾರದು. ಉಪಾಧ್ಯಾಯರನ್ನು ನೇಮಿಸಿಕೊಳ್ಳುವ ವಿಚಾರದಲ್ಲಿ ಆಗಲಿ ಡಾಕ್ಟರ್ ಆಗಿ ನೇಮಿಸಿಕೊಳ್ಳುವ ವಿಚಾರದಲ್ಲಿ ಆಗಲಿ, ಜಡ್ಜುಗಳನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಆಗಲಿ ಮೆರಿಟ್ ಒಂದೇ ಕನ್ಸಿಡರೇಷನ್ ಇಟ್ಟುಕೊಳ್ಳಬೇಕಾಗಿದೆ. ಬೇರೆ ವಿಧವಾದ ಕನ್ಸಿಡರೇಷನ್ ತೆಗೆದುಕೊಳ್ಳಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾಧ್ಯವಾದಷ್ಟು ಕೋರ್ಟುಗಳ ಬಗ್ಗೆ ಗಮನ ಕೊಡಬೇಕು. ಕಾರ್ಪೊರೇಷನ್‌ಗೆ ಸಲ್ಲಬೇಕಾದ ಮೋಟಾರ್ ವೆಹಿಕಲ್ ಟ್ಯಾಕ್ಸ್ ಬಗ್ಗೆ ಬರಬೇಕಾದ ದತ್ತ ಏನು ಇದೆಯೋ ಅದನ್ನು ಸರಿಯಾದ ರೀತಿಯಲ್ಲಿ ಕೊಡಬೇಕು; ಮತ್ತು ಬಿ.ಟಿ.ಎಸ್. ಜನಗಳು ಹೇಳುತ್ತಾ ಇರತಕ್ಕ ಟೈಂ ಬಗ್ಗೆ ಪೀಕ್ ಅವರ್ಸ್ ಸರ್ವಿಸ್ ಸೌಕರ್ಯ ಇವುಗಳಿಗೆ ಗಮನ ಕೊಟ್ಟು ಸಾಧ್ಯವಾದಷ್ಟು ತೀವ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ಹೇಳಿ ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—There is possibly time for one Member to Speek if I am to give ten minutes. But I find there are eight cut motions by Sri Siddiah Kasimath. I believe his Party has not received adequate...

ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ, ನನಗೆ ಸಾಕಷ್ಟು ಕಾಲಾವಕಾಶ ಕೊಡದೇ ಇದ್ದರೆ ನಾನು ಮಾತನಾಡುವುದೇ ಇಲ್ಲ. ನೀವು ಅವರಿಗೆ ಬೇರೆ ಕೊಟ್ಟರೆ ಹೇಗೆ ?

Mr. SPEAKER.—Am I to receive instructions from this hon. member ? He has so much experience. I do what I think proper. Am I to plead his cause with his Whip ?

Sri SIDDIAH KASHIMATH.—I belong to Swatantra Party. ನೀವು ನನಗೆ ಟೈಂ ಕೊಡದೇ ಇದ್ದರೆ ನಾನು ಮಾತನಾಡುವುದಿಲ್ಲ.

Mr. SPEAKER —Then he may write to me that he is not under the Whip of the Opposition Party. I will see to it ; and still he finds fault with me.

ಶ್ರೀ ಸಿದ್ದಯ್ಯ ಕಾಶೀಮಠ.—ನಮ್ಮದು ಸ್ವತಂತ್ರ ಪಾರ್ಟಿ.

Mr. SPEAKER.—If he is not under the whip of the Opposition Party, then he must write to me to say that he is no longer bound by the Whip. Am I to take it that Sri Hutchmasthi Gowda is no longer the Whip under whom this member is functioning ?

Sri SIDDAIAH KASHIMATH.—I am responsible only for Swatantra Party here.

Mr. SPEAKER.—Then I will take note of that and the other Members of the Opposition Party will be bound by that.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಇಲ್ಲಿ ಇರತಕ್ಕಂಥ ಎಲ್ಲಾ ಪಕ್ಷದವರೂ ಸೇರಿ ವಿರೋಧ ಪಕ್ಷದ ಸಂಯುಕ್ತ ಶಾಸಕ ದಳದ ವಿಪ್ಪನ್ನು ಆರಿಸಿದ್ದೇವೆ, ಲೀಡರ್‌ಅನ್ನು ಆರಿಸಿದ್ದೇವೆ.

Mr. SPEAKER —This member does not want to reconcile with him and he is trying to dictate to me.

ಶ್ರೀ ಎಸ್. ಗೋಪಾಲ ಗೌಡ.—ವಿರೋಧ ಪಕ್ಷದಲ್ಲಿ ಸ್ವತಂತ್ರ ಪಕ್ಷವು ಇದೆ. ಕೆಲವು ಇಂಡಿಪೆಂಡೆಂಟ್ ಎನ್ನತಕ್ಕಂಥ ಮೆಂಬರ್ಸ್ ಸಹ ಇದ್ದಾರೆ.

Mr. SPEAKER.—Here is a Member and he does not wish to be under the Whip. Everybody seems to be thinking that he is the master in the House. If he does not want to utilise the time given to him and I speak, I will call upon the Minister. He may kindly not think that he is speaking for my edification.

Sri S. SIVAPPA (Sravanabelgola).—Sir, I want to make it clear that there is one United Party here and if he feels that there is Swatantra Party, I will take care of him.

Mr. SPEAKER.—Dose he know the reflection he was casting on me! It only shows that he has no control on his Party. If he cannot control his party, let him not come to me with his grievances.

Sri S. SIVAPPA.—Every one cannot be the spokesman of the Party.

Mr. SPEAKER.—Mr. Kasimath Siddiah speaks like that and every Member of the Opposition sits quiet. What am I to understand ?

Sri H. SIDDAVEERAPPA.—We thought it would be discourteous to speak when the Chair was making observations. We do not know what prompted Mr. Siddiah to say like this. He claims to speak on behalf of the Swatantra Party. This is a matter that can be examined later on. The only point is, as you have been seeing all these days, for so many days things were moving smoothly and whatever list was given by the Whip on behalf of the United Opposition Party, everybody has accepted. If the Hon'ble Member Sri Siddiah says like this now, just as a sparrow cannot make a summer. There is only one dissentient voice and it does not mean that there is no United Oppostion Party here.

Mr. SPEAKER.—Then you throw out that sparrow. I will deal with it separately. But you keep that sparrow with you and allow it to peck at me every now and then. By your silence, it only means that what he says is right.

ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಇರತಕ್ಕಂಥ ಇಲಾಖೆಗಳಲ್ಲಿ ಕಡಿಮೆ ವೆಚ್ಚದಿಂದ ಹೆಚ್ಚಿನ ಆದಾಯ ತರತಕ್ಕಂಥ ವಾಹನ ತೆರಿಗೆ ಇಲಾಖೆ ಬೃಹದಾಕಾರವಾಗಿ ಬೆಳೆಯುತ್ತಾ ಬಂದಿದೆ. ಇಂದು ದೇಶದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿ ವಾಹನ ತೆರಿಗೆಯಿಂದ ಆದಾಯ ಹೆಚ್ಚಾಗಿ ಬರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ನನಗೆ ಈ ರೀತಿ ಅನಿಸುತ್ತದೆ. ವಾಹನಗಳ ಮೇಲೆ ಟ್ಯಾಕ್ಸ್ ಹಾಕಿದ ನಂತರ ವಾಹನಗಳಿಗೆ ಬೇಕಾಗುವಂಥ ಟೈರ್ಸ್ ಸ್ಪೇರ್ ಪಾರ್ಟ್ಸ್ ಇವುಗಳನ್ನು ಇಂಥ ಕಠಿಣ ಪರಿಸ್ಥಿತಿಯಲ್ಲಿ ಸರಕಾರದವರು ಒದಗಿಸುವ ವ್ಯವಸ್ಥೆ ಮಾಡಿಲ್ಲ. ಇವುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದರೆ ವಾಹನಗಳ ಒಡೆಯರಿಗೆ ಸಹಾಯವಾಗುತ್ತದೆಂದು ಹೇಳುತ್ತೇನೆ. ಟ್ರಕ್ ತೂಕದ ಮೇಲೆ ತೆರಿಗೆ ಹಾಕಲಾಗಿದೆ. ಇದನ್ನು ಯೂನಿಫಾರ್ಮ್ ಆಗಿ ತೆರಿಗೆ ವಿಧಿಸಿಲ್ಲ. ಯೂನಿಫಾರ್ಮ್ ಆಗಿ ತೆರಿಗೆ ವಿಧಿಸುವುದಕ್ಕೆ ಪ್ರಯತ್ನ ಮಾಡಬೇಕು. ಬೇರೆ ರಾಜ್ಯಗಳಿಂದ ಬರತಕ್ಕಂಥ ಟ್ರಕ್ ಹಾಗೂ ವಾಹನಗಳಿಗೆ ಪರ್ಮಿಟ್ ಸಿಕ್ಕುವಾಗ ತೊಂದರೆ

(ಶ್ರೀ ಸಿದ್ದಯ್ಯ ಕಾಶೀಮಠ)

ಯಾಗುವುದು ನಮ್ಮ ಕಣ್ಣು ಮುಂದೆ ಇದೆ. ಅಂಥ ಟ್ರಕ್ಕುಗಳಿಗೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿ ಕೊಟ್ಟು ಹೆಚ್ಚು ಆದಾಯ ಮಾಡಿಕೊಳ್ಳಲು ಅವಕಾಶವಿದೆ. ವೇಯಿಂಗ್ ಬ್ರಿಜ್ ಮೂಲಕ ಎಂಟು ಲಕ್ಷ ರೂಪಾಯಿ ಆದಾಯ ಬರಬಹುದು ಎಂದು ಬಜೆಟ್ಟಿನಲ್ಲಿ ಇದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ವೇಯಿಂಗ್ ಬ್ರಿಜಸ್ ಇಲ್ಲ. ಪ್ರೈವೇಟ್ ವೇಯಿಂಗ ಬ್ರಿಜ್ ಇವೆ. ಈ ಬಾಬಿಗೆ ಹೆಚ್ಚಿನ ಆದ್ಯತೆ ಕೊಡುತ್ತಾ ಇಲ್ಲ. ಸರಕಾರಕ್ಕೆ ಆದಾಯ ಹೆಚ್ಚು ಬರುವಾಗ ವೇಯಿಂಗ ಬ್ರಿಜ್ ಆದಷ್ಟು ಹೆಚ್ಚು ಹಾಕಬೇಕು ಮತ್ತು ಕಡಿಮೆ ದರದಲ್ಲಿ ವೇ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ವಾಹನಗಳಿಗೆ ಪೂರೈಸಬೇಕಾದ ಡೀಜಿಲ್ ಆಯಿಲ್, ಪೆಟ್ರೋಲ್ ಧಾರಣೆ ಮಿತಿ ಮೀರಿ ಹೆಚ್ಚಾಗಿದೆ. ಆದುದರಿಂದ ವಾಹನಗಳ ಮಾಲೀಕರ ಸಹಾನುಭೂತಿಗಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆರ್.ಟಿ.ಓ. ಆಫೀಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಬೆಂಗಳೂರಿನಲ್ಲಿ ಇರತಕ್ಕ ಆರ್.ಟಿ.ಓ. ಆಫೀಸ್ ನಾನು ನೋಡಿದ್ದೇನೆ. ಸಾವಿರಗಟ್ಟಲೆ ವಾಹನಗಳು ಅವರ ಆಫೀಸ್ ಮುಂದೆ ಇರುತ್ತವೆ. ವಾಹನ ಪರ್ಮಿಟ್ಟಿಗಾಗಿ ಚಲನ್ ಕೈಯಲ್ಲಿ ಹಿಡಿದುಕೊಂಡು ಹಣ ತುಂಬುವುದಕ್ಕೆ ನಿಂತಿರತಕ್ಕ ಕ್ಯೂ ನೋಡಿದಾಗ ಭಯವಾಗುತ್ತದೆ. ಇಷ್ಟು ದುಡ್ಡು ಇಟ್ಟುಕೊಂಡು ನಿಂತಿರುವಾಗ ಏನಾಗುತ್ತದೆಯೋ ಎಂದು ಭಯ ಬರುತ್ತದೆ. ಆರ್.ಟಿ.ಓ. ಮೂಲಕ ಆದಾಯ ಹೆಚ್ಚಿದ್ದರೂ ಕೂಡ ಈ ಆಫೀಸಿಗೆ ಅವರದು ಒಂದು ಸ್ವಂತ ಕಟ್ಟಡ ಕಟ್ಟಿಸಿಲ್ಲ. ಬಹು ಮುಖ್ಯವಾದುದು ಅಂದರೆ ಯಾವುದೋ ಒಂದು ಸಾಧಾರಣ ಮನೆಯಲ್ಲಿ ಇಂಥ ಆಫೀಸು ಇರುವುದರಿಂದ ಸಾಕಷ್ಟು ಹಣ ಇಟ್ಟು ಕೊಂಡು ಅಲ್ಲಿಗೆ ಹೋಗಿ ಸುರಕ್ಷಿತವಾಗಿ ತಿರುಗಿ ಬರುವುದು ಕಷ್ಟವಾಗಿದೆ. ಈ ಆಫೀಸಿಗೆ ಒಂದು ಹೊಸ ಕಟ್ಟಡ ಕಟ್ಟಿಸಿಕೊಡಬೇಕು. ಹಾಗೂ ಈ ಕಛೇರಿಯಲ್ಲಿ ನಾಲ್ಕು ಭಾಗ ಮಾಡಬೇಕು. ಬೇರೆ ಬೇರೆ ಕಡೆಯಲ್ಲಿ ಆರ್. ಟಿ. ಓ. ಆಫೀಸ್ ತೆಗೆದು ಅದರ ಮುಖಾಂತರ ಕೆಲಸ ನಡೆಸಬೇಕು. ಹೆಚ್ಚು ಸಂಖ್ಯೆಯಲ್ಲಿ ವಾಹನಗಳು ಇರುವುದರಿಂದ ಹಣ ತುಂಬುವುದಕ್ಕೆ ಬೇರೆ ಬೇರೆ ಕಡೆ ಆಫೀಸು ಇರತಕ್ಕ ಏರ್ಪಾಡು ಮಾಡಿದರೆ ಅದು ಸರಿಹೋಗುತ್ತದೆಂದು ಹೇಳುತ್ತೇನೆ. ಇನ್ನು ಆರ್. ಟಿ. ಓ. ಆಫೀಸ್ ಬಗ್ಗೆ ಹೆಚ್ಚಾಗಿ ಹೇಳಬೇಕಾದುದು ಅಂದರೆ, ಬೇರೆ ರಾಜ್ಯಗಳಿಂದ ಬರತಕ್ಕಂಥ ವಾಹನಗಳ ಮೇಲೆ ಹತೋಟಿ ಇಡುವುದು ಮುಖ್ಯವಾಗಿದೆ. ಈ ವಿಚಾರದಲ್ಲಿ ಜಿಲ್ಲಾ ಮಟ್ಟದಲ್ಲಿ ಆಗಲಿ ಕೇಂದ್ರ ಮಟ್ಟದಲ್ಲಿಯಾಗಲಿ ಆರ್. ಟಿ. ಓ. ಆಫೀಸಿಗೆ ಸರಿಯಾದ ರೀತಿಯಲ್ಲಿ ಅನುಕೂಲತೆ ಮಾಡದೇ ಇರತಕ್ಕಂಥಾದ್ದು ಕಂಡುಬಂದಿದೆ. ಪೋಲೀಸರ ಸಹಾಯದಿಂದ ವಾಹನಗಳನ್ನು ಹಿಡಿಯುವ ಕೆಲಸ ಮಾಡಲಾಗುತ್ತದೆ. ಆದರೆ ರಾತ್ರಿ ವೇಳೆಯಲ್ಲಿ ಬರತಕ್ಕಂಥ ವಾಹನಗಳನ್ನು ಮಹಾರಾಷ್ಟ್ರದಿಂದ ಆಂಧ್ರದಿಂದ ಬರತಕ್ಕಂಥ ಗಾಡಿಗಳನ್ನು ಹಿಡಿಯಲು ಹೋದಾಗ್ಗೆ ಹೊಡೆತ ತಿನ್ನತಕ್ಕಂಥ ಸಂದರ್ಭ ಬಂದಿದೆ. ಆದುದರಿಂದ ಅವರಿಗೆ ಅನುಕೂಲತೆ ಮಾಡಿಕೊಡಬೇಕು ; ಮತ್ತು ಅವರು ತಮ್ಮ ಪ್ರಾಣ ರಕ್ಷಣೆಮಾಡಿಕೊಳ್ಳುವುದಕ್ಕೆ ಅವರಿಗೆ ರಿವಾಲ್ವರ್ ಕೊಡುವ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

5-30 P.M.

ನ್ಯಾಯಾಂಗ ವಿಷಯವಾಗಿ ಹೇಳಬೇಕಾದರೆ ಈಗಾಗಲೇ ಸಾಕಷ್ಟು ಮುನ್‌ಸೀಫ್ ಕೋರ್ಟು ಗಳನ್ನು ನಿರ್ಮಾಣ ಮಾಡಿದ್ದಾರೆ. ಭೂ ಸುಧಾರಣೆ ಕಾಯಿದೆ ಬಂದ ನಂತರ ಸಾಕಷ್ಟು ಅರ್ಜಿಗಳು ಭೂ ಮಾಲೀಕರಿಂದ ಮತ್ತು ಗೇಣಿದಾರರಿಂದ ಮುನ್‌ಸೀಫ್ ಕೋರ್ಟಿಗೆ ಬಂದಿವೆ. ಅವುಗಳನ್ನು ವಿಚಾರಣೆ ಮಾಡಲಿಕ್ಕೆ ಒಂದು ಟ್ರಿಬ್ಯೂನಲ್ ಮಾಡದೆ ಮುನ್‌ಸೀಫ್ ಕೋರ್ಟಿಗೆ ಅಧಿಕಾರ ಕೊಟ್ಟಿರತಕ್ಕ ಪ್ರಸಂಗ ಬಂದಿದೆ. ಭೂ ಸುಧಾರಣೆ ಕಾಯಿದೆಗೆ ರೂಲ್ಸ್ ಮಾಡದೆ ಇರುವುದರಿಂದ ಆ ಸಂಬಂಧದಲ್ಲಿ ಬಂದಿರುವ ಅರ್ಜಿಗಳನ್ನು ವಿಚಾರಣೆ ಮಾಡದೆ ಅದರಿಂದ ಹಳ್ಳಿಗಳಲ್ಲಿರುವ ಜನರು ತೊಂದರೆಗೆ ಒಳಗಾ ಗಿರುವುದು ಕಂಡುಬರುತ್ತದೆ. ತೀವ್ರವಾಗಿ ಭೂಸುಧಾರಣೆ ಕಾಯಿದೆಗೆ ರೂಲ್ಸ್ ಮಾಡಿ ಮುನ್‌ಸೀಫರಿಗೆ ಆದೇಶ ಕೊಟ್ಟು ಈಗಿರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಮುನ್‌ಸೀಫ್ ಕೋರ್ಟಿನಲ್ಲಿ ಲಾ ಪುಸ್ತಕಗಳ ಅವಶ್ಯಕತೆ ಬಹಳವಿದೆ. ಹೊಸದಾಗಿ ತೆರೆದ ಕೋರ್ಟುಗಳಲ್ಲಂತೂ ಇರಲಿಕ್ಕೆ ಮನೆ ಇಲ್ಲ ಮತ್ತು ಅಲ್ಲಿನ ಸಿಬ್ಬಂದಿಗೆ ಇರಲಿಕ್ಕೆ ಬಹಳ ಕಠಿಣವಾದ ಪ್ರಸಂಗ ಕಂಡುಬರುತ್ತದೆ. ನಮ್ಮ ಸ್ನೇಹಿತರು ಆಗಲೇ ಹೇಳಿದಂತ ಅಲಹಾಬಾದ್ ಲಾ ಡಿಪೋದಿಂದ ಪುಸ್ತಕಗಳನ್ನು ತರಿಸುವುದು ಸ್ಟ್ಯಾಂಡರ್ಡ್ ಅಲ್ಲ. ಬೇರೆ ಬೇರೆ ಕಡೆಯಿಂದ ಲಾ ಪುಸ್ತಕಗಳನ್ನು ತರಿಸಿ

ರೆಫರೆನ್ಸ್‌ಗೆ ಅನುಕೂಲತೆ ಮಾಡಿಕೊಡಬೇಕು. ಒಂದೆರಡು ಕೋರ್ಟಿನಲ್ಲಿ ನೋಡಿದಾಗ ಮುನ್ಸೀಫರಿಗೆ ರೆಫರೆನ್ಸ್ ಮಾಡುವುದಕ್ಕೆ ಸಾಕಷ್ಟು ಪುಸ್ತಕಗಳಿಲ್ಲದೆ ಬೇರೆ ಕೋರ್ಟಿನಿಂದ ತರಿಸಿಕೊಂಡು ಕೆಲಸ ಮಾಡತಕ್ಕ ಪರಿಸ್ಥಿತಿ ಬರುತ್ತಿದೆ. ಪುಣ್ಯವಶಾತ್ ನಮ್ಮಲ್ಲಿರುವ ನ್ಯಾಯಾಧೀಶರು ಒಳ್ಳೆಯ ರೀತಿಯಿಂದ ನಡೆಯುತ್ತಾರೆ ಎಂದು ಬೇರೆ ಕಡೆಯಲ್ಲಿ ಕೂಡ ಮಾತನಾಡತಕ್ಕದ್ದು ನಮ್ಮ ಕಣ್ಣ ಮುಂದೆ ಇದೆ. ಹೀಗಿರುವಾಗ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಟ್ಟು ತನ್ಮುಖೇನ ನ್ಯಾಯ ದೊರಕಿಸಲಿಕ್ಕೆ ಸಹಾಯ ಮಾಡಿದ್ದೇ ಆದರೆ ಒಳ್ಳೆಯ ರೀತಿಯಿಂದ ಇನ್ನೂ ಹೆಚ್ಚಿನ ರೀತಿಯಿಂದ ನ್ಯಾಯದಾನ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಲಕ್ಷ್ಮೇಶ್ವರದಲ್ಲಿ ಒಂದು ಕೋರ್ಟ್ ಸ್ಥಾಪನೆ ಮಾಡಿದ್ದಾರೆ. ಸಾಕಷ್ಟು ರೀತಿಯಲ್ಲಿ ಕಟ್ಟಡಕ್ಕೆ ಬೇರೆ ರೀತಿಯ ಏರ್ಪಾಡು ಮಾಡುತ್ತಿದ್ದಾರೆ. ಆದರೆ ಲೈಬ್ರರಿಗೆ ಬೇಕಾವಷ್ಟು ಪುಸ್ತಕಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಎಂ.ಎಸ್.ಆರ್.ಟಿ.ಸಿ. ಬಗ್ಗೆ ಹೆಚ್ಚು ಹೇಳದೆ ಅಲ್ಲಿರುವ ಬಸ್ಸುಗಳ ಬಗ್ಗೆ ಹೇಳುತ್ತೇನೆ. ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ಡಿವಿಜನ್ನುಗಳಲ್ಲಿ ಹೆಚ್ಚಿನ ರೀತಿಯಲ್ಲಿ ಲಾಭ ಬರುತ್ತಿದೆ. ಆದರೆ ಅಲ್ಲಿ ಒದಗಿಸಿರುವ ಬಸ್ಸುಗಳ ಸ್ಥಿತಿ ಸಮರ್ಪಕವಾಗಿಲ್ಲ. ನಾನು ಗದಗ ಡಿಪೋದಲ್ಲಿರುವ ಬಸ್ಸುಗಳ ವಿಚಾರ ಹೇಳುತ್ತೇನೆ. ಮಳೆಗಾಲದಲ್ಲಿ ಬಸ್ಸುಗಳಲ್ಲಿ ಕುಳಿತರೆ ಮಳೆ ನೀರು ಒಳಗೆ ಬರತಕ್ಕ ಪರಿಸ್ಥಿತಿ ಇದೆ. ಬೇಸಿಗೆ ಕಾಲದಲ್ಲಿ ರಸ್ತೆಯಲ್ಲಿ ಹೋಗಬೇಕಾದರೆ ರಸ್ತೆಯಲ್ಲಿರುವ ಧೂಳೆಲ್ಲ ಒಳಕ್ಕೆ ಬರತಕ್ಕ ಪರಿಸ್ಥಿತಿ ಇದೆ. ಇಂಥ ಕೆಟ್ಟ ಬಸ್ಸುಗಳನ್ನು ಹಾಕತಕ್ಕ ಪರಿಪಾಠವಿದೆ. ಎಲ್ಲಿ ಹೆಚ್ಚು ಆದಾಯ ಬರುತ್ತದೆಯೋ ಅಂಥಲ್ಲಿ ಒಳ್ಳೆಯ ಬಸ್ ಹಾಕದೆ ಇಂಥವನ್ನು ಹಾಕಿದ್ದಾರೆ. ಮಲಗಲಿಕ್ಕೆ ಸೌಕರ್ಯವಿರತಕ್ಕ ಬಸ್ಸುಗಳನ್ನು ಮಾಡಿದ್ದಾರೆ, ಸುವಿಹಾರಿ ಬಸ್ಸುಗಳನ್ನು ಮಾಡಿ ಅದರಲ್ಲಿ ಬೇಕಾದ ವ್ಯವಸ್ಥೆ ಇರುವಂತೆ ಮಾಡಿದ್ದಾರೆ. ಅದೆಲ್ಲಾ ಸರಿ. ಆದರೆ ಸಾಮಾನ್ಯ ಜನತೆ ಹೋಗಲಿಕ್ಕೆ ಬೇಕಾಗತಕ್ಕ ಬಸ್ಸುಗಳ ಸ್ಥಿತಿ ಚೆನ್ನಾಗಿರಬೇಕು ಎಂದು ಹೇಳುತ್ತೇನೆ. ರಸ್ತೆಗಳು ಒಳ್ಳೆಯವಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ರಸ್ತೆಗಳು ಚೆನ್ನಾಗಿಲ್ಲ ಎಂದು ಅಂಥ ಕೆಟ್ಟ ಬಸ್ಸುಗಳನ್ನು ಹಾಕಿ ಜನರಿಗೆ ತೊಂದರೆ ಕೊಡುವುದಕ್ಕಿಂತ ಅವುಗಳನ್ನು ತೆಗೆದುಬಿಡುವುದು ಉತ್ತಮವೆಂದು ಹೇಳುತ್ತೇನೆ. ಹಿಂದೆ ಮುಂಬೈ ಕರ್ನಾಟಕದಲ್ಲಿದ್ದ ಎಲ್ಲ ಬಸ್ಸುಗಳನ್ನೂ ರಾಷ್ಟ್ರೀಕರಣ ಮಾಡಿದ್ದಾರೆ. ಈ ಕಡೆಗೆ ಇರತಕ್ಕ ಕೆಲವು ಮಾರ್ಗಗಳಲ್ಲಿ ರಾಷ್ಟ್ರೀಕರಣ ಮಾಡಿ, ಸರ್ಕಾರದವರು ತೆಗೆದುಕೊಂಡು ಕೆಲವು ಮಾರ್ಗಗಳಲ್ಲಿ ಮಾಲೀಕರಿಗೆ ಅವಕಾಶ ಕೊಟ್ಟಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ ಎಷ್ಟು ದಿವಸದೊಳಗಾಗಿ ರಾಷ್ಟ್ರೀಕರಣ ಮಾಡಿ ಎಲ್ಲವನ್ನೂ ಎಂ.ಎಸ್.ಆರ್. ಟಿ.ಸಿ. ಬಸ್ಸುಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು ಎಂದು ಹೇಳುತ್ತೇನೆ,

ಡಿಪೋಗಳಿಗೆ ನಿಮ್ಮ ಬಸ್ಸುಗಳು ಹೋಗುತ್ತವೆ. ಅಲ್ಲಿ ಟ್ಯೂರ್ಸ್ ಹೆಚ್ಚು ಇಲ್ಲದೆ ಇರತಕ್ಕದ್ದನ್ನೂ ಅದಕ್ಕೆ ಬೇಕಾದ ಬಿಡಿ ಭಾಗಗಳು ಇಲ್ಲದೆ ಇರುವುದನ್ನೂ ನೋಡಿದ್ದೇವೆ. ಗದಗ ಡಿಪೋನಲ್ಲಿರತಕ್ಕ ವರ್ಕ್‌ಷಾಪಿನಲ್ಲಿ ಯಾವ ಸೌಕರ್ಯವೂ ಇಲ್ಲದೆ ಹೇಗೆ ಇರತಕ್ಕ ಸಾಮಾನುಗಳನ್ನು ಹಾಗೆಯೇ ಕಳಿಸತಕ್ಕ ಪರಿಸ್ಥಿತಿ ಇದೆ. ಗದಗ ಡಿಪೋಗೆ ಸೇರಿದ ಬಸ್ಸುಗಳು ಎಷ್ಟು ದಿನ ಬ್ರೇಕ್-ಡೌನ್ ಆಗಿವೆ ಎನ್ನುವುದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಯಾವುದೇ ರಸ್ತೆಯಲ್ಲಿ ಹೋದರೂ ಒಂದಲ್ಲ ಒಂದು ರೀತಿಯಿಂದ ಬಸ್ಸು ನಿಂತು ಹೋಗಿರುವುದನ್ನು ಕಾಣಬಹುದು. ಎಲ್ಲೆಲ್ಲಿ ಈ ರೀತಿಯಾಗಿದೆ ಎನ್ನುವ ವಿವರಗಳನ್ನು ತರಿಸಿಕೊಂಡು ಆ ರೀತಿ ಆಗದಂತೆ ಸರಿಯಾದ ಏರ್ಪಾಡು ಮಾಡಬೇಕು. ಸಂಚಾರಿ ವಾಹನವನ್ನು ಇಟ್ಟುಕೊಂಡು ರಸ್ತೆಯಮೇಲೆ ಎಲ್ಲಿ ಬಸ್ಸುಗಳೂ ನಿಂತು ಹೋಗುತ್ತವೆ ಅವುಗಳನ್ನು ಸರಿಪಡಿಸುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಚೆನ್ನಾಗಿಟ್ಟುಕೊಂಡು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋದರೆ ಒಳಿತಾಗುತ್ತದೆ.

ಪ್ಯಾಸೆಂಜರುಗಳಿಗೆ ಹೆಚ್ಚು ಟ್ಯಾಕ್ಸ್ ಹಾಕಿ ಅವರಿಗೆ ಅನುಕೂಲತೆಯನ್ನೂ ಮಾಡಿಕೊಡದೆ ಇದ್ದರೆ ಜನರು ಶಪಿಸುತ್ತಾರೆ. ಮಾನ್ಯ ಕೊಟ್ರಬಸಯ್ಯ ಸೋಗಿ ಅವರು ಮಾತನಾಡುತ್ತ ಕಂಡಕ್ಟರುಗಳ ವಿಷಯ ಹೇಳಿದರು. ಎಲ್ಲ ಕಂಡಕ್ಟರುಗಳೂ ಆ ರೀತಿ ಮಾಡುತ್ತಾರೆಂದೂ ಎಲ್ಲರೂ ಕದಿಯುತ್ತಾರೆಂದೂ ಹೇಳುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎನ್. ಎಸ್. ಕೊಟ್ರಬಸವಯ್ಯ ಸೋಗಿ.—ಎಲ್ಲರೂ ಮಾಡುತ್ತಾರೆಂದು ನಾನು ಹೇಳಲಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ.—ಮುಂಬೈ ಕರ್ನಾಟಕದಲ್ಲಿರುವ ಎಲ್ಲ ಡಿಪೋಗಳಲ್ಲಿ ಮತ್ತು ಎಲ್ಲ ಬಸ್ಸುಗಳಲ್ಲಿ ತಿರುಗಾಡಿ ನೋಡಿದ್ದೇನೆ. ನೂರಕ್ಕೆ 90 ರಷ್ಟು ಒಳ್ಳೆಯ ರೀತಿಯಿಂದ ಕೆಲಸ ಮಾಡತಕ್ಕ ಜನರಿದ್ದಾರೆ. ಒಂದೆರಡು ಸಂದರ್ಭಗಳಲ್ಲಿ ಆಕಸ್ಮಾತ್ ಐದು ಪೈಸೆ, ಹತ್ತು ಪೈಸೆ ವ್ಯತ್ಯಾಸವಾಗಬಹುದು.

Sri MOHAMED ALI (Minister for Transport and Tourism).—Sir, The Road Transport is a very important public enterprise. It involves the question of income on our capital return and also the question of public utility services. Hon. Members have made some very good suggestions; and have also made certain sweeping remarks which are not conducive to improve the administration.

However, a very important matter that has received the attention of the Members is the question of the total nationalisation of the routes in Mysore State. I do not think that there is any need for me to reiterate the policy of the Government towards complete nationalisation of the routes. The present position is: we have nationalised about 67 per cent of the area or about 59 per cent of the routes in the State. And we had provided about Rs. 450 lakhs during the Second Five-Year Plan for Road Transport; out of which Rs. 4,11,00,000 have been spent. During the Third Five-Year Plan, a sum of Rs. 425 lakhs was provided, and against which the actual expenditure is Rs. 637 lakhs. During the Fourth Five-Year Plan, the total allocation is in the order of Rs. 450 lakhs. The only difficulty in the way of total nationalisation is paucity of funds. If hon. Members had looked into the Budget of this year, they would have found that only a sum of Rs. 20 lakhs has been provided for Road Transport this year. With all this if a seasoned and experienced Member like Sri Siddaveerappa expects that I will do a miracle out of Rs. 20 lakhs, I can only say that I am really helpless. And in order to nationalise the entire route in the State, we would require a further amount of Rs. 17 crores. We tried our best to find funds to nationalise the entire route during the Fourth Five Year Plan. Originally, the National Development Council had suggested to provide 11·5 crores but it was reduced to 4·5 crores of rupees. Within this meagre resource, the question is, now to give a very efficient administration of road transport and also to nationalise as many routes as possible. We are trying to augment the resources of the Corporation. Of course, it is at the stage of proposal. The Corporation is thinking to approach the open market and other financing agencies for loan to meet the immediate requirement, if possible to find funds for further nationalisation.

Hon. member Sri Siddaveerappa was very particular and a bit critical in saying that a route from Chitradurga to Harihar had not been nationalised. No isolated route can be nationalised and that was the only reason why that route has not been nationalised.

Sri S. SIVAPPA.—It is only a missing link.

Sri MOHAMED ALI.—Unless we nationalise all the connecting routes in that route, it will not be beneficial to the Corporation because this over-laping will naturally result in heavy losses. Personally I am in favour of nationalising the entire area. Piece-meal nationalisation in some sector will only result in heavy losses to the Road Transport Corporation. Anyhow, there are about ten private operators in Chitradurga who have got permits to run buses for 500 miles.

Sri S. SIVAPPA.—For more than 1,000 miles how many ?

Sri MOHAMED ALI.—I do not think anybody has got.

Sri H. SIDDAVEERAPPA.—There is one; I gave you the routes also.

Sri MOHAMED ALI.—May be, I do not have that information. Whoever he may be, he is neither related to me nor any member this side. The procedure for granting road permit is very clear. Nowhere Government comes into the picture. At the district level the R.T.A. is there, and finally they can go to the court. So far as granting of road permit is concerned, no appeal comes to Government and no direction can be given by Government. All that is there in the Motor Vehicles Act and therefore there is no question of favouring anybody by granting permits.

Sri H. SIDDAVEERAPPA.—The power behind it !

Sri MOHAMED ALI.—What I say is, if there is any suspicion, nobody can eliminate it. Anynow, Sri Siddaveerappa has made some very useful suggestions. One such good suggestion he made is with regard to reveiwing the cost of operation. The cost of operation is in the order of Rs. 13 to 14 crores. The aspect of reducing the cost of operation is being carefully considered and the Corporation has appointed three Business consultants to examine the whole question.

Regarding income, I may submit, there seems to be some depletion in the income because major part of the income is taken away by the income-tax by the formation of the Corporation. However, there is progressive increase in the income of the Corporation in spite of various factors like increase in cost of fuel, increase in D.A. etc. The net income for the year 1965-66 was Rs. 25.08 lakhs whereas the net income for 1966-67 is Rs. 48·01 lakhs. The investment is in the order of Rs. 16 crores and this is apart from the 6 1/2 per cent interest which we pay to Government and after allowing depreciation. Regarding the Depot at Davangere I could not get information. I may get information and a letter has been sent to the concerned officer. I have only to say that the Corporation will never be unbusinesslike in purchasing this site. So far as compensation is concerned finally there is the court as forum to decide. If a wrong assessment is made by somebody, that will be challenged at every stage.

Sri H. SIDDAVEERAPPA.—I am saying that there is dispute with regard to ownership. Firstly there is no need and secondly there is dispute with regard to ownership. I only say, purchaser beware and not the seller.

Sri M. MOHAMED ALI.—We will look into the whole matter. The corporation will not be unbusinesslike so far as this deal is concerned.

Sri A. HUCHMASTHIGOWDA (Huliyurdurga).—I understand that the adjacent land is sold at Rs. 10,000 an acre.

Sri M. MOHAMED ALI.—If it is so, it will help the corporation. All the schemes do not come before the corporation. So far as depot and others are concerned, it is the technical opinion on which we decide where to start the depot and it is not the corporation that decides these matters.

The hon'ble member Sri A. R. Badari Narayan has referred to the compensation to be paid to the members of the Ex. B.T.S. shareholders. I do not want to go into details of this case because a representation has been made to me and the file is pending with me. It involves a legal question and that has got to be examined. Therefore, I do not want to say anything on the subject before all these legal implications are examined by the department.

Sri S. SIVAPPA.—At least you will view it with sampathy.

Sri MOHAMED ALI.—My sympathies are with everybody. One suggestion has been made by the hon'ble member Sri Veerappa Gowda that only important routes may be nationalised as it will be difficult for the M.S.R.T.C. to run on all the mofussil and village roads. It is not in the best interests of the people that the routes are completely nationalised. For instance in Bombay Karnatak and Hyderabad Karnatak area, complete nationalisation has been made. I want the hon'ble members to remember how private buses were overcrowded before the nationalisation of these routes. We have seen how half the number of passengers sat on top of the bus and half the number of passengers inside the bus. So, it is in the interest of the public that the routes are nationalised, and even roads leading to the villages because that is certainly going to provide more facilities to the people.

Some sweeping remarks were made by the hon'ble member Sri Kotrabasaiah Sogi regarding pilferage, misbehaviour of the conductors and drivers. I do not think pilferage is on such a large scale as has been described by the hon'ble member. It is true that there is pilferage to some extent and we have to take deterrent action. What is suggested now is three tier checking system. Now checking is made by our traffic staff but arrangement is made for further re-checking and counter-checking. It is tried in other States and it has yielded good results. What is more disappointing is that we are not receiving in some parts of the State the co-operation of the travelling public. In order to punish the ticketless travellers the Road Transport Corporation is contemplating to set up mobile squads. Regading the misbehaviour of the conductors and drivers it may be true that a few might have misbehaved but it is not correct to say that all have misbehaved. Wherever such things are brought to the notice of the corporation or the Government, certainly action will be taken against them.

One important question is regarding the illicit taxies. In view of the High Court decision there were some difficulties. It had decided that any private taxi owner or owner of a car can carry passengers to any place and therefore we were unable to take any action. Now the

Supreme Court has decided that private car owner cannot take passengers in his car. So, that has made the matter easy and it will be possible for us to check all such illicit taxies effectively. I would like to bring to the notice of the House that many cases have been detected and they have been prosecuted, but they have been fined only three of four or five rupees and they are paying that and it has become impossible to stop this illicit traffic of the taxies. Therefore what the Goverement is contemplating is to amend the law to enable the court to seize or forfeit the taxi or vehicle itself.

6.00 P.M.

Perhaps that may set right the matter.

Many other suggestions have been made by hon'ble Members and they will certainly be taken note of.

Before I conclude my speech, I would like to refer to the question of compensation that is being paid to the Bangalore Corporation under the Motor Vehicles Taxation Act. Whatever the Bangalore Corporation is entitled to under the law is being paid and if the Corporation demands anything over and above what has been provided under the law, that required a legislative measure and unless the law is amended nothing can be done.

Regarding the Transport Department, some wild allegations hav been made about corruption in the R.T.O's Office. Many people come and say that there is corruption, but nobody comes forward with any specific allegation and that makes very difficult for the Government to do anything in this matter. If any specific allegation is made against any official, I can assure the House that no officer will ever be spared.

SRI AZEEZ SAIT (Narasimharaja).—A *mamool* of Rs. 15 has to be paid to every Break Inspctor.

SRI MOHAMED ALI.—If specific complaints are brought to my notice by the hon'ble Member, certainly action will be taken. If people do not come forward with specific complaints and allegations nothing can be done.

SRI AZEEZ SAIT.—Without paying momools break certificate is not issued. It is for the Department to keep a vigilant watch over these things.

SRI MOHAMED ALI.—All action has been taken. It has been said that taxation on motor vehicles is very heavy. My submission is that our taxation is on a par with the adjoining States.

SRI H. SIDDAVEERAPPA.—Except Madras. In Rajasthan it is as low as Rs. 3.

SRI MOHAMED ALI.—How can you compare us with Rajasthan. We have to take into account what we are spending on the roads also comparatively.

**Sri AZEEZ SAIT.**—Taxation is so high that many vehicles are running without paying taxation.

**Sri MOHAMED ALI.**—Quite a few may be running like that but not many. In any case, it may be possible, but it has never been brought to the notice of the Government.

Regarding inter-State transport, if any specific proposal in respect of inter-State transport between Gulbarga and Osmanabad is put up before the Government, that will be duly considered.

So far as accommodation for R.T.O's Office is concerned, we have taken a new premises on lease and so that problem does not exist.

I have to thank the hon'ble Members for all the patience and courtesy they have given to me in hearing my reply and I request the House to vote the demand.

**Sri H. SIDDAVEERAPPA.**—The Chitradurga-Harihar route was included in the original scheme in the Five-Year Plan from Bangalore to Harihar. Kindly disabuse your mind of the fact that it was not there under the scheme. It was there. The only thing was that it was not taken up just at that time. Right from Bangalore up to Belgaum there should be no other bus except the red bus.

**ಶ್ರೀ ಎಸ್. ಆರ್. ಕಂಠಿ.**—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರುಗಳು ಈ ಡಿಮ್ಯಾಂಡ್ ಮೇಲೆ ಮಾತನಾಡುವ ಮುಂಚೆ ಅನೇಕ ಉಪಯುಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅತ್ಯಂತ ಋಣಿಯಾಗಿದ್ದೇನೆ. ಮಾನ್ಯ ಸಿದ್ಧವೀರಪ್ಪನವರು ನಮ್ಮ ರಾಜ್ಯದಲ್ಲಿರುವ ಕೋರ್ಟುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ, ಅಲ್ಲಿರುವವರು ನ್ಯಾಯವಾದಿಗಳಾಗಿದ್ದಾರೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ನಮ್ಮ ದೇಶದಲ್ಲಿರುವಂಥವು ನ್ಯಾಯವಾದ ಕೋರ್ಟ್‌ಗಳಾಗಿವೆ. ಚೆನ್ನಾಗಿ ಕೆಲಸ ಮಾಡುತ್ತಿವೆ. ಅಲ್ಲಿ ಕೆಲಸ ಮಾಡುವ ವಕೀಲರು ಸಹ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ವಕೀಲರು ಕೋರ್ಟುಗಳಿಗೆ ಸಾಕಷ್ಟು ಸಹಾಯ ಮಾಡುತ್ತಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಒಪ್ಪಿಕೊಳ್ಳದಿದ್ದರೆ ನಮ್ಮ ಕರ್ತವ್ಯ ಚ್ಯುತಿಯಾಗುತ್ತದೆ. ರಿಟ್ ಪಿಟಿಷನ್ ವಿಚಾರದಲ್ಲಿ ಸರ್ಕಾರದವರು ಬಹಳಮಟ್ಟಿಗೆ ಸೋತಿದ್ದಾರೆಂದು ಕೆಲವರು ಹೇಳಿದರು. ಸರ್ಕಾರದವರು ಕೆಲವು ಕಡೆ ಸೋತಿದ್ದಾರೆ. ಶ್ರೀಮಾನ್ ಕೊಠಾವಳೆಯವರು ಶೇಕಡ 25ರಷ್ಟು ಸೋತಿದ್ದೇವೆಂದು ಹೇಳಿದರು. ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ನಮ್ಮ ಸರ್ಕಾರದ ಬಗ್ಗೆ ಏನು ತೀರ್ಮಾನ ಕೊಡುತ್ತಾರೋ ಅದನ್ನು ನ್ಯಾಯತಃ ನಡೆಸುತ್ತಿದ್ದೇವೆಂದು ಹೇಳುತ್ತಿದ್ದೇನೆ. ಅವರು ತಿಳಿದುಕೊಂಡಿದ್ದಾರೆ ನಾವು ನಡೆಸುವುದಿಲ್ಲವೆಂದು, ಅದು ತಪ್ಪು ಭಾವನೆ. ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ನಮ್ಮ ಸರ್ಕಾರದ ಬಗ್ಗೆ ಕೊಟ್ಟಿರುವ ತೀರ್ಮಾನ ಏನಿದೆ ಅದರ ಪ್ರಕಾರ ನಡೆದಿದ್ದೇವೆ. ಇನ್ನು ಮೂರು ಕೇಸ್‌ಗಳು ಇವೆ. ಅವನ್ನು ಸಹ ನೋಡುತ್ತಿದ್ದೇವೆ. ಆ ಮೂರು ಕೇಸುಗಳನ್ನು ಸಮಾಡುತ್ತಿದ್ದೇವೆಂದು ಕೋರ್ಟಿನವರಿಗೆ ಹೇಳುತ್ತಿದ್ದೇವೆ.

**ಶ್ರೀ ಎಚ್. ಸಿದ್ಧವೀರಪ್ಪ.**—ಸರ್ಕಾರದ ನೌಕರರೇ ಹೆಚ್ಚಾಗಿ ಸರ್ಕಾರದ ವಿರುದ್ಧವಾಗಿ ಕೋರ್ಟಿಗೆ ಹೋಗುತ್ತಿದ್ದಾರೆ.

**ಶ್ರೀ ಎಸ್. ಆರ್. ಕಂಠಿ.**—ಮೈಸೂರು ರಾಜ್ಯದಲ್ಲಿ ಕಾಲಮಾನಪರಿಸ್ಥಿತಿ ಬದಲಾಗುತ್ತಿದೆ. ಸಂವಿಧಾನದ ಪ್ರಕಾರ ಜನರು ಕೋರ್ಟಿಗೆ ಹೋಗುತ್ತಾರೆ. ನನಗೆ ಒಂದು ಸಂತೋಷದ ಸಂಗತಿಯೆಂದರೆ, ಸರ್ಕಾರಿ ಅಧಿಕಾರಿಗಳು ತಮಗೂ ಕೋರ್ಟಿಗೆ ಹೋಗುವ ಅಧಿಕಾರವಿದೆಯೆಂದು ಹೋಗುತ್ತಿದ್ದಾರೆ. ಆ ರೀತಿಯ ಅವಕಾಶವಿಲ್ಲದಿದ್ದರೆ ಅವರು ಖಿನ್ನಮುಖರಾಗಬಹುದು. ಎಲ್ಲವನ್ನೂ ಸರ್ಕಾರ ಸಮಾಡುತ್ತದೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಎಲ್ಲಾ ಕಡೆಯೂ ಸರಿಯಾಗಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಲ್. ಶ್ರೀಕಂಠಯ್ಯ.**—ಸರ್ಕಾರದ ಮೇಲೆ ಕನ್‌ಟೆಮ್ಪ್ಟ್ ಆಫ್ ಕೋರ್ಟ್ ಆದರೆ ಹೇಗೆ?

ಶ್ರೀ ಎಸ್. ಆರ್. ಕಂಠಿ.—ಸರಕಾರ ಕಂಟೆಂಪ್ಟ್ ಆಫ್ ಕೋರ್ಟು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅನೇಕ ಕೇಸುಗಳಲ್ಲಿ ಹೈಕೋರ್ಟು ಹೇಳಿದಂತೆ ಅದನ್ನು ಇಂಪ್ಲಿಮೆಂಟು ಮಾಡುವುದಕ್ಕೆ ಆಗುವುದಿಲ್ಲ. ಹೈ ಕೋರ್ಟಿಗೆ ನಾವೂ ಹೋಗಿ ಟೈಂನ್ನು ಕೇಳುವುದಕ್ಕೆ ಬರುತ್ತದೆ. ಇದೂ ಕೂಡ ಒಂದೊಂದು ಸಲ ಆಗುತ್ತದೆ. ಇದು ಒಂದು ದುಃಖದ ಮಾತು.

ಎರಡನೇ ಮಾತು ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಇಲ್ಲಿ ಹೇಳಿದರು. ಕೆಲವು ಕಡೆ ಸರಕಾರ ಕೌಂಟರ್ ಅಫಿಡವಿಟ್ ಕೂಡ ಹಾಕುವುದಿಲ್ಲ ಎಂದು. ಅದು ಆಗಿಲ್ಲ. ಮೊದಲು ಇಲ್ಲಿ ಏನು ಸಿಸ್ಟಂ ಇತ್ತು ಅದರಂತೆ ಯಾರ ಮೇಲೆ ಜವಾಬುದಾರಿಯು ಹೊಣೆ ಹಾಕಬೇಕೆಂದು ಇತ್ತು ಎಂಬುದು ನಮಗೆ ತಿಳಿಯದೇ ಕೆಲವು ಕಡೆ ಹಾಗಾಗಿತ್ತು. ಅದರಿಂದಾಗಿ ಎಷ್ಟೋ ಕಡೆ ಕೌಂಟರು ಅಫಿಡವಿಟ್ಸ್‌ಗಳನ್ನು ಹಾಕಲಿಕ್ಕೆ ಆಗಲಿಲ್ಲ. ಈಗ ಆರೀತಿ ಆಗುವುದಿಲ್ಲ. ಹೊಸ ನಿಯಮಾವಳಿಗಳು ಈಗ ಬಂದಿರುವುದರಿಂದ ಇದಕ್ಕಾಗಿ ಒಬ್ಬರು ಸ್ಪೆಷಲ್ ಗವರ್ನಮೆಂಟ್ ಪ್ಲೀಡರು ಕೂಡ ಇರುತ್ತಾರೆ. ಅವರೇ ಪ್ರತಿಯೊಂದು ಕೇಸ್‌ನಲ್ಲೂ ಸರಕಾರದ ಕಡೆಯಿಂದ ಅಫಿಡವಿಟ್ಸ್‌ಗಳನ್ನು ತರಿಸಿ ಕೋರ್ಟಿನಲ್ಲಿ ಹಾಕುತ್ತಿದ್ದಾರೆ; ಮತ್ತು ಅವರು ಬಹಳ ಚೆನ್ನಾಗಿ ಈಗ ಕೆಲಸಮಾಡುತ್ತಿದ್ದಾರೆ. ಇದು 1-6-1966ರಿಂದ ಸರಿಯಾಗಿ ನಡೆಯುತ್ತಿದೆ, ಇದಕ್ಕೆ ಹಿಂದೆ ಸ್ವಲ್ಪ ಹಾಗಾಗಿರಬಹುದು ಅಷ್ಟೇ.

ಇನ್ನು ರೆವ್ಯೂ ಸೆಲ್ ಇರಬೇಕು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀಕಂಠಯ್ಯನವರು ಇಲ್ಲಿ ಹೇಳಿದರು. ಸರ್ವೇ ಸಾಧಾರಣವಾಗಿ ಇದನ್ನು ಮಾಡುತ್ತಲೇ ಇದ್ದೇವೆ. ಈ ಸೂಚನೆಯೇನೋ ಒಳ್ಳೆಯದು. ಸಧ್ಯಕ್ಕೆ ಇದು ಅಸಾಧ್ಯವಾದ ವಿಚಾರ.

ಇನ್ನು ಸಿಟಿ ಕೋರ್ಟುಗಳಲ್ಲಿ ಬಹಳ ಕಷ್ಟವಾಗಿದೆ, ಎಷ್ಟೋ ಕೋರ್ಟುಗಳಲ್ಲಿ ಸರಿಯಾದ ಬಿಲ್ಡಿಂಗುಗಳಿಲ್ಲ ಕೂತುಕೊಳ್ಳುವುದಕ್ಕೆ ಜಾಗವಿಲ್ಲ ಎಂದು ವಿಶೇಷವಾಗಿ ಹೇಳಿದ್ದಾರೆ. ಅವರೇನು ಹೇಳಿದ್ದಾರೆ ಇದರಲ್ಲಿ ಸತ್ಯವಿದೆ. ಅವರು ಹೇಳಿದಂತೆ ಸರಕಾರದ ಕಡೆಯಿಂದ ಒಂದು ಸಾರಿ ಮಾನ್ಯ ಅರ್ಥ ಸಚಿವರು ಕೆಲವು ಕೋರ್ಟುಗಳನ್ನು ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರು ಬಂದು ಹೇಳಿದ ಮಾತುಗಳ ಬಗ್ಗೆ ಸರಕಾರದವರು ಕೂಡ ಯೋಚನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಶ್ರೀಕಂಠಯ್ಯ.—ಇಲ್ಲಿದ್ದ ಜಾಗವನ್ನು ಬೇರೆಯವರಿಗೆ ಕೊಟ್ಟಿರುವಾಗ ಉಳಿಯುವುದೇನಿದೆ ?

ಶ್ರೀ ಎಸ್. ಆರ್. ಕಂಠಿ.—ಇದರ ಬಗ್ಗೆ ನಿರ್ಣಯವಾಗಬೇಕಾಗಿದೆ. ನಿರ್ಣಯ ಆದ ನಂತರ ಜಾಗದ ವಿಚಾರ ಬರುತ್ತದೆ. ಎಲ್ಲಿ ಕಟ್ಟಿಸಬೇಕು, ಹೇಗೆ ಮಾಡಬೇಕು ಎನ್ನುವುದನ್ನು ಮುಂದೆ ನೋಡೋಣ. ಈಗ ಇದರ ಪ್ರಿನ್ಸಿಪಲ್‌ನ್ನು ಒಪ್ಪಿಕೊಂಡಿದ್ದೇವೆ. ಎಂದರೆ All the Courts in one compound ಎನ್ನುವುದನ್ನು ಒಪ್ಪಿದ್ದೇವೆ. ಇದನ್ನು ಯಾವ ರೀತಿಯಾಗಿ ಅಮಲಿನಲ್ಲಿ ತರಬಹುದು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಕಷ್ಟಗಳಿವೆ ಎಂದು ಗೊತ್ತಾಗಿದೆ. ಸರಕಾರದವರು ಏನು ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಫೈನಾನ್ಸ್ ಮಿನಿಸ್ಟರೂ ಕೂಡ ಹೋಗಿ ನೋಡಿ ಬಂದ ಮೇಲೆ ಇಲ್ಲಿರುವ ಬಿಲ್ಡಿಂಗುಗಳು ಸರಿಯಾಗಿಲ್ಲ ಇವನ್ನು ದುರಸ್ತು ಮಾಡಬೇಕು ಎಂದು ಗೊತ್ತಾದ ಮೇಲೆ ಸುಮಾರು 1,70,000 ರೂಪಾಯಿಗಳಷ್ಟು ಈಗಾಗಲೇ ಖರ್ಚು ಮಾಡಿ ಸರಿಪಡಿಸಲಾಗುತ್ತಿದೆ. ಇದು ಇಷ್ಟೇ ಸಾಲುವುದಿಲ್ಲ. ಇನ್ನೂ ಮಾಡಬೇಕಾಗಿದೆ ಅವನ್ನು ನೋಡಿ ಮಾಡಿಕೊಡಬೇಕಾಗಿದೆ. ಇದೇ ರೀತಿಯ ಕಷ್ಟಗಳು ಬೇರೆ ಕಡೆಗಳಲ್ಲಿಯೂ ಇವೆ. ಎಷ್ಟೋ ಕಡೆ ತಾಲ್ಲೂಕುಗಳಲ್ಲಿರುವ ಕೋರ್ಟುಗಳಲ್ಲಿ ಜಾಗವೇ ಇಲ್ಲದೆ ಸಣ್ಣ ಸಣ್ಣ ರೂಮುಗಳಲ್ಲಿ ಕೋರ್ಟುಗಳನ್ನು ಮಾಡುತ್ತಿದ್ದಾರೆ. ಇಂತಹ ಕೆಲವು ಸ್ಥಳಗಳನ್ನು ನಾನು ಈಚೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಈಚೆಗೆ ನಾನು ಚಾಮರಾಜನಗರಕ್ಕೆ ಹೋಗಿದ್ದಾಗ ಅಲ್ಲಿರುವ ಕೋರ್ಟನ್ನು ನೋಡಿದೆ. ಅದು ಬಹಳ ಸಣ್ಣದು. ಅಲ್ಲಿರುವ ಜನಗಳ ಕಷ್ಟವನ್ನೂ ನೋಡಿದ್ದೇನೆ. ಇದನ್ನೂ ಸರಿಪಡಿಸಬೇಕಾಗಿದೆ. ಆದರೆ ಇಂತಹ ಕೆಲಸಗಳನ್ನೆಲ್ಲಾ ಒಂದು ಫೇಸ್ಡ್ ಪ್ರೋಗ್ರಾಂ ಪ್ರಕಾರ ಮಾಡಬೇಕಾಗಿದೆ ಎಂದು ಇಂತಹ ಕೆಲಸಗಳನ್ನು ಸುಮಾರು 1964-65ರಿಂದಲೇ ಪ್ರಾರಂಭ ಮಾಡಿದೆ. ಈ ವರ್ಷದೊಳಗೆ ಹದಿನೈದು ಲಕ್ಷ ರೂಪಾಯಿಗಳಷ್ಟು ಖರ್ಚನ್ನು ಬಿಲ್ಡಿಂಗುಗಳಿಗಾಗಿ ಹಾಗೂ ರೆಸಿಡೆನ್ಷಿಯಲ್ ಕ್ವಾರ್ಟರ್ಸ್ ಜುಡಿಷಿಯಲ್ ಆಫೀಸರ್ಸ್‌ಗಳಿಗಾಗಿ ಮಾಡಲಾಗಿದೆ. ಇದನ್ನು ಒಂದು ರೀತಿಯಾದ ಫೇಸ್ಡ್ ಪ್ರೋಗ್ರಾಂನಂತೆ ತೆಗೆದುಕೊಳ್ಳುವ ರೀತಿಯಲ್ಲಿ ಮಾಡುತ್ತೇವೆ. ಹೈಕೋರ್ಟಿನವರೂ ಕೂಡ ಸರಕಾರಕ್ಕೆ 25 ಐಟಂಗಳಷ್ಟು ಕೆಲಸಗಳು ಆಗಬೇಕೆಂದು ಪಟ್ಟಿ ಕೊಟ್ಟಿದ್ದಾರೆ. ಈಗ ಇದನ್ನು ಪೂರ್ತಿ ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಕಡೆ ಇವುಗಳ ಕೆಲಸ ಪೂರ್ತಿಯಾಗಿದೆ. ಇನ್ನೂ ಕೆಲವು ಕಡೆ ಸ್ವಲ್ಪ ಸ್ವಲ್ಪವಾಗಿ ಮಾಡುತ್ತಿದ್ದಾರೆ. ಇದರ ಜೊತೆಗೆ ಹೈಕೋರ್ಟಿನವರು ಪುನಃ ಇನ್ನೂ ಕೆಲಸಗಳು ಆಗಬೇಕಾಗಿದೆ ಮತ್ತು ಇದು ತೀರ ಆವಶ್ಯಕವಾದವು

(ಶ್ರೀ ಎಸ್. ಆರ್. ಕಂಠಿ)

ಎಂದೂ ತಿಳಿಸಿರುವುದರಿಂದ ಅದನ್ನೂ ಕೂಡ ಮಾಡಲು ಸರಕಾರ ನಿರ್ಧರಿಸಿದೆ. ಈ ವರ್ಷದ ಬಜೆಟ್ಟಿನಲ್ಲೇ ಎಂಟು ಕೆಲಸಗಳನ್ನು ಹಾಕಿ ಎಂದು ಹೈಕೋರ್ಟಿನವರು ತಿಳಿಸಿದ್ದರು. ಆದರೆ ಸರಕಾರ ಐದು ಐಟಂಗಳನ್ನು ಈಗಾಗಲೇ ಸೇರಿಸಿದ್ದಾರೆ. ಮುಂದೆ ಇದನ್ನು ಜಾಸ್ತಿ ಮಾಡಬೇಕಾಗಿ ಬಂದರೆ ನೋಡೋಣ. ಪ್ರತಿಯೊಂದು ಕಡೆಯಲ್ಲೂ ಇರುವ ತಾಲ್ಲೂಕುಗಳಲ್ಲಿನ ಕೋರ್ಟುಗಳಲ್ಲಿ ಎಲ್ಲೆಲ್ಲಿ ಬಿಲ್ಡಿಂಗುಗಳು ಬೇಕು ಅವನ್ನು ಮಾಡಿಸಬೇಕು ಇಲ್ಲದಿದ್ದರೆ ಕಷ್ಟವಾಗುತ್ತದೆ. ಅದಕ್ಕಾಗಿ ಕೋರ್ಟುಗಳು ಸರಿಯಾದ ಸ್ಥಳದಲ್ಲಿರಬೇಕು. ಡಿಸ್ಟ್ರಿಕ್ಟ್ ಕೋರ್ಟುಗಳು ಚೆನ್ನಾಗಿರಬೇಕು. ಅವರಿಗೂ ಸರಿಯಾದ ಕಡೆಯಲ್ಲಿ ಕಟ್ಟಡಗಳನ್ನು ಕಟ್ಟಿಕೊಡಬೇಕು. ಇವನ್ನೆಲ್ಲಾ ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡಬೇಕಾಗುತ್ತದೆ. ಹೈಕೋರ್ಟಿನವರು ಯಾವಾಗಲೂ ಸರಕಾರಕ್ಕೆ ಸೂಚನೆಗಳನ್ನು ಕಳುಹಿಸಿ ಕೊಡುತ್ತಾರೆ. ಅವನ್ನು ಹೇಗೆ ಹೇಗೆ ಸಾಧ್ಯವೋ ಮತ್ತು ಎಷ್ಟು ದುಡ್ಡು ಸಿಗುತ್ತದೋ ಅವನ್ನು ನೋಡಿಕೊಂಡು ಯಾವ ರೀತಿ ಮಾಡಬಹುದೋ ಆ ರೀತಿ ಮಾಡಬೇಕೆಂದು ಇದ್ದೇವೆ. ಈಗಾಗಲೇ ಇಂತಹ ಕೆಲಸಗಳನ್ನು 1964 ರಿಂದಲೇ ಪ್ರಾರಂಭ ಮಾಡಿದ್ದೇವೆ. ಫರ್ನಿಚರುಗಳಿಗಾಗಿ 1966-67ರಲ್ಲಿ ಸುಮಾರು 94,085 ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಇದೂ ಸಾಲದು ಎನ್ನುವುದು ನಮಗೂ ಗೊತ್ತು. ಮುಂದೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಇನ್ನು ಲಾ ಕೋರ್ಟುಗಳಲ್ಲಿ ಪುಸ್ತಕಗಳನ್ನು ಕೊಡುವ ವಿಚಾರವಾಗಿ ಹೇಳಿದರು. ಲಾ ಬುಕ್‌ಗಳನ್ನು ಕೊಡುವುದು ಹೈಕೋರ್ಟಿನವರ ಕೆಲಸ. ಅವರು ಕಳುಹಿಸಿದ ನೋಟ್‌ನಲ್ಲಿ ಯಾವ ಯಾವ ರೆಫರೆನ್ಸ್ ಬುಕ್ಸ್ ಬೇಕೆಂದು ಕೇಳಿದರೆ ಅವನ್ನು ನಾವು ಕೊಟ್ಟೇ ಕೊಡುತ್ತೇವೆ ಎಂದು ಹೇಳಿದ್ದಾರೆ. ಯಾವುದಾದರೂ ಪುಸ್ತಕ ಅರ್ಜೆಂಟಾಗಿ ಬೇಕು ಎಂದು ಹೇಳಿದರೂ ಅದನ್ನು ಕೂಡಲೇ ತರಿಸಿ ಸಪ್ಲೈ ಮಾಡಲಾಗುತ್ತದೆ ಎಂದು ಹೇಳಿರುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೆಲವು ಕಡೆಗಳಲ್ಲಿ ತೊಂದರೆ ಇರಬಹುದು. ಎಲ್ಲೆಲ್ಲಿ ತೊಂದರೆಗಳಿವೆ ಎನ್ನುವುದನ್ನು ನನಗಾದರೂ ತಿಳಿಸಿ ಇಲ್ಲವೇ ಹೈಕೋರ್ಟಿನವರಿಗಾದರೂ ತಿಳಿಸಿ. ಅದನ್ನು ನಿವಾರಣೆ ಮಾಡುತ್ತೇವೆ.

ಶ್ರೀ ಎಚ್. ಶ್ರೀಕಂಠಯ್ಯ.—ಹೈಕೋರ್ಟಿನಲ್ಲಿರುವ ಲೈಬ್ರರಿಯಲ್ಲಿ ಬುಕ್ಕುಗಳಿರುವುದಕ್ಕಿಂತ ಬಾರ್ ಅಸೋಸಿಯೇಷನ್ನುಗಳೇ ಬುಕ್ಕುಗಳನ್ನು ಮೇಂಟೇನ್ ಮಾಡುವುದರ ಬಗ್ಗೆ ಸೂಚನೆ ಕೊಟ್ಟಿದೆ.

ಶ್ರೀ ಎಸ್. ಆರ್. ಕಂಠಿ.—ನಿಮ್ಮ ವಿಚಾರ ಈಗ ಇಲ್ಲಿ ಹೇಳಲಿಲ್ಲ. ಇದರ ಬಗ್ಗೆ ನಂತರ ಹೇಳುತ್ತೇನೆ. ಸರಕಾರ ಬಾರ್ ಅಸೋಸಿಯೇಷನ್ನುಗಳಿಗೆ ಪುಸ್ತಕಗಳನ್ನು ಗ್ರಾಂಟು ಮೂಲಕ ಕೊಡುತ್ತಿದ್ದಾರೆ. ಅದು ಯಾವ ರೀತಿ ಇದೆ ಎನ್ನುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. 1965-66ರಲ್ಲಿ ಬುಕ್‌ಗಳಿಗಾಗಿ ಬಾರ್ ಅಸೋಸಿಯೇಷನ್ನುಗಳಿಗೆ ರೂ. 1,20,000 ಕೊಡಲಾಗಿದೆ. 1966-67ರಲ್ಲಿ ರೂ. 1,25,000, 1967-68ರಲ್ಲಿ ರೂ. 1,25,000 ಕೊಡಲಾಗಿದೆ. ಪರ್ಚೇಸ್ ಆಫ್ ಬುಕ್ಸ್ ಫಾರ್ ಸಿವಿಲ್ ಅಂಡ್ ಸೆಷನ್ಸ್ ಕೋರ್ಟ್ಸ್ ಎಂದು ಇರುವುದರಲ್ಲಿ 1965-66ರಲ್ಲಿ ರೂ. 1,43,000, 1966-67ರಲ್ಲಿ ರೂ 1.35,000, 1967-68ರಲ್ಲಿ ರೂ. 1,60,000 ಕೊಡಲಾಗಿದೆ. ಇನ್ನು ಕ್ರಿಮಿನಲ್ ಕೋರ್ಟ್ಸ್‌ಗಳಿಗಾಗಿ 1965-66ರಲ್ಲಿ ರೂ. 54,700, 1966-67ರಲ್ಲಿ ರೂ. 45,000 ಮತ್ತು 1967-68ರಲ್ಲಿ ರೂ. 55,000 ಮತ್ತು ಹೈಕೋರ್ಟುಗಳ ಪುಸ್ತಕಗಳಿಗಾಗಿ 1965-66ರಲ್ಲಿ ರೂ. 63,700, 1966-67ರಲ್ಲಿ ರೂ. 54,000 ಮತ್ತು 1967-68ರಲ್ಲಿ ರೂ. 65,000 ಕೊಡಲಾಗಿದೆ ಮತ್ತು ಈ ಪ್ರಕಾರ ಪುಸ್ತಕಗಳಿಗಾಗಿ ಪ್ರತಿ ಸಾರಿಯೂ ಬಜೆಟ್ಟಿನಲ್ಲಿ ಹಣ ಒದಗಿಸಿಕೊಡಲಾಗಿದೆ.

ಶ್ರೀಮಾನ್ ಶ್ರೀಕಂಠಯ್ಯನವರು ಕೋರ್ಟುಗಳಲ್ಲಿ ಕಸ ಗುಡಿಸಲು ಸರಿಯಾದ ಸ್ಕ್ಯಾವೆಂಜರುಗಳೇ ಇಲ್ಲ ಇದರಿಂದ ಕಸ ತುಂಬಾ ಬಿದ್ದಿದೆ ಮತ್ತು ಕೋರ್ಟುಗಳು ಬಹಳ ಕೆಟ್ಟು ಹೋಗಿವೆ ಎನ್ನುವ ವಿಚಾರವನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ಈ ವಿಷಯ ನನಗೆ ಗೊತ್ತಿಲ್ಲ. ಇದನ್ನು ನೋಡಿಸುತ್ತೇನೆ. ಸರಕಾರದವರು ಇದರ ಬಗ್ಗೆ ಏನಾದರೂ ಸಹಾಯ ಮಾಡಬಹುದಾದರೆ ಅದನ್ನು ಮಾಡಲು ಪ್ರಯತ್ನ ಮಾಡೋಣ. ಇನ್ನು ಕೆಲವು ಕಡೆ ಇರುವ ಕೋರ್ಟುಗಳಲ್ಲಿ ಸ್ಯಾನಿಟರಿ ಅನುಕೂಲತೆಗಳಿಲ್ಲ, ಯೂರಿನಲ್ಸ್ ಇಲ್ಲ, ಲ್ಯಾವೆಟರಿಗಳಿಲ್ಲ ಎಂದು ಹೇಳಿದ್ದಾರೆ. ಇವು ಎಲ್ಲ ಕೋರ್ಟುಗಳಲ್ಲಿಯೂ ಇಲ್ಲ. ಕೆಲವು ಕಡೆಗಳಲ್ಲಿರುವ ಕೋರ್ಟುಗಳಲ್ಲಿ ಇರಬಹುದು. ಹೊಸದಾಗಿ ಕೋರ್ಟುಗಳನ್ನು ಮಾಡುವಾಗ ಇವನ್ನೆಲ್ಲಾ ಮಾಡಿಯೇ ಕೊಡಲಾಗುತ್ತಿದೆ. ಮೊನ್ನೆ ನಾನು ನಂಜನಗೂಡಿಗೆ ಹೋಗಿದ್ದಾಗ ನೋಡಿದೆ, ಅಲ್ಲಿನ ಕೋರ್ಟಿನವರು ತಮ್ಮಲ್ಲಿರುವ ಜಾಗವನ್ನೇ ವೈರ್ ಮೆಷ್ ಹಾಕಿಸಿಕೊಂಡರೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ನನಗೆ ತೋರಿಸಿದರು. ನಾನು ಅದಕ್ಕೆ ಒಪ್ಪಿಗೆ

ಕೊಟ್ಟು ಅಲ್ಲಿರುವ ಅಸಿಸ್ಟೆಂಟು ಇಂಜನಿಯರಿಯರಿಗೂ ಈಗಾಗಲೇ ಪತ್ರ ಬರೆದು ಇದನ್ನು ಬೇಗ ಮಾಡಿಸಬೇಕು ಎಂದು ತಿಳಿಸಿದ್ದೇನೆ; ಏಕೆಂದರೆ ಇದಕ್ಕಾಗಿ ಖರ್ಚು ಅಂತಹ ಹೆಚ್ಚೇನೂ ಬರುವುದಿಲ್ಲ ಎಂದು ಹೇಳಲಾಗಿದೆ. ಇದರ ಬಗ್ಗೆ ಕನ್‌ಫರ್‌ಮೇಷನ್ ಲೆಟರ್ ಕೂಡ ಆ ಕೋರ್ಟಿಗೆ ಬರೆದಿದ್ದೇನೆ. ಇದನ್ನು ಮಾಡಿಸಿದರೆ ಅಲ್ಲೇ ಒಂದು ಬಾತ್ ರೂಂ ಕೂಡ ಮಾಡಿಸಬಹುದು ಎಂದೂ ಸಲಹೆ ಕೊಟ್ಟು ಬಂದಿದ್ದೇನೆ. ಇವನ್ನೆಲ್ಲಾ ವಿಚಾರ ಮಾಡಿ ಪ್ರಯಾರಿಟಿ ಮೇಲೆ ಯಾವ ಕೆಲಸಗಳು ಆಗಬೇಕು ಎಂದು ಹೈಕೋರ್ಟಿನವರು ಒಂದು ನೋಟನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಈಗಾಗಲೇ ಮುಗಿಸಬೇಕೆಂದೂ ಸರಕಾರ ಯೋಚನೆ ಮಾಡುತ್ತಿದೆ.

ಲಾ ಕೋರ್ಸನ್ನು ಮೂರು ಮೂರು ಏಕೆ ಮಾಡಬೇಕೆಂದು ಹೇಳಿದರು. ಲಾ ಕಮಿಷನ್ನಿನವರು ಮೂರು ವರ್ಷ ಕೋರ್ಸು ಇರಬೇಕೆಂದು ಹೇಳಿದ್ದಾರೆ. ಇದನ್ನು ಯೂನಿವರ್ಸಿಟಿ ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ನೋಡಬೇಕು. ಅವರಿಗೆ ಹೇಳಿದರೆ ಇದನ್ನು ವಿಚಾರ ಮಾಡುತ್ತಾರೆಂದು ನಾನು ಇಲ್ಲಿ ಹೇಳಬಹುದು.

ಶ್ರೀ ಎಸ್. ಆರ್. ಕಂಠಿ.—ಶ್ರೀಮಾನ್ ವೀರಪ್ಪಗೌಡರು ನ್ಯಾಯಾಲಯಗಳು ಜಾಸ್ತಿಯಾಗಬೇಕೆಂದು ಹೇಳಿದ್ದಾರೆ. ಸರ್ಕಾರದ ಒಂದು ನಿಲುವು ಹೀಗೆ ಇದೆ, ಏನೆಂದರೆ:

Policy of establishment of Courts:—Sections 4, 6 and 7 of the Mysore Civil Courts Act 1964 relates to the establishment of District Courts, Civil Judges Courts and Munsiffs Courts respectively. Normally they should establish a District Court for each District as also a Civil Court for each District, but the Government is empowered to establish a District Court or Civil Court for more than one District or a Civil Judge s Court for a part of a District.

ಈಗ ಸರ್ವೇಸಾಧಾರಣವಾಗಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಡಿಸ್ಟ್ರಿಕ್ಟ್ ಕೋರ್ಟು ಇದೆ, ಕೆಲವು ಕಡೆ ಸಿವಿಲ್ ಜಡ್ಜಸ್ ಕೋರ್ಟು ಒಂದೊಂದು ಜಿಲ್ಲೆಯಲ್ಲಿ ಎರಡು ಇವೆ, ಒಂದೊಂದು ಜಿಲ್ಲೆಯಲ್ಲಿ ಒಂದು ಇದೆ, ಒಂದೊಂದು ಜಿಲ್ಲೆಯಲ್ಲಿ ಮೂರು ಇವೆ, ಹೀಗೆ ನಾನಾ ತರಹ ಇದೆ, ಎಲ್ಲಿ ಅವಶ್ಯಕತೆ ಇದೆ ಅಂತಹ ಕಡೆ ಸಿವಿಲ್ ಜಡ್ಜಸ್ ಕೋರ್ಟನ್ನು ಕೊಟ್ಟು

> "Courts are established in consultation with the High Court taking into consideration the cases arising in the area and the convenienc of the local people."

ಮುನ್ಸೀಫ್ ಕೋರ್ಟ್‌ಗಳನ್ನೂ ಕೂಡ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡುತ್ತಾ ಇದ್ದಾರೆ.

> "There shall be in each District as many number of Munsiff Courts as may be fixed by the State Government in consultation with the High Court, each Munsiff Court shall be presided over by a Munsiff."

ಎಂದು ಹೇಳಿ ಸಿವಿಲ್ ಜಡ್ಜಸ್ ಕೋರ್ಟ್ ಬಗ್ಗೆ ಆಕ್ಟ್‌ನಲ್ಲಿ ಇದೆ, ಅದನ್ನು ಸರ್ಕಾರದವರು ಇಂಪ್ಲಿಮೆಂಟ್ ಮಾಡುತ್ತಾ ಇದ್ದಾರೆ.

ಅನೇಕ ಕಡೆಗಳಲ್ಲಿ ಕೋರ್ಟ್‌ಗಳು ಬೇಕು ಎಂದು ಹೇಳಿದ್ದಾರೆ, ಅದನ್ನೆಲ್ಲಾ ಸರ್ಕಾರದವರು ಪರಿಶೀಲಿಸುತ್ತಾರೆ. ಶ್ರೀಮಾನ್ ವೀರಪ್ಪಗೌಡರು ಹೇಳಿದ ವಿಚಾರ ಮುಂದೆ ವಿಚಾರ ಮಾಡಿ ನೋಡೋಣ.

ಇನ್ನು ಲೀಗಲ್ ಏಡ್‌ನ ರಿಯಾಯಿತಿ ಬೇಕು ಎಂದು ಹೇಳಿದರು, ಅದರ ವಿಚಾರದಲ್ಲಿ ಹೇಳುವುದಾದರೆ, ಗವರ್ನ್ಮೆಂಟ್ ಆಫ್ ಇಂಡಿಯಾದವರು ಒಂದು ಸ್ಕೀಂ ಕಳುಹಿಸಿದ್ದಾರೆ, ಅದನ್ನು ಪ್ರತಿಯೊಂದು ಕಡೆಗೂ ಸರ್ಕ್ಯುಲೇಟ್ ಮಾಡಿದ್ದೇವೆ. ಎಲ್ಲಾ ಕಡೆಯಿಂದರೂ ಉತ್ತರ ಬಂದಿಲ್ಲ, ಹೈಕೋರ್ಟಿನವರು ಎಲ್ಲಾ ಕಡೆಯಿಂದಲೂ ಉತ್ತರ ತರಿಸುತ್ತಾ ಇದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಯಾವುದನ್ನೂ ನಿಶ್ಚಿತವಾಗಿ ನಿರ್ಣಯ ಮಾಡಿಲ್ಲ.

(ಶ್ರೀ ಎಸ್. ಆರ್. ಕಂಠಿ)

ಬಡ್ಜೆಟ್‌ನಲ್ಲಿ ಪ್ರತಿವರ್ಷವೂ ಏಡ್‌ಗೆ ದುಡ್ಡನ್ನು ಹಾಕುತ್ತಾ ಇದ್ದೇವೆ, ಅದು ಈ ರೀತಿ ಇದೆ :—

1963–64 ರಲ್ಲಿ 50,000 ರೂಪಾಯಿ
1964–65 ರಲ್ಲಿ 1,00,000 ರೂಪಾಯಿ
1965–66 ರಲ್ಲಿ 50,000 ರೂಪಾಯಿ
1966–67 ರಲ್ಲಿ 50,000 ರೂಪಾಯಿ
1967–68 ರಲ್ಲಿ 50,000 ರೂಪಾಯಿ

ರೆಸಿಡೆನ್‌ಷಿಯಲ್ ಕ್ವಾರ್ಟರ್ಸ್ ಫಾರ್ ಜ್ಯುಡಿಷಿಯಲ್ ಆಫೀಸರ್ಸ್, ಅದನ್ನೂ ಕೂಡ ಫೇಸ್ಡ್ ಪ್ರೋಗ್ರಾಂನಲ್ಲಿ ತೆಗೆದುಕೊಳ್ಳುತ್ತಾರೆ.

ಹಡಗಲಿಯಲ್ಲಿ ಕೋರ್ಟ್ ಬಿಲ್ಡಿಂಗ್ ಇಲ್ಲ 3–4 ವರ್ಷ ಆಯಿತು ಎಂದು ಹೇಳಿದರು, ಅದನ್ನು ಈಗಲೇ ಮಾಡುವುದಕ್ಕೆ ಆಗುವುದಿಲ್ಲ ಕೆಲವು ಕಾಲ ತಡವಾಗುತ್ತದೆ.

ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ನ್ನು ನೇಮಕ ಮಾಡುವ ವಿಚಾರ ಹೇಳಿದರು, ಲಾ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುವಂತಹ, ಕೆಲವು ಪರೀಕ್ಷೆಗಳನ್ನು ಪಾಸ್ ಮಾಡಿದಂತಹವರು ಕೆಲವರು, ಹೈಕೋರ್ಟ್‌ನಲ್ಲಿ ಅಡ್ವೋಕೇಟ್ ಜನರಲ್ ಅವರ ಆಫೀಸಿನಲ್ಲಿದ್ದು ಕೆಲವು ಪರೀಕ್ಷೆಗಳನ್ನು ಪಾಸ್ ಮಾಡಿ ಕೆಲಸ ಮಾಡುವಂತಹವರು ಕೆಲವರು, ಅವರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಆಗಿ ನೇಮಕಮಾಡಿ ಎಂದು ಸಲಹೆ ಮಾಡಿದ್ದಾರೆ, ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏಕೆಂದರೆ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಆಗಿ ನೇಮಕ ಮಾಡಬೇಕಾದರೆ ಕನಿಷ್ಟ ಐದು ವರ್ಷವಾದರೂ ಅಡ್ವೋಕೇಟ್ ಆಗಿ ಕೆಲಸ ಮಾಡಿರಬೇಕು, ಹಾಗೆ ಇಲ್ಲದೇ ಇದ್ದರೆ ನೇಮಕಮಾಡುವುದಕ್ಕಾಗುವುದಿಲ್ಲ. ಆ ರೀತಿ ಪ್ರಾಕ್ಟೀಸ್ ಮಾಡದೇ ಇದ್ದರೆ ನೇಮಕ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಈ ಮನೆಯ ಗಮನಕ್ಕೆ ತರಬೇಕಾಗಿದೆ. ಅದಕ್ಕೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದಾರೆ, ಅದರ ಪ್ರಕಾರ ಮಾಡಬೇಕಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.

ಶ್ರೀ ಎಸ್. ಎಸ್. ಅರಕೇರಿ.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟಂತೆ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಒಂದು ಪರ್ಸೆಂಟ್ ಕೂಡ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ ಇದನ್ನು ಪರಿಶೀಲನೆ ಮಾಡುತ್ತೀರಾ ?

Sri S. R. KANTHI.—It is a question of law; we will get it examined.

ಅಪಾಯಿಂಟ್‌ಮೆಂಟ್ ಆಫ್ ಲಾ ಆಫೀಸರ್ಸ್ ವಿಚಾರವಾಗಿ ಕೆಲವರು ಮಾತನಾಡಿದ್ದಾರೆ. ಅವರನ್ನು ನೇಮಕ ಮಾಡುವ ಕಾಲಕ್ಕೆ ಡೆಪ್ಯೂಟಿ ಕಮೀಷನರು ಅರ್ಜಿಗಳನ್ನು ಕರೆಸುತ್ತಾರೆ, ಅರ್ಜಿಗಳು ಬಂದಮೇಲೆ ತಮಗೆ ಯಾರು ಯೋಗ್ಯರು ಎಂದು ಅನಿಸುತ್ತದೆ ಅವರ ಒಂದು ಪಟ್ಟಿಯನ್ನು ಅಥವಾ ಪ್ಯಾನಲ್‌ನ್ನು ಮಾಡುತ್ತಾರೆ ಅದನ್ನು ಡಿಸ್ಟ್ರಿಕ್ಟ್ ಜಡ್ಜ್‌ರವರಿಗೆ ಕಳುಹಿಸುತ್ತಾರೆ, ಅವರು ಅದನ್ನು ಒಪ್ಪಬಹುದು ಅಥವಾ ಬೇರೆ ಒಂದು ಪ್ಯಾನಲ್ ಮಾಡಬಹುದು. ಡೆಪ್ಯೂಟಿ ಕಮೀಷನರ ಪ್ಯಾನಲ್ ಮತ್ತು ಡಿಸ್ಟ್ರಿಕ್ಟ್ ಜಡ್ಜ್‌ರವರ ಪ್ಯಾನಲ್‌ನಲ್ಲಿ ಇರತಕ್ಕ ಎಲ್ಲರ ಹೆಸರೂ ಸಹ ಸರ್ಕಾರದವರಿಗೆ ಬರುತ್ತದೆ. ಡೆಪ್ಯೂಟಿ ಕಮೀಷನರು ಮತ್ತು ಡಿಸ್ಟ್ರಿಕ್ಟ್ ಜಡ್ಜ್ ಇಬ್ಬರೂ ಕೂಡಿ ಯಾವುದನ್ನು ರೆಕಮಂಡ್ ಮಾಡಿಲ್ಲ ಅದನ್ನು ಒಪ್ಪಿಕೊಳ್ಳುವುದಿಲ್ಲ. ಒಬ್ಬರಾದರೂ ರೆಕಮೆಂಡ್ ಮಾಡಿರಬೇಕು, ಅದರಲ್ಲೂ ಕೂಡ ಡಿಸ್ಟ್ರಿಕ್ಟ್ ಜಡ್ಜ್‌ರವರು ಯಾರನ್ನು ರೆಕಮಂಡ್ ಮಾಡಿರುತ್ತಾರೆ ಅವರನ್ನು ತೆಗೆದುಕೊಳ್ಳುವುದಕ್ಕೆ ಸಲಹೆ ಮಾಡುತ್ತೇವೆಯೇ ಹೊರತು......

Sri S. R. BOMMAI.—Is there a case in which appointment is made where the District Judge has not recommended and the Deputy Commissioner has recommeded ?

ಶ್ರೀ ಎಚ್. ಸಿದ್ದವೀರಪ್ಪ.—ಡಿ. ಸಿ. ಅವರು ರೆಕಮೆಂಡ್ ಮಾಡಿರುವುದೇ ನಾವು ಮಾಡಿರುವುದು ಅದು ಸರಿಯಾಗಿದೆ ಎಂದು ಒಪ್ಪಿಕೊಂಡು ಬಿಡಿ ಎಂದು ನಾವು ಏನೂ ಹೇಳುವುದೇ ಇಲ್ಲ. The point raised by the opposition is conceded that appointments have not been made properly.

**Mr. SPEAKER.**—The suggestion made by him may be considered.

**Sri S. R. KANTHI.**—I assure the House that so far as the appointments are concerned, we have been picking out firstly from the list of the Deputy Commissioner and we give first preference to the list of the District Judge. We have not appointed anybody who has not been recommended by the District Judge.

**Sri AZEEZ SAIT.**—In case you have done it without the recommendation of the District Judge or the Deputy Commissioner, are you going to withdraw them ?

ಶ್ರೀ ಎಚ್. ಸಿದ್ಧವೀರಪ್ಪ.—ಆ ಲಿಸ್ಟ್ ಇಟ್ಟುಬಿಡಿ, ಒಂದು ವೇಳೆ ಹಾಗೇನಾದರೂ ನೇಮಕ ಮಾಡಿದ್ದರೆ ಅವರನ್ನು ಮನೆಗೆ ಕಳುಹಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಆಗಿಯೇ ಇಲ್ಲ ಬಿಡಿ. ತಾವು ಹೇಳುತ್ತಿರುವುದು ಹೈಪೊಥಿಟಿಕಲ್ ಆಗುತ್ತದೆ. If the hon'ble members feel that in a certain cases we have not appointed a person who has not been recommended by the District Judge, let them give the name, and I will bring the file and show it to you.

ಶ್ರೀ ಅಜೀಜ್ ಸೇಟ್.—ವಿತ್‌ಡ್ರಾ ಮಾಡುತ್ತೇವೆ ಎಂದು ಅವರ ಬಾಯಲ್ಲಿ ಬರಲಿಲ್ಲ, ಫೈಲನ್ನು ತಂದು ತೋರಿಸುತ್ತೇನೆ ಎಂದು ಹೇಳುತ್ತಾರೆ ಅಷ್ಟೆ.

**Mr. SPEAKER.**—All that he said was that he will show the file, not the recommendation ; it is confidential.

6-30 P.M.

ಶ್ರೀ ಎಸ್. ಆರ್. ಕಂಠಿ.—ಡಿಸ್ಟ್ರಿಕ್ಟ್ ಜಡ್ಜರು ಯಾರನ್ನು ರೆಕಮಂಡ್ ಮಾಡಿಲ್ಲವೋ ಅಂಥವರನ್ನು ನಾವು ಕೆಲಸಕ್ಕೆ ನೇಮಕ ಮಾಡಿಕೊಂಡಿಲ್ಲ ಎಂದು ಹೇಳುತ್ತೇನೆ. ಅಷ್ಟೇ ಅಲ್ಲ ಅದಕ್ಕೆ ಸಂಬಂಧಪಟ್ಟ ಫೈಲನ್ನು ಬೇಕಾದರೆ ತಂದು ನಾನು ಅಧ್ಯಕ್ಷರಿಗೆ ಕೊಡುತ್ತೇನೆ. ಅವರು ನೋಡಲಿ.

ಇನ್ನು ಸಿದ್ದಯ್ಯ ಕಾಶಿಮಠ್ ಅವರು ಹೈಕೋರ್ಟಿನವರು ಸ್ಟ್ರಿಕ್ಚರ್ ಪಾಸ್ ಮಾಡಿರತಕ್ಕ ವಿಚಾರವನ್ನು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಇನ್ನು ಇಲ್ಲಿ ಕೆಲವರು ಆ ಹುಬ್ಬಳ್ಳಿಗೆ ಕೋರ್ಟನ್ನು ಷಿಫ್ಟ್ ಮಾಡುತ್ತಾರೆಂಬ ಭಯವನ್ನು ಇಟ್ಟುಕೊಂಡಿರುವಂತೆ ಕಾಣಬರುತ್ತಿದೆ. ಧಾರ್ವಾಡ, ಗದಗ್ ಮತ್ತು ಹಾವೇರಿಗಳಲ್ಲಿ ಕೋರ್ಟ್‌ಗಳನ್ನು ಬಲಪಡಿಸತಕ್ಕ ವಿಚಾರ ನಮ್ಮ ಮುಂದಿರುವುದರಿಂದ ಸದ್ಯದಲ್ಲಿ ಆ ಹುಬ್ಬಳಿಗೆ ಕೋರ್ಟನ್ನು ವರ್ಗಾಯಿಸುವ ವಿಚಾರ ನಮ್ಮಲ್ಲಿಲ್ಲ ಎಂದು ತಿಳಿಸಲಿಚ್ಛಿಸುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಲ್ಯಾಂಡ್ ರೀಫಾರಂಸ್ ರೂಲ್ಸಿನ ವಿಚಾರ ಕೇಳಿದ್ದಾರೆ. ಅದನ್ನು ರೆವಿನ್ಯೂ ಮಂತ್ರಿಗಳಾದ ಶ್ರೀ ರಾಚಯ್ಯನವರು ಮಾಡುತ್ತಾರೆ ಎಂದು ತಿಳಿಸಲಿಚ್ಛಿಸುತ್ತೇನೆ.

ಇನು ಬಾರ್ ಅಸೋಸಿಯೇಷನ್‌ಗಳಿಗೆ ಎಷ್ಟೆಷ್ಟು ಹಣವನ್ನು ಪುಸ್ತಕಗಳಿಗೆ ಕೊಡಲಾಗಿದೆ ಎಂಬುದನ್ನು ತಿಳಿಸಲು ಒಂದು ಪಟ್ಟಿಯನ್ನೇ ಟೇಬಲ್‌ಮೇಲೆ ಇಡುತ್ತೇನೆ.

ಇಷ್ಟೆಲ್ಲಾ ಹೇಳಿದ ನಂತರ ನಾನು ಮತ್ತೊಮ್ಮೆ ಮಾನ್ಯ ಸದಸ್ಯರೆಲ್ಲರಿಗೂ ನನ್ನ ವಂದನೆಗಳನ್ನರ್ಪಿಸಿ ಈ ಡಿಮ್ಯಾಂಡಿಗೆ ಸರ್ವರೂ ಒಮ್ಮತದ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**Mr. SPEAKER.**—It may be placed on the Table. The copy will be left in the Library. The members may go through it. I will now put the Demands to vote.

DEMAND No. 4.

Mr. SPEAKER.—The question is :

"That a sum not exceeding Rs. 20,51,000 be granted to the Government to defray the charges which will come in course of payment during the financial year for the period ending 31st Day of March 1968 in respect of 'Taxes on Vehicles'"

*The motion was adopted.*

DEMAND No. 9

Mr. SPEAKER.—The question is :

"That a sum not exceeding Rs. 42 08,000 be granted to the Government to defray the charges which will come in course of payment during the financial year for the period ending 31st day of March 1968, in respect of 'Parliament, State, Union Territory Legislature'."

*The motion was adopted.*

DEMAND. No. 11.

Mr. SPEAKER.—The question is :

"That a sum not exceeding Rs. 1,27,51,000 be granted to the Government to defray the charges will come in course of payment during the financial year for the period ending 31st day of March 1968, in respect of 'Administration of Justice'."

*The Motion was adopted.*

Mr. SPEAKER.—The House will now stand adjourned to meet tomorrow at 1 P.M.

---

*The House adjourned at Thirty-Five minutes past Six of the Clock to meet again at One of the Clock on Thursday, the 20th July 1967.*

---